ದುಡಿಯುವ ಮಹಿಳೆ

ಕೃಷಿ ಕಾರ್ಮಿಕ ಮಹಿಳೆ

ಒಂದು ಸಮಾಜೋ-ಆರ್ಥಿಕ ಅಧ್ಯಯನ

ಅಭಿವೃದ್ಧಿ ಅಧ್ಯಯನ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ.

ೂರ

ಮಾರ್ಗದರ್ಶಕರು:
ಡಾ: ಸಿ.ಆರ್.ಗುಡಸಿ
ಅಭಿವೃದ್ಧಿ ಅಧ್ಯಯನ ವಿಭಾಗ
ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ

ಬಿ.ಆರ್.ದರೂರ ಸಂಶೋಧನಾ ಕೇಂದ್ರ
ಹಾರೂಗೇರಿ-591 220
2009

ದುಡಿಯುವ ಮಹಿಳೆ
ಕೃಷಿ ಕಾರ್ಮಿಕ ಮಹಿಳೆ
ಒಂದು ಸಮಾಜೋ-ಆರ್ಥಿಕ ಅಧ್ಯಯನ

ಅಭಿವೃದ್ಧಿ ಅಧ್ಯಯನ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ.

ಸಂಶೋಧಕರು:
ಭಾರತಿ ಕೆಂಚಪ್ಪ ಬಿಜಾಪೂರ

ಮಾರ್ಗದರ್ಶಕರು:
ಡಾ: ಸಿ.ಆರ್.ಗುಡಸಿ
ಅಭಿವೃದ್ಧಿ ಅಧ್ಯಯನ ವಿಭಾಗ
ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ

ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರ
ಹಾರೂಗೇರಿ-591 220
2009

ಘೋಷಣಾ ಪತ್ರ

ದುಡಿಯುವ ಮಹಿಳೆ: ಕೃಷಿ ಕಾರ್ಮಿಕ ಮಹಿಳೆ, ಒಂದು ಸಮಾಜೋ-ಆರ್ಥಿಕ ಅಧ್ಯಯನ, ಎಂಬ ನಿಬಂಧವನ್ನು ಡಾ:ಸಿ.ಆರ್.ಗುಡಸಿ. ಅವರ ಮಾರ್ಗದರ್ಶನದಲ್ಲಿ ನಾನು ಸಿದ್ದಪಡಿಸಿದ್ದೇನೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ, ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ, ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ ಮತ್ತು ಈ ಮೊದಲು ಇಡಿಯಾಗಿ ಇಲ್ಲವೆ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

Bharati Bijapur

ಭಾರತಿ ಕೆಂಚಪ್ಪ ಬಿಜಾಪೂರ

ಎಂ.ಫಿಲ್ ವಿದ್ಯಾರ್ಥಿನಿ,
ಶ್ರೀ ಬಿ. ಆರ್. ದರೂರ,
ಸಂಶೋಧನಾ ಕೇಂದ್ರ ಹಾರೂಗೇರಿ,

ಸ್ಥಳ : ಹಾರೂಗೇರಿ.
ದಿನಾಂಕ: 29-09-09

ದೃಢೀಕರಣ ಪತ್ರ

ಭಾರತಿ. ಕೆಂಚಪ್ಪ. ಬಿಜಾಪೂರ ಇವರು **ದುಡಿಯುವ ಮಹಿಳೆ: ಕೃಷಿ ಕಾರ್ಮಿಕ ಮಹಿಳೆ, ಒಂದು ಸಮಾಜೋ–ಆರ್ಥಿಕ ಅಧ್ಯಯನ,** ಎಂಬ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ದಿ ಅಧ್ಯಯನ ವಿಭಾಗಕ್ಕೆ, ಎಂ.ಫಿಲ್ ಪದವಿಗಾಗಿ, ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ. ಈ ಮೊದಲು ಎಲ್ಲಿಯೂ ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ :29–09–2009

ಮಾರ್ಗದರ್ಶಕರು

ಡಾ:ಸಿ.ಆರ್.ಗುಡಸಿ,
ಶ್ರೀ ಬಿ. ಆರ್. ದರೂರ
ಸಂಶೋಧನಾ ಕೇಂದ್ರ, ಹಾರೂಗೇರಿ

ಕೃತಜ್ಞತೆ

ಈ ನಿಬಂಧವನ್ನು ಸಂಶೋಧನೆ ಮಾಡಿ ಸಿದ್ಧಪಡಿಸುವಲ್ಲಿ ಮಾರ್ಗದರ್ಶಕರಾಗಿ, ಮುಕ್ತ ಮನಸ್ಸಿನಿಂದ ಸೂಕ್ತವಾದ ಸಲಹೆ ಸೂಚನೆಗಳನ್ನು ನೀಡಿರುವಂತಹ **ಡಾ: ಸಿ. ಆರ್. ಗುಡಸಿ, ಮುಖ್ಯಸ್ಥರು** ಅಭಿವೃದ್ಧಿ ಅಧ್ಯಯನ ವಿಭಾಗ, ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ ಇವರಿಗೆ ಅತ್ಯಂತ ಚಿರಋಣಿಯಾಗಿದ್ದೇನೆ.

ಈ ನಿಬಂಧವನ್ನು ಕ್ರೋಢೀಕರಿಸುವಲ್ಲಿ ಸಲಹೆ ಸೂಚನೆಗಳನ್ನು ನೀಡಿದ ನನ್ನ ಗುರುಗಳಾದ **ಡಾ : ವಿನೀತಾ. ಪೈ, ಪ್ರಾಧ್ಯಾಪಕರು, ಸಮಾಜ ಕಾರ್ಯ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ** ಹಾಗೂ ಡಾ : ವ್ಹಿ. ಎಸ್. ಮಾಳಿ, ನಿರ್ದೇಶಕರು, ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ ಹಾರೂಗೇರಿ ಇವರಿಗೂ ನನ್ನ ಅನಂತ ಕೃತಜ್ಞತೆಗಳು.

ಎಂ. ಫಿಲ್ ಅಧ್ಯಯನ ಮಾಡಲು ಪ್ರೇರೇಪಣೆ ನೀಡಿ, ಸಂಶೋಧನೆಯತ್ತ ಆಸಕ್ತಿ ಮೂಡುವಂತೆ ಮಾಡಿದ ತಂದೆ ಸ್ವರೂಪರಾಗಿದ್ದ **ದಿ. ಶ್ರೀ. ವ್ಹಿ. ಎಸ್. ಮನವಾಡೆ,** ಸಹಕಾರ್ಯದರ್ಶಿಗಳು ವಿಮೋಚನಾ ಸಂಘ, ಅಥಣಿ ಇವರಿಗೆ, ಉನ್ನತ ಮಟ್ಟದ ಕನಸುಗಳನ್ನು ಸಾಕಾರಗೊಳಿಸಲು ಸತತ ಓದುವದು ಅವಶ್ಯ ಎಂದು ಅಧ್ಯಯನಕ್ಕೆ ಅನುಮತಿ ನೀಡಿ ಆಶೀರ್ವದಿಸಿದ ವಿಮೋಚನಾ ಸಂಸ್ಥೆಯ ಅಧ್ಯಕ್ಷರಾದ **ಶ್ರೀ ಬಿ. ಎಲ್. ಪಾಟೀಲ ಕಾಕಾ** ಇವರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು.

ನನ್ನ ಸಂಶೋಧನಾ ಚಟುವಟಿಕೆ ಪ್ರಾರಂಭವಾಗಬೇಕು, ಎಂದು ತುಂಬು ಹೃದಯದಿಂದ ಹರಸಿ, ಹೆಜ್ಜೆ ಹೆಜ್ಜೆಗೂ ಪ್ರೋತ್ಸಾಹ ನೀಡಿ ಅಧ್ಯಯನದ ಶುಲ್ಕವನ್ನು ಭರಿಸಿದ **ಸ್ನೇಹಿತೆ – ಜ್ಯುಲಿಯಾ ಕ್ಯುಮ್ಸ್, ಫೋಟೋ ಜರ್ನಲಿಸ್ಟ್, ಅಮೇರಿಕಾ** ಇವರಿಗೆ ನನ್ನ ಅನಂತ ಕೃತಜ್ಞತೆಗಳು.

ನನ್ನ ಇಡೀ ಶಿಕ್ಷಣಕ್ಕೆ ಬೆನ್ನೆಲುಬಾಗಿ ನಿಂತು ಪೋಷಿಸಿ ಬೆಳೆಸಿದ ನನ್ನ ಸೋದರಮಾವ **ಶ್ರೀ ಬಿ. ಎನ್. ಪಾಟೀಲ** ಮತ್ತು ಅವರ **ಶ್ರೀಮತಿ ಸೌ. ಕಸ್ತೂರಿ ಬಿ. ಪಾಟೀಲ**, ಹೊಸನೀರಲಗಿ ತಾ: ಸವಣೂರ ಹಾಗೂ ಚಿಕ್ಕಪ್ಪ **ಶ್ರೀ ಜಿ. ಹೆಚ್. ಹರವಿ** ಮತ್ತು ಚಿಕ್ಕಮ್ಮ **ಸೌ. ರೇಣುಕಾ. ಜಿ. ಹರವಿ**, ಬಂಕಾಪೂರ ಇವರಿಗೂ ನಾನು ಚಿರಋಣಿಯಾಗಿದ್ದೇನೆ.

ನನ್ನ ಈ ಅಧ್ಯಯನಕ್ಕೆ ಪ್ರೋತ್ಸಾಹಿಸಿ ನನ್ನ ಹತ್ತು ಹಲವು ಜವಾಬ್ದಾರಿಗಳನ್ನು ತಾವು ಪೂರೈಸಿ ಸಂಪ್ರೀತ ಮನಸ್ಸಿನಿಂದ ಬೆಂಬಲ ನೀಡಿದ ನನ್ನ ಪತಿ **ಶ್ರೀ. ಮಂಜುನಾಥ. ಡಿ. ಬುಜಣ್ಣವರ** ಮತ್ತು ಅತ್ತೆ **ಶ್ರೀಮತಿ. ವಿಮಲಾ. ಡಿ. ಬುಜಣ್ಣವರ** ಇವರಿಗೂ ನನ್ನ ಹೃದಯ ಪೂರ್ವಕ ಕೃತಜ್ಞತೆಗಳು.

ನನ್ನ ಉನ್ನತ ವ್ಯಾಸಂಗದ ಹಿರಿಯಾಸೆ ಹೊಂದಿದ ಎರಡು ಮುಗ್ಧ ಜೀವಗಳು ನನ್ನ ಅವ್ವ **ಶ್ರೀಮತಿ ಅಕ್ಕಮಾಹಾದೇವಿ** ಮತ್ತು ನನ್ನ ಚಿರಂಜೀವಿ **ಅಮೇಯ.** ಅವರಿಬ್ಬರಿಗೂ ನನ್ನ ತುಂಬು ಹೃದಯದ ಅನಂತ ಅನಂತ ಕೃತಜ್ಞತೆಗಳು.

ಈ ನಿಬಂಧದ ಮಾಹಿತಿ ಕ್ರೋಢೀಕರಣದಲ್ಲಿ ಸಹಾಯ ಮಾಡಿದ ಸ್ನೇಹಿತೆ **ಶ್ರೀಮತಿ. ದಾನಮ್ಮ ಝುಳಕಿ** ಇವರಿಗೂ ಸಮೀಕ್ಷೆಯ ಸಂದರ್ಭದಲ್ಲಿ ಸಹಾಯ ಮಾಡಿದ ಸಹೋದರ **ಸುರೇಶ. ಝುರೆ** ಇವರಿಗೂ, ಬೆರಳಚ್ಚು ಮಾಡುವಲ್ಲಿ ಸಹಾಯ ಮಾಡಿದ ಸಹೋದರಿ **ಅಕ್ಕಮ್ಮ. ಸಮಗೊಂಡ** ಇವರಿಗೂ, ಅಧ್ಯಯನ ಯಶಸ್ವಿಯಾಗಲು ಮಾಹಿತಿ ನೀಡಿದ ಎಲ್ಲ ಕೃಷಿ ಕಾರ್ಮಿಕ ತಾಯಂದಿರಿಗೂ ಹಾಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅಧ್ಯಯನಕ್ಕೆ ಸಹಕರಿಸಿದ ನನ್ನ ಎಲ್ಲ ಆತ್ಮೀಯರಿಗೂ, ಸ್ನೇಹಿತರಿಗೂ ತುಂಬು ಹೃದಯದ ಕೃತಜ್ಞತೆಗಳು.

ಈ ಸಂಶೋಧನಾ ನಿಬಂಧವನ್ನು ಆಕರ್ಷಕವಾಗಿ ಮುದ್ರಿಸಿ ಮತ್ತು ಅಂದವಾಗಿ ಬೈಂಡಿಂಗ್ ಮಾಡಿಕೊಟ್ಟ **ವೀಣಾ** ಮತ್ತು **ದೀಪಕ** ರವರ **ಸಾಯಿ ಝುರಾಕ್ಸ ಮತ್ತು ಡಿ.ಟಿ.ಪಿ. ಸೆಂಟರ್, ಬೆಳಗಾವಿ.** ಇವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳು.

ಸ್ಥಳ : ಹಾರೂಗೇರಿ
ದಿನಾಂಕ : 29-09-2009

ಸಂಶೋಧನಾ ವಿದ್ಯಾರ್ಥಿನಿ
ಭಾರತಿ. ಕೆಂಚಪ್ಪ. ಬಿಜಾಪೂರ

ಅಧ್ಯಯನದ ವಿನ್ಯಾಸ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

1.1 ಪ್ರಸ್ತಾವನೆ

1.2 ಅಧ್ಯಯನದ ಮಹತ್ವ

1.3 ಅಧ್ಯಯನದ ಅವಶ್ಯಕತೆ

1.4 ಅಧ್ಯಯನದ ಉದ್ದೇಶಗಳು

1.5 ಅಧ್ಯಯನದ ವಿಧಾನ

1.6 ಅಧ್ಯಯನದ ವ್ಯಾಪ್ತಿ

1.7 ಅಧ್ಯಯನದ ಇತಿಮಿತಿಗಳು

ಅಧ್ಯಾಯ ಒಂದು

01 ಪ್ರಸ್ತಾವನೆ:

ಮಹಿಳೆಯ ಬದುಕು:

"ಉದ್ಯೋಗಂ ಪುರುಷ ಲಕ್ಷಣಂ" ಎಂಬುದು ಗಾದೆ ಮಾತು. ಆದರೀಗ ಕಾಲ ಬದಲಾಗಿದೆ. ಮಹಿಳೆಗೆ ಮನೆಯಷ್ಟೇ ಕಾರ್ಯಕ್ಷೇತ್ರವಾಗಿ ಉಳಿದಿಲ್ಲ. ಸಮಾಜದ ವಿವಿಧ ಸ್ತರಗಳಲ್ಲಿ. ವಿಭಿನ್ನ ಬಗೆಯ ಉದ್ಯೋಗಗಳಲ್ಲಿ ಸ್ವಾವಲಂಬನೆಯ ದಾರಿಯನ್ನು ಆಕೆ ಕಂಡುಕೊಂಡಿದ್ದಾಳೆ.

ಆರ್ಥಿಕ, ಸಾಮಾಜಿಕ, ಔದ್ಯೋಗಿಕ, ರಾಜಕೀಯ, ಶೈಕ್ಷಣಿಕ ಸರ್ವ ರಂಗಗಳಲ್ಲಿಯೂ ಸೈ ಎನ್ನಿಸಿಕೊಂಡ ಮಹಿಳಾ ಕಾಲವಿದು. ನಾಲ್ಕು ಗೋಡೆಗಳ ಮಧ್ಯ ಬಾಲ್ಯವಿವಾಹ, ದೇವದಾಸಿ, ಸತಿಪದ್ದತಿ, ವರದಕ್ಷಿಣೆ, ಶಿಶುಬ್ರೂಣಹತ್ಯೆ, ಅನಕ್ಷರತೆ ಹೀಗೆ ಸಮಾಜದ ಹತ್ತು ಹಲವಾರು ಕ್ರೂರ ಮುಖಗಳ ವಕ್ರ ದೃಷ್ಟಿಯನ್ನ, ಕಪಿ ಮುಷ್ಟಿಯನ್ನ ಮೆಟ್ಟಿ ನಿಂತದ್ದು ಇಂದಿನ ಸಾಧನೆಯೇ ಸರಿ.

ಪುರುಷ ಪ್ರಧಾನ ದೇಶದಲ್ಲಿ, ರಾಷ್ಟ್ರದ ಪ್ರಥಮ ಪ್ರಜೆಯ ಅತ್ಯಂತ ಹಿರಿದಾದ ಸ್ಥಾನದಲ್ಲಿ ಕುಳಿತಿರುವ ಪ್ರತಿಭಾ ಪಾಟೀಲ ಸಿಂಗ್ ಇವರ ಮೂಲಕ ನಾವು ಮಹಿಳಾ ಪ್ರಾತಿನಿಧ್ಯವನ್ನು ಇಂದು ಅನುಭವಿಸುತ್ತಿದ್ದೇವೆ. ದೇಶದ ಆಗು ಹೋಗುಗಳ, ಸಾಧನೆ ಪ್ರಗತಿಗಳ ಚರ್ಚೆಯಾಗುವದು ಲೋಕಸಭೆಯಲ್ಲಿ. ಆ ಚರ್ಚೆಯನ್ನು ಆಲಿಸಿ ಸರಿಯಾದ ತೀರ್ಮಾನ ಕೊಡುವ ಅಧ್ಯಕ್ಷ ಸ್ಥಾನದಲ್ಲಿ ದೇಶದ ಮೊದಲ ಮಹಿಳಾ ಸ್ಪೀಕರ ಆಗಿ ಮೀರಾ ಕುಮಾರ್ ಅವರು ಇಂದು ನಮ್ಮೆಲ್ಲರ ಮಧ್ಯದಲ್ಲಿ ಇದ್ದಾರೆ.

ಜೀವನದ ಹಲವಾರು ಏಳು-ಬೀಳುಗಳ ಮಧ್ಯೆಯೂ ಮಹಿಳೆ ಇಂದು ತನ್ನನ್ನು ಸಮರ್ಪಕವಾಗಿ ಪ್ರಸ್ತುತ ಪಡಿಸಲು ಹೋರಾಡುತ್ತಿದ್ದಾಳೆ. ವಿಶ್ವಮಹಿಳಾ ದಿನಾಚರಣೆಗಳನ್ನು ಆಚರಿಸಿಕೊಳ್ಳುತ್ತಿರುವ 21 ನೇ ಶತಮಾನದ ಇಂದಿನ ಬವಣೆ ಕಷ್ಟಕಾರ್ಪಣ್ಯಗಳನ್ನು ಕಂಡ ನಮಗೆ ವೇದ ಕಾಲದಲ್ಲಿ ಸ್ತ್ರಿಯರನ್ನು ನಡೆಸಿಕೊಂಡ ರೀತಿಯ ಬಗ್ಗೆ ಹೆಮ್ಮೆ ಎನ್ನಿಸುತ್ತದೆ. ಕೆಲವರು ವೇದಕಾಲವನ್ನು **"ಸ್ತ್ರೀಯರಿಗೆ ದೊರೆತ ಸುವರ್ಣ ಕಾಲ"** ವೆಂದು ಬಣ್ಣಿಸುತ್ತಾರೆ. ಸ್ತ್ರೀ ಪುರುಷ ಸೇರಿಯೇ ಆರ್ಥಿಕ, ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಸ್ತ್ರೀಯರು ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿ ಯಾವಾಗಲು ಕಾಯಕದಲ್ಲಿ ನಿರತರಾಗಿರುತ್ತಿದ್ದರು. ಭೂ ಸಂಪತ್ತು, ಪಶು ಸಂಪತ್ತು ಇತ್ಯಾದಿಗಳನ್ನು ಕಾಪಾಡಿಕೊಂಡು ಬರುವ ಪ್ರಮುಖ ಜವಾಬ್ದಾರಿಯೂ ಮಹಿಳೆಯರದೇ ಆಗಿತ್ತು. ತದನಂತರ ಅಂದರೆ ವೇದಗಳ ನಂತರದ ಕಾಲ ಮತ್ತು ಸ್ಮೃತಿ ಹಾಗೂ ಕಾವ್ಯಗಳ ಕಾಲದಲ್ಲಿ ಮನು, ಕಾತ್ಯಾಯನ, ಯಾಜ್ಞವಲ್ಕ್ಯ, ಪರಾಶರ, ಬೃಹಸ್ಪತಿ ಮೊದಲಾದವರು ಸ್ತ್ರೀಯರ ಸ್ಥಾನಮಾನಗಳ ಬಗ್ಗೆ ಮಿಶ್ರ ಅಭಿಪ್ರಾಯ ವ್ಯಕ್ತಪಡಿಸಿದ್ದರೆ, ಮನುವಂತೂ ತನ್ನ ದ್ವಿಮುಖ ನೀತಿಯಿಂದ ಸ್ತ್ರೀಯರಿಗೆ ಕನಿಷ್ಟ ಸ್ಥಾನ ಮಾನಗಳನ್ನು ಸೂಚಿಸುತ್ತಾನೆ[1].

ಇಂಥ ವೈರುಧ್ಯಗಳ ನಡುವೆಯೂ ಇಂದು ಮಹಿಳೆ ಬದುಕು ಸಾಗಿಸಲು ನೂರಾರು ದಾರಿಗಳನ್ನು ಕಂಡುಕೊಂಡಿದ್ದಾಳೆ. ಸಂಸಾರದ ನೊಗ ಹೊರುವುದರಲ್ಲಿ ತನ್ನದೂ ಪಾಲಿರಲಿ

1. 2007 ರಲ್ಲಿ ವಿಮೋಚನಾ ಪ್ರಕಾಶನ ಅಥಣಿ ಅವರಿಂದ ಪ್ರಕಟಿತ "ಅಥಣಿ ತಾಲೂಕು ಸಮಗ್ರ ದರ್ಶನ" ಡಾ: ವ್ಹಿ.ಎಸ್.ಮಾಳಿ ಇವರ ಸಂಪಾದಕತ್ವದ ಪುಸ್ತಕ. ಲೇಖನ: 'ಸಹೋದರಿಯರ ಸಾಧನೆ-ಒಂದು ನೋಟ' ಭಾರತಿ ಬಿಜಾಪೂರ.(ಪುಟ ಸಂಖ್ಯೆ: 188-189).

ಎಂದು ಬಯಸುತ್ತಾಳೆ. ದುಡಿಮೆಗೆ ಅವಕಾಶವಿಲ್ಲ ಎಂದು ಕುಳಿತಿರುವ ಬದಲು **ಇರುವ ಪರಿಮಿತಿಯಲ್ಲೇ ತನಗೆ ಸಾಧ್ಯವಾದುದನ್ನು ಮಾಡುವ ಕ್ರೀಯಾಶೀಲ ಗುಣದವಳು ಮಹಿಳೆ.**

ಸ್ವಂತ ಪರಿಶ್ರಮದಿಂದ ಗ್ರಾಮೀಣ ಮಹಿಳೆಯೂ ಕೂಡ, ಇಂದು ಸ್ವಾವಲಂಬನೆಯತ್ತ ಮುಖ ಮಾಡಿದ್ದಾಳೆ. ಇದಕ್ಕೆ ಸ್ವ ಸಹಾಯ ಸಂಘಗಳು ಹಾಗೂ ಸ್ತ್ರೀ ಶಕ್ತಿ ಸಂಘಗಳು ಒತ್ತಾಸೆಯಾಗಿವೆ ಎನ್ನಬಹುದು. ಅನಕ್ಷರಸ್ಥರೂ ಸಹ ಅಕ್ಷರಸ್ಥರಂತೆ ಸಕ್ರೀಯವಾಗಿ ಭಾಗಿಯಾಗಿದ್ದಾರೆ.

ಸಂವಿಧಾನದ 73 ನೇ ತಿದ್ದುಪಡಿ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೀಸಲಾತಿಯಿಂದಾಗಿ ಹೆಚ್ಚಿನ ಮಹಿಳೆಯರು ರಾಜಕೀಯ ಪ್ರವೇಶ ಮಾಡಿದ್ದಾರೆ ರಾಜ್ಯದಲ್ಲಿ 35 ಸಾವಿರಕ್ಕೂ ಹೆಚ್ಚು ಮಹಿಳೆಯರು ಪಂಚಾಯತಿಗಳಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ 33 ರಷ್ಟು ಮೀಸಲು ನೀಡುವ ಉದ್ದೇಶದ ವಿಧೇಯಕಕ್ಕೆ ಇನ್ನೂ ಮೋಕ್ಷ ದೊರೆತಿಲ್ಲ. ಆದರೂ ಪಂಚಾಯತಿಗಳಲ್ಲಿ ಮಹಿಳೆಯರು ಸಕ್ರೀಯ ಕಾರ್ಯದಕ್ಷತೆಯ ಛಾಪು ಮೂಡಿಸುತ್ತಿದ್ದಾರೆ 2.

ದುಡಿಮೆ ಮತ್ತು ಮಹಿಳೆ:

ಮಹಿಳೆಯ ಬದುಕನ್ನು ಪ್ರಾಚೀನ ಕಾಲದಿಂದ ಹಿಡಿದು ಇಂದಿನವರೆಗೂ ಅಧ್ಯಯನಕ್ಕೊಳಪಡಿಸಿ ನೋಡಿದಾಗ ನಮಗೆ ಮಹಿಳೆಯ ಹಲವು ಮುಖಗಳು ಗೋಚರವಾಗುತ್ತವೆ. ಜೈವಿಕ ವಿಶಿಷ್ಟತೆಯನ್ನು ಮುಂದೆ ಮಾಡಿಕೊಂಡು ಸಮಾಜವು ಲಿಂಗ ಸಂಬಂಧಿ ಶ್ರಮವಿಭಜನೆಯನ್ನು ರೂಪಿಸಿಬಿಟ್ಟಿದೆ. ಇಲ್ಲಿ ಸ್ತ್ರೀಯರ ಸ್ಥಾನಮಾನಗಳು ಅಧೀರವೂ, ಅಪ್ರಧಾನವೂ, ಅಗೋಚರವೂ, ಕ್ರಯ ರಹಿತವೂ ಆಗಿಬಿಟ್ಟಿವೆ. ಈ ಬಗೆಯ ಸಾಮಾಜಿಕವಾಗಿ ರೂಪಗೊಂಡ ಲಿಂಗ ಪ್ರಭುತ್ವವು ಸ್ತ್ರೀಯರನ್ನು ಹಿಂಸೆ, ನೋವು, ನಿರ್ಲಕ್ಷ್ಯದ ರೂಪಕ್ಕೆ ತಳ್ಳಿಬಿಟ್ಟಿದೆ.
ಅಭಿವೃದ್ಧಿ ಪ್ರಕ್ರೀಯೆಯನ್ನು ಲಿಂಗೀಕರಣಗೊಳಿಸದಿದ್ದರೆ ಅದು ತಾರತಮ್ಯವಾದಿಯೂ, ಅನ್ಯಾಯ ಪರವೂ ಆಗುತ್ತದೆ. ಮಹಿಳೆಯರನ್ನು ಅಭಿವೃದ್ಧಿಯ ನಿಯೋಗಿಗಳೆಂದು ಪರಿಭಾವಿಸುವ ಅಗತ್ಯವಿದೆ. ಅಭಿವೃದ್ಧಿಯ ಲಿಂಗೀಕರಣವು ಸ್ತ್ರೀಯರ ಹಾಗೂ ಪುರುಷರ ಬದುಕಿನಲ್ಲಿ ಮಹತ್ವದ ಬದಲಾವಣೆಯನ್ನು ತರಬಹುದಾಗಿದೆ. ಈ ಲಿಂಗೀಕರಣ ಪ್ರಕ್ರಿಯೆಯು ಅಭಿವೃದ್ಧಿಯನ್ನು ಮಾನವೀಕರಣಗೊಳಿಸುತ್ತದೆ 3.

ಭಾರತದಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚು ಸಮಯ ದುಡಿಯುತ್ತಾರೆ. ಮನೆ ಹಾಗೂ ಮಾರುಕಟ್ಟೆಯ ಕೆಲಸಗಳಿಗಾಗಿ ವ್ಯಯಿಸುವ ಸಮಯ ಪರಿಗಣನೆಗೆ ತೆಗೆದುಕೊಂಡರೆ ಸ್ತ್ರೀಯರು ಶೇ 12 ರಷ್ಟು ಹೆಚ್ಚು ದುಡಿಯುತ್ತಾರೆ. ಜಗತ್ತಿನ ಎಲ್ಲ ಕೆಲಸಗಳಲ್ಲಿ ಶೇ 12 ರಷ್ಟನ್ನು ಮಹಿಳೆಯರೇ ಮಾಡುತ್ತಿದ್ದರೂ ಜಾಗತಿಕ ವರಮಾನದಲ್ಲಿ ಅವರ ಪಾಲು ಶೇ 10 ರಷ್ಟು ಮಾತ್ರ ಎನ್ನುತ್ತದೆ ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ 4.

2.ಪ್ರಜಾವಾಣಿ ದಿನಪತ್ರಿಕೆ ಭೂಮಿಕಾ ಪುರವಣಿ,ದಿನಾಂಕ 12-04-08,ಲೇಖನ: 'ಪಂಚಾಯ್ತಿಯಲ್ಲಿ ಮಹಿಳೆಯರು ಮತ್ತು ಸಬಲೀಕರಣ'ಲೇಖಕರು:ಮಂದಾಕಿನಿ ಮತ್ತು ವಿಜಯಕರ್ನಾಟಕ ದಿನಪತ್ರಿಕೆ,ಮಹಿಳಾ ವಿಜಯ ಪುರವಣಿ ದಿನಾಂಕ: 08-06-2009.ಲೇಖನ: 'ಮಹಿಳಾ ಮಣಿಗಳು',ಲೇಖಕರು: ವಸಂತ ನಾಡಿಗೇರ

3. ಅಭಿವೃದ್ಧಿ ಲಿಂಗ ಸಂಬಂಧ ಆಯಾಮಗಳು–ಡಾ: ಟಿ. ಆರ್.ಚಂದ್ರಶೇಖರ್.2003 ರಲ್ಲಿ ಪ್ರಕಟಿತ 'ಕರ್ನಾಟಕ ಅಭಿವೃದ್ಧಿಯ ನೆಲೆಗಳು'.ಪುಟ ಸಂಖ್ಯೆ: 119.

4. ಪ್ರಜಾವಾಣಿ ದಿನಪತ್ರಿಕೆ ಭೂಮಿಕಾ ಪುರವಣಿ,ದಿನಾಂಕ 15-03-08,ಲೇಖನ: 'ಎಲ್ಲಿದೆಯೇ ನ್ಯಾಯ' ಲೇಖಕರು:ಸುಚೇತನಾ ನಾಯ್ಕ್

ಇದಕ್ಕೆ ಪ್ರಮುಖ ಕಾರಣ ಅಭಿವೃದ್ಧಿಯ ಸಾಂಪ್ರದಾಯಿಕ ಸಂಕಥನವು ಮಹಿಳೆಯರನ್ನು ಕೇವಲ ಅಭಿವೃದ್ಧಿಯ ಫಲಗಳನ್ನು ಸ್ವೀಕರಿಸುವ ಘಟಕಗಳಾಗಿ ಮಾತ್ರ ನೋಡುತ್ತಾ ಬಂದಿದೆ. ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರವನ್ನು ಗುರುತಿಸಿ, ಅವರನ್ನು ಅಭಿವೃದ್ಧಿಯ ಫಲಾನುಭವಿಗಳನ್ನಾಗಿ ಮಾತ್ರ ಪರಿಭಾವಿಸಲಾಗಿದೆ. ಮಹಿಳೆಯರ ದುಡಿಮೆಯು ದುಡಿಮೆ ಎಂದು ಪರಿಗಣಿತವಾಗಿಲ್ಲ. ಪುರುಷನ ದುಡಿಮೆ ಮಾತ್ರ ದುಡಿಮೆಯೆಂದೂ, ಆತನು ಮಾತ್ರ ದುಡಿಮೆಗಾರನೆಂದು ತಿಳಿಯಲಾಗಿದೆ. ಈ ಬಗೆಯ ಪರಿಭಾವನೆಗಳಿಂದಾಗಿ ಅಭಿವೃದ್ಧಿಯ ಸಾಂಪ್ರದಾಯಿಕ ಸಂಕಥನದಲ್ಲಿ ಮಹಿಳೆಯು ಅಪ್ರಧಾನಳೂ, ಆವಲಂಬಿತಳೂ, ಆಗಿಬಿಟ್ಟಿದ್ದಾಳೆ. ಆಕೆಯ ದುಡಿಮೆಯು ಅಗೋಚರವು, ಅಮೂರ್ತವೂ, ಕ್ರಯರಹಿತವೂ ಆಗಿಬಿಟ್ಟಿದೆ.

ದುಡಿಯುವ ಮಹಿಳೆಗೆ ಸಮಾನ ಕೆಲಸಕ್ಕೆ ಸಮಾನ ವೇತನ ಸಿಗುತ್ತಿಲ್ಲ. ಸಂಘಟಿತ ವಲಯದಲ್ಲಿ ಪುರುಷರ ಮತ್ತು ಮಹಿಳೆಯರ ವೇತನಗಳಲ್ಲಿ ತಾರತಮ್ಯ ಇರುವುದಿಲ್ಲ. ಆದರೆ ಶೇ.96 ರಷ್ಟು ಮಹಿಳೆಯರೇ ದುಡಿಯುತ್ತಿರುವ ಅಸಂಘಟಿತ ಕ್ಷೇತ್ರದ ಪರಿಸ್ಥಿತಿ ಮಾತ್ರ ವಿಭಿನ್ನ. ಅವರಿಗೆ ಸಮಾನವಾದ ವೇತನ ದೊರೆಯುತ್ತಿಲ್ಲ 5.

ಹಾಗಾದರೆ 'ದುಡಿತ' ಎಂದರೇನು ?

ಅಭಿವೃದ್ಧಿ ಕುರಿತ ಸಿದ್ಧಾಂತಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಪ್ರಕಾರ,ಮಾರುಕಟ್ಟೆ ಪ್ರವೇಶದಿಂದ ಮತ್ತು ವಿನಿಮಯ ಮಹತ್ವಗಳ್ಳ ಚಟುವಟಿಕೆಗಳು ಮಾತ್ರ ದುಡಿಮೆ, ಆರ್ಥಿಕೋತ್ಪಾದನೆ ಎಂದೆನ್ನಿಸಿಕೊಳ್ಳುತ್ತವೆ. ಇಂತಹ ಚಟುವಟಿಕೆಗಳಲ್ಲಿ ತೊಡಗುವ ಶ್ರಮವೇ ದುಡಿಮೆ.

ಅಂದರೆ ಇಲ್ಲಿ ವಸ್ತುವಿನ ಉಪಯುಕ್ತತೆ ಮುಖ್ಯವಾಗುವುದಿಲ್ಲ. ಮಾರುಕಟ್ಟೆ ಪ್ರವೇಶದಿಂದ ವಿನಿಮಯ ಗುಣವುಳ್ಳ ಚಟುವಟಿಕೆಗಳಿಗೆ ಆರ್ಥಿಕ ಮನ್ನಣೆ ಮತ್ತು ಮಾಪನದ ಗುಣವಿರುತ್ತದೆ. ಈ ಬಗೆಯಲ್ಲಿ ದುಡಿಮೆಯನ್ನು ಅರ್ಥೈಸಿಕೊಂಡಿರುವುದರಿಂದ ಕುಟುಂಬದೊಳಗೆ ಮಹಿಳೆಯರು ಕೈಗೊಳ್ಳುವ ಚಟುವಟಿಕೆಗಳು ಅಭಿವೃದ್ಧಿ ಕುರಿತ ಚರ್ಚೆಯಲ್ಲಿ 'ದುಡಿಮೆ' ಅನ್ನಿಸಿಕೊಳ್ಳುದಿಲ್ಲ. ಉದಾ: ಮಕ್ಕಳನ್ನು ಹೆರುವುದು, ಮಗುವಿಗೆ ಹಾಲುಣಿಸುವುದು, ಮಕ್ಕಳ ಲಾಲನೆ ಮುಂತಾದವು. ಈ ಬಗೆಯ ಚಟುವಟಿಕೆಗಳಿಗೆ ವಿನಿಮಯ ಮಹತ್ವವಿಲ್ಲದಿರುವುದರಿಂದ ಅವುಗಳ ಮಾಪನ ಸಾಧ್ಯವಿಲ್ಲ. ಈ ಬಗೆಯ ದುಡಿಮೆಗೆ ಕ್ರಯ ಎಂಬುದಿರುವುದಿಲ್ಲ. ಆದ್ದರಿಂದ ಅಭಿವೃದ್ಧಿಯಲ್ಲಿ ಇದು ದುಡಿಮೆ ಎಂದು ಅನ್ನಿಸುವುದಿಲ್ಲ.

ಈ ಬಗೆಯ ಸೈದ್ಧಾಂತಿಕ ನಿಲುವಿನಿಂದಾಗಿ ಮಹಿಳೆಯರ ದುಡಿಮೆ ಕೌಟುಂಬಿಕ ದುಡಿಮೆಯು ಅಭಿವೃದ್ಧಿಯ ಗಡಿಯಿಂದ ಹೊರಗುಳಿಯುತ್ತಿದೆ. ಆದ್ದರಿಂದ 'ದುಡಿಮೆ'ಯ ಅರ್ಥವನ್ನು ವಿಸ್ತರಿಸುವ ಅಗತ್ಯತೆ ಇದೆ. ಸಂತಾನೋತ್ಪತ್ತಿ ದುಡಿಮೆ, ಅನೌಪಚಾರಿಕ, ಅಸಂಘಟಿತ ವಲಯದಲ್ಲಿನ ದುಡಿಮೆಯನ್ನು ಆರ್ಥಿಕೋತ್ಪಾದನೆಯ ಚೌಕಟ್ಟಿಗೆ ತರಬೇಕಾಗಿದೆ. ಮಹಿಳೆಯನ್ನು ಸಾಮಾಜಿಕ ಘಟಕವಾಗಿ ಎಲ್ಲಿಯವರೆಗೆ ಪರಿಗಣಿಸುವುದಿಲ್ಲವೋ ಅಲ್ಲಿಯವರೆಗೆ ಅವಳು ಅಭಿವೃದ್ಧಿ ವಿಷಯಗಳಲ್ಲಿ ಪುರುಷನಿಗೆ ಸಮಾನವಾದ ಸ್ಥಾನಮಾನಗಳನ್ನು ಪಡೆಯುವುದು ಸಾಧ್ಯವಿಲ್ಲ 6.

5&6. ಅಭಿವೃದ್ಧಿ ಲಿಂಗ ಸಂಬಂಧ ಆಯಾಮಗಳು–ಡಾ: ಟಿ. ಆರ್.ಚಂದ್ರಶೇಖರ್.2003 ರಲ್ಲಿ ಪ್ರಕಟಿತ 'ಕರ್ನಾಟಕ ಅಭಿವೃದ್ಧಿಯ ನೆಲೆಗಳು'.ಪುಟ ಸಂಖ್ಯೆ: 106,125,126

ನಮ್ಮ ಸಮಾಜದ ಸಂದರ್ಭದಲ್ಲಿ ಅದರಲ್ಲೂ ಬಡಕುಟುಂಬಗಳ ಹೆಣ್ಣುಮಕ್ಕಳ ದೃಷ್ಟಿಯಿಂದ ಬದುಕು ಮತ್ತು ದುಡಿಮೆಗಳು ಬೇರೆ ಬೇರೆ ಅಲ್ಲವೆ ಅಲ್ಲ. ಅವೆರೆಡೂ ಅಭಿನ್ನ. ಮಹಿಳೆಯರ ಕಾಲಬಳಕೆ ಬಗ್ಗೆ ನಡೆದ ಅಧ್ಯಯನಗಳಲ್ಲಿ ಅವಳು ಪ್ರತಿದಿನ 12 ರಿಂದ 15 ಗಂಟೆಗಳ ಕಾಲ ದುಡಿಯುತ್ತಾಳೆಂದು ತಿಳಿಸುತ್ತದೆ.

ದುಡಿಮೆಯು ಮಾನವನ ಜೀವನದ ಹಾಗೂ ಜೀವಿತದ ಕೇಂದ್ರ ಭಾಗದಂತಿದ್ದರೂ ಅದಕ್ಕೆ ಸಮರ್ಪಕವಾದ ಹಾಗೂ ಸಾರ್ವತ್ರಿಕವಾದ ಸಹಮತವಿರುವ ವ್ಯಾಖ್ಯಾನವನ್ನು ನೀಡಲು ಸಾಧ್ಯವಾಗಿಲ್ಲ.ಕೆಲವು ತಜ್ಞರು ದುಡಿಮೆಯ ಬಗ್ಗೆ ನೀಡಿರುವ ವ್ಯಾಖ್ಯೆಗಳನ್ನು ಗಮನಿಸಬಹುದು.

01. **'ಆಕ್ಸಫರ್ಡ ಶಬ್ದಕೋಶ'**ದಲ್ಲಿ "ಶಕ್ತಿಯ ವ್ಯಯ', " ಹೋರಾಡುವುದು ಅಥವಾ ಹೆಣಗುವದು", " ನಿಶ್ಚಿತ ಉದ್ದೇಶದ ಸಾಕಾರಕ್ಕಾಗಿ ಪ್ರಯತ್ನ ಮಾಡುವದು". ಎಂಬ ಅರ್ಥ ನೀಡಲಾಗಿದೆ.

02. **ರೇಮಂಡ್ ಫರ್ತ** ಎಂಬ ಮಾನವಶಾಸ್ತ್ರಜ್ಞರ ಪ್ರಕಾರ ದುಡಿಮೆ ಅಂದರೆ, " ಆದಾಯವನ್ನು ಸಂಪಾದಿಸುವ ಚಟುವಟಿಕೆ", ಅಥವಾ " ಶಕ್ತಿಯ ವ್ಯಯದೊಂದಿಗೆ ದೈಹಿಕ ಮತ್ತು ಮಾನಸಿಕ ಸಂತೋಷ ಹಾಗೂ ವಿಶ್ರಾಂತಿಯ ತ್ಯಾಗವನ್ನೊಳಗೊಂಡಿರುವ ಉದ್ದೇಶಪೂರಿತ ಚಟುವಟಿಕೆ" ಯಾಗಿದೆ.

03. **ಅರ್ಥಶಾಸ್ತ್ರಜ್ಞರ** ಪ್ರಕಾರ ದುಡಿಮೆಯ ಅರ್ಥ ಹೀಗಿದೆ, " ದುಡಿಮೆಯು ಉತ್ಪಾದನೆಯ ಪ್ರಮುಖ ಅಂಶಗಳಲ್ಲೊಂದಾಗಿದ್ದು ದೈಹಿಕ ಹಾಗೂ ಮಾನಸಿಕ ಪರಿಶ್ರಮವನ್ನು ಒಳಗೊಂಡಿರುವುದು.ಇದಕ್ಕಾಗಿ ವೇತನ, ವೃತ್ತಿ ಶುಲ್ಕ ಹಾಗೂ ಸಂಬಳವನ್ನು ಪಡೆಯಲಾಗುವುದು"[7].

ಮಹಿಳೆಯರು ಸಂತಾನೋತ್ಪತಿ ದುಡಿಮೆ ಹಾಗೂ ಆರ್ಥಿಕೋತ್ಪನ್ನದ ದುಡಿಮೆ ಎರಡನ್ನು ನಿರ್ವಹಿಸಬೇಕಾಗಿರುವುದರಿಂದ ಹಾಗೂ ನಿಭಾಯಿಸಬೇಕಾಗಿರುವುದರಿಂದ ಅವಳು ಪ್ರತಿದಿನ 'ಎರಡು ದುಡಿಮೆ' ದಿನಗಳನ್ನು ಬದುಕುವ ಪ್ರಮೇಯ ಬಂದೊದಗಿದೆ.ಕಾರ್ಮಿಕ ಸಂಬಂಧಿ ಕಾಯಿದೆ ಪ್ರಕಾರ ದಿನಕ್ಕೆ 8 ಘಂಟೆಗಳ ದುಡಿಮೆಯು ಒಂದು ದುಡಿಮೆ ದಿನಕ್ಕೆ ಸಮ. ಆದರೆ ಹೆಣ್ಣು ಮಕ್ಕಳು ದಿನಕ್ಕೆ 15 ರಿಂದ 16 ಘಂಟೆಗಳ ಕಾಲ ದುಡಿಯುವುದರಿಂದ ಅವರು ಪ್ರತಿದಿನ ಎರಡು ದುಡಿಮೆ ದಿನಗಳನ್ನು ಬದುಕುತ್ತಿದ್ದಾರೆ.

ನಮ್ಮ ಸಮಾಜದಲ್ಲಿ ಮಹಿಳೆಯರು ಭರಿಸುತ್ತಿರುವ ದುಡಿಮೆಯ ಪ್ರಮಾಣ ಹಾಗೂ ಅದಕ್ಕೆ ಸಂಬಂಧಿಸಿದ ಹೊರೆ ಹಾಗೂ ಹೊಣೆಗಳು ಪುರುಷ ವರ್ಗಕ್ಕಿಂತ ಅಧಿಕವಾಗಿರುವುದು ಅಧ್ಯಯನಗಳಿಂದ ದೃಢ ಪಟ್ಟಿದೆ. ಮಹಿಳೆಯರು ಮೂರು ರೀತಿಯ ದುಡಿಮೆಯನ್ನು ನಿರ್ವಹಿಸುತ್ತಿದ್ದಾರೆ.

7.1994 ರಲ್ಲಿ ಪ್ರಕಟಿತ ಚ.ನ.ಶಂಕರ್‌ರಾವ್ ಅವರ ,ಸಮಾಜಶಾಸ್ತ್ರದ ಪ್ರಾಥಮಿಕ ತತ್ವಗಳು' ಸಂಪುಟ–2 'ದುಡಿಮೆ ಮತ್ತು ಬಿಡುವು – ಕೆಲವು ದೃಷ್ಟಿಕೋನಗಳು' ಪುಟ ಸಂಖ್ಯೆ: 113.

01. **ಸಂತಾನೋತ್ಪತ್ತಿ ದುಡಿಮೆ:**

ಸ್ತ್ರೀಯರಿಗೆ ವಿಶಿಷ್ಟವಾದ ದುಡಿಮೆ ಇದು. ಮಗುವನ್ನು ಒಂಬತ್ತು ತಿಂಗಳು ಹೊಟ್ಟೆಯಲ್ಲಿಟ್ಟುಕೊಂಡು ಪೋಷಿಸುವುದು ನವಮಾಸದ ತರುವಾಯ ಅದಕ್ಕೆ ಜನ್ಮ ನೀಡುವುದು, ಅದರ ಲಾಲನೆ, ಪಾಲನೆ, ಎದೆ ಹಾಲುಣಿಸುವುದು.

02. **ಕೌಟುಂಬಿಕ ದುಡಿಮೆ:**

ಸ್ತ್ರೀಯರಿಗೆಂದೇ ಸಮಾಜವು ಮೀಸಲಿಟ್ಟ ದುಡಿಮೆ, ಗೃಹ ವಾರ್ತೆ ದುಡಿಮೆ. ಉರುವಲು ಶೇಖರಿಸುವುದು, ನೀರು ಸಂಗ್ರಹಿಸುವುದು, ಅಡಿಗೆ ಮನೆ ಕಾರ್ಯಬಾರ, ದವಸ-ಧಾನ್ಯಗಳ ಶೇಖರಣೆ, ಒಕ್ಕಣಿ, ಸ್ವಂತ ಹೊಲ, ಗದ್ದೆಗಳಲ್ಲಿ ದುಡಿಯುವುದು ಇತ್ಯಾದಿ.

03. ಉತ್ಪಾದನಾ ದುಡಿಮೆ:

ಕುಟುಂಬದ ಹೊರಗೆ ದುಡಿಯುವದು. ಕುಟುಂಬದ ನಿರ್ವಹಣೆಗಾಗಿ ವರಮಾನ ಗಳಿಸುವುದಕ್ಕಾಗಿ ಕೂಲಿ- ನಾಲಿ ಮಾಡುವುದು, ನೌಕರಿ ಮಾಡುವುದು.

ಈ ಮೇಲಿನ ಮೂರು ಬಗೆಯ ದುಡಿಮೆಗಳಲ್ಲಿ ಕುಟುಂಬದ ಹೊರಗೆ ನೌಕರಿ ಮಾಡುವುದು, ಕೂಲಿ - ನಾಲಿ ಮಾಡುವುದು ಮಾತ್ರ ಆರ್ಥಿಕ ಗಣನೆಗೆ ಸೇರುತ್ತದೆ. ಮೊದಲೆರಡು ಬಗೆಯ ದುಡಿಮೆಗಳು ಆರ್ಥಿಕವಾಗಿಯಾಗಲೀ ಗಾತ್ರ ನಿಷ್ಟವಾಗಿಯಾಗಲೀ ಮಹತ್ವ ಪಡೆದಿಲ್ಲ. ಈ ಎಲ್ಲ ಆಯಾಮಗಳಲ್ಲಿ ಕೆಲಸವನ್ನು ನಿರ್ವಹಿಸುತ್ತಿರುವ ಮಹಿಳೆಯರು ಅಭಿವೃದ್ಧಿಯ ಫಲಗಳಲ್ಲಿ ಪಡೆಯುತ್ತಿರುವ ಪಾಲು ಮಾತ್ರ ಅತ್ಯಂತ ಕಡಿಮೆ. ಆರ್ಥಿಕತೆಯಲ್ಲಿ ಹಾಗೂ ಕುಟುಂಬದೊಳಗೆ ಮಹಿಳೆಯರು ಪ್ರಚ್ಛನ್ನ ರೀತಿಯಲ್ಲಿ ಅನೇಕ ಬಗೆಯ ತಾರತಮ್ಯಗಳಿಗೆ ಒಳಗಾಗುತ್ತಿದ್ದಾರೆ 8.

ಕುಟುಂಬದ ಮಹಿಳಾ ಸದಸ್ಯರು ಮಾಡುವ ಖರ್ಚು ವೆಚ್ಚಗಳೆಲ್ಲ ಸಾರಾಸಗಟಾಗಿ ಕುಟುಂಬದ ಹಿತಾಸಕ್ತಿಗಳನ್ನು ಮುಖ್ಯವಾಗಿ ಗಂಡನ ಮತ್ತು ಮಕ್ಕಳ ಹಿತಾಸಕ್ತಿಗಳನ್ನು ಗುರಿಯಾಗಿ ಹೊಂದಿರುವುದು ಕಂಡುಬಂದಿದೆ. ಕುಟುಂಬದ ಹೊರಗೆ ನೌಕರಿ - ಚಾಕರಿ, ಕೂಲಿ - ನಾಲಿ ಮಾಡುವ ಹೆಣ್ಣು ಮಕ್ಕಳು ಅನೇಕ ಸಂದರ್ಭಗಳಲ್ಲಿ ತಾವು ದುಡಿದುದನ್ನು ಸಂಪೂರ್ಣವಾಗಿ ವಿಧೇಯತೆಯಿಂದ ಕುಟುಂಬದ ಮುಖ್ಯಸ್ಥನಿಗೆ ತಂದು ಕೊಡುವ ವಾಡಿಕೆ ವ್ಯಾಪಕವಾಗಿದೆ. ತಮ್ಮ ದುಡಿಮೆಗೆ ತಾವು ಹಕ್ಕುದಾರರಾಗಿದ್ದರೂ ಸಹ, ಅದರ ಮೇಲೆ ಅವರಿಗೆ ನಿಯಂತ್ರಣವಿರುವುದಿಲ್ಲ. ಸಂಬಳ, ವೇತನ, ಆಸ್ತಿ, ಕುಟುಂಬದ ವರಮಾನ ಮುಂತಾದವುಗಳ ಮೇಲೆ ಮಹಿಳೆಯರಿಗೆ ನಿಯಂತ್ರಣವಿದ್ದಾಗ ಮಾತ್ರ ಅವರ ಸ್ಥಾನ ಮಾನ ಉತ್ತಮವಾಗುವುದು ಸಾಧ್ಯ.

ಸಂತಾನೋತ್ಪತ್ತಿ ದುಡಿಮೆ, ಕೌಟುಂಬಿಕ ದುಡಿಮೆ ಇವುಗಳ ಬಗೆಗಿನ ಚರ್ಚೆಯನ್ನು ಬದಿಗಿರಿಸಿ ಮಹಿಳೆಯ ಉತ್ಪಾದನೆ ಕುರಿತ ದುಡಿಮೆಯನ್ನೇ ಅವಲೋಕಿಸಿದಾಗ ವೇತನದಲ್ಲಿ ತಾರತಮ್ಯ, ಅನಾರೋಗ್ಯದ ಗತಿ, ಲೈಂಗಿಕ ಕಿರುಕಳ, ದೈಹಿಕ, ಮಾನಸಿಕ ಒತ್ತಡ ಇಂಥವುಗಳ

---

8. ಅಭಿವೃದ್ಧಿ ಲಿಂಗ ಸಂಬಂಧ ಆಯಾಮಗಳು-ಡಾ: ಟಿ. ಆರ್.ಚಂದ್ರಶೇಖರ್.2003 ರಲ್ಲಿ ಪ್ರಕಟಿತ 'ಕರ್ನಾಟಕ ಅಭಿವೃದ್ಧಿಯ ನೆಲೆಗಳು'.ಪುಟ ಸಂಖ್ಯೆ: 113-114.

ಮಧ್ಯೆಯೂ <u>ಮಹಿಳೆ ಯಾಕಾದರೂ ದುಡಿಯುತ್ತಾಳೋ?</u> ಎಂಬ ಅಂಶವನ್ನು ಚಿಂತನೆಗೆ ಗುರಿಪಡಿಸಿದಾಗ **'ದುಡಿಮೆ' ಎಂಬುದು ಇಂದಿನ ಮಹಿಳೆಯರ ಅವ್ಯಾಕತೆಯಾಗಿಯೇ ಉಳಿದಿದೆಯೇ ಹೊರತು ಆಯ್ಕೆಯಾಗಿಲ್ಲ.**

ಇನ್ವೆಸ್ಟ್ ಇಂಡಿಯಾ ಇನ್‌ಕಮ್ಸ್ ಆಂಡ್ ಸೇವಿಂಗ್ ಸರ್ವೆ-2007 ನಡೆಸಿದ ಸಮೀಕ್ಷೆಯ ಪ್ರಕಾರ ಬಡತನ ಹೆಚ್ಚಿದಷ್ಟು ಮಹಿಳೆ ಉದ್ಯೋಗ ಮಾಡುವ ಸಂಭವ ಹೆಚ್ಚು.

ಅಂದರೆ ಇಂದಿಗೂ ಮಹಿಳೆಗೆ ಉದ್ಯೋಗ ಎಂಬುದು ಆಯ್ಕೆಯಾಗಿ ಒದಗಿ ಬರುತ್ತಿಲ್ಲ ಅವಶ್ಯಕತೆಯಾಗಿಯೇ ಮುಂದುವರೆದಿದೆ. ಆರ್ಥಿಕ ಅವಶ್ಯಕತೆಯೇ ಮಹಿಳೆಗೆ ಉದ್ಯೋಗ ಮಾಡಲು ಪ್ರೇರೇಪಣೆ ನೀಡುವುದು ಹಾಗೂ ಆಗಲೇ ಕುಟುಂಬದಿಂದ ಗ್ರೀನ್ ಸಿಗ್ನಲ್ ಸಿಗುವುದು.

ಕಡಿಮೆ ಆದಾಯ ಹೊಂದಿದ ಕುಟುಂಬದ ಮಹಿಳೆ ಉದ್ಯೋಗಕ್ಕೆ ಹೋಗುವ ಪ್ರಮಾಣ ಹೆಚ್ಚಿದ್ದರೆ, ಉತ್ತಮ ಆರ್ಥಿಕ ಸ್ಥಿತಿ ಇರುವ ಕುಟುಂಬಗಳು ಮಹಿಳೆಗೆ ಉದ್ಯೋಗ ಮಾಡುವ ಅವಕಾಶದಿಂದ ವಂಚಿತರನ್ನಾಗಿ ಮಾಡುತ್ತಿದೆ ಎಂಬುದನ್ನು ಈ ಸಮೀಕ್ಷೆ ತಿಳಿಸುತ್ತದೆ.

ಈ ಪ್ರವೃತ್ತಿ ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲೂ ಕಂಡುಬಂದಿದೆ. ನಗರಗಳಲ್ಲಿ 2 ರಿಂದ 3 ಲಕ್ಷ ರೂಪಾಯಿವರೆಗಿನ ಆದಾಯ ಹೊಂದಿರುವ ಕುಟುಂಬದ ಮಹಿಳೆ ಉದ್ಯೋಗಕ್ಕೆ ಹೋಗುವ ಪ್ರಮಾಣ ಶೇ 13 ರಷ್ಟಿದ್ದರೆ 5 ಲಕ್ಷಕ್ಕೂ ಹೆಚ್ಚು ಆದಾಯವಿರುವ ಕುಟುಂಬದ ಶೇ ೯ ರಷ್ಟು ಮಹಿಳೆಯರು ಮಾತ್ರ ಉದ್ಯೋಗ ಮಾಡುತ್ತಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಂತೂ ಈ ವ್ಯತ್ಯಾಸ ಇನ್ನೂ ಹೆಚ್ಚು. 50 ಸಾವಿರದಿಂದ 5 ಲಕ್ಷ ವಾರ್ಷಿಕ ಆದಾಯ ಹೊಂದಿರುವ ಕುಟುಂಬಗಳ ಶೇ 16 ರಿಂದ 19 ರಷ್ಟು ಮಹಿಳೆಯರು ಕೆಲಸಕ್ಕೆ ಹೋಗುತ್ತಿದ್ದು, 5 ಲಕ್ಷ ರೂಪಾಯಿಗೂ ಹೆಚ್ಚು ಆದಾಯವಿರುವ ಕುಟುಂಬದಿಂದ ಮಹಿಳೆಯರು ಉದ್ಯೋಗಕ್ಕೆ ಹೊರಬೀಳುವುದು ಶೇ 4.9 ರಷ್ಟು ಮಾತ್ರ.

ಇವರ ದುಡಿಮೆಯಿಂದ ಸಂಸಾರ ನಿರ್ವಹಣೆ ಕಠಿಣ ಸಾಧ್ಯವಾಗಿರುವುದು ಒಂದು ಪ್ರಮುಖ ಕಾರಣ. ಕಲಿತ ವಿದ್ಯೆ ವ್ಯರ್ಥವಾಗದೇ ಸಮಾಜ ಸೇವೆಗೆ ಮೀಸಲಾಗಲಿ ಸ್ವಾತಂತ್ರ್ಯ ,ಆರ್ಥಿಕ ಭದ್ರತೆ ದೊರೆಯಲಿ ಎನ್ನುವ ಗುಂಪು ಒಂದು ಗುಂಪಿನವರಾದರೆ, ಮದುವೆ ಆಗುವವರೆಗೂ ಕೆಲಸಕ್ಕೆ ಹೋಗುವವರದು ಇನ್ನೊಂದು ಗುಂಪು.

ಒಟ್ಟಿನಲ್ಲಿ ಆರ್ಥಿಕ ಅವಶ್ಯಕತೆ ಇದ್ದಾಗ ಮಾತ್ರ ಉದ್ಯೋಗ ಮಾಡಲು ಕೌಟುಂಬಿಕ ವ್ಯವಸ್ಥೆ ಅನುಮತಿ, ಅವಕಾಶ ನೀಡುತ್ತದೆ ಎಂಬುದು ಈ ವರದಿಯಿಂದ ತಿಳಿದು ಬರುತ್ತದೆ [೯].

9. ಪ್ರಜಾವಾಣಿ ದಿನಪತ್ರಿಕೆ ಭೂಮಿಕಾ ಪುರವಣಿ,ದಿನಾಂಕ 22-03-2008,ಲೇಖನ: 'ಉದ್ಯೋಗ ಆಯ್ಕೆಯಲ್ಲ ಅವಶ್ಯಕತೆ'

ಈ ರೀತಿ ಮಹಿಳೆಯರು ಆರ್ಥಿಕತೆಯಲ್ಲಿ ಭಾಗವಹಿಸುವುದನ್ನು ದುಡಿಮೆಯಲ್ಲಿ ಭಾಗವಹಿಸುವುದು ಅಥವಾ ಸಹಭಾಗಿತ್ವವನ್ನು ಪಡೆಯುವದು ಎಂದು ಅರ್ಥೈಸಿಕೊಳ್ಳಲಾಗುತ್ತದೆ.

ಆರ್ಥಿಕ ಅಭಿವೃದ್ಧಿಯಲ್ಲಿ ಭಾಗವಹಿಸುವಿಕೆ

ಉದ್ಯಮಶೀಲ ಸಂಘಟಕರಾಗಿ

ಕೂಲಿ, ವೇತನ ಗಳಿಸುವ ಕಾರ್ಮಿಕರಾಗಿ

1. **ಸಂಘಟಿತ ವಲಯ** 2. **ಅಸಂಘಟಿತ ವಲಯ**

ಸಂಘಟಿತ ಇಲ್ಲವೆ ಔಪಚಾರಿಕ ಕ್ಷೇತ್ರದಲ್ಲಿ ಮಹಿಳೆಯರು :

ಮಹಿಳೆಯರ ದುಡಿಮೆ ಇತ್ತೀಚಿನ ದಿನಗಳಲ್ಲಿ ತೀರ ಅನಿವಾರ್ಯವಾಗಿದೆ. ಪ್ರತಿಯೊಂದು ರಾಷ್ಟ್ರದ ಆರ್ಥಿಕ ಅಭ್ಯುದಯದಲ್ಲಿ ಮಹಿಳೆಯರದ್ದು ಪಾಲಿದೆ ಅನೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರ ಸ್ಥಿತಿ ಗತಿ ತುಂಬಾ ಚೆನ್ನಾಗಿದೆ. ಸಣ್ಣ ಕೈಗಾರಿಕಾ ಘಟಕಗಳು, ಸರ್ಕಾರದ ಆಡಳಿತ ಸೇವಾ ಇಲಾಖೆಗಳು, ನೊಂದಾಯಿತ ವಾಣಿಜ್ಯ ಸೇವಾ ಉದ್ಯಮಗಳು ಮುಂತಾದವು, ಈ ಬಗೆಯ ಔಪಚಾರಿಕ ಉದ್ದಿಮೆಗಳು ಇಲ್ಲವೆ ಘಟಕಗಳಿಗೆ ಉದಾಹರಣೆಗಳು. ಸಂಘಟಿತ ಕ್ಷೇತ್ರದಲ್ಲಿ ಮಹಿಳೆಯರ ಸ್ಥಿತಿ ಗತಿ ಸಾಕಷ್ಟು ಚೆನ್ನಾಗಿದೆ. ಹಾಗಿರಲು ಕೆಲವು ಪ್ರಮುಖ ಸಂಗತಿಗಳು ಕಾರಣಗಳಾಗಿವೆ.

- ಸಂಘಟಿತ ಉದ್ದಿಮೆಗಳಲ್ಲಿ ಕೆಲಸ ಮಾಡುವ ಮಹಿಳೆಯರು ಬಹುತೇಕವಾಗಿ ಸುಶಿಕ್ಷಿತರು. ಇವರಿಗೆ ದುಡಿಮೆಗೆ ಸಂಬಂಧಿಸಿದ ನಿಯಮಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಇದೆ. ಆದ್ದರಿಂದ ಅವರನ್ನು ಶೋಷಣೆ ಮಾಡುವುದು ಅಷ್ಟೊಂದು ಸುಲಭದ ಕಾರ್ಯವಲ್ಲ.
- ಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರು ತಮ್ಮ ಸಂಘಗಳ ಸದಸ್ಯರಾಗಿರುತ್ತಾರೆ. ಇವರು ಕಾರ್ಮಿಕ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದಾರೆ. ಹೀಗಾಗಿ ಇವರನ್ನು ಶೋಷಣೆ ಮಾಡಲಾಗದು.

ಈ ಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯ ಸ್ಥಿತಿ ಗತಿ ಮಿಕ್ಕ ಅಸಂಘಟಿತ ವಲಯದೊಂದಿಗೆ ಹೋಲಿಸಿದಾಗ ಸಾಕಷ್ಟು ಉತ್ತಮವಾಗಿದೆ ಎನ್ನುವುದನ್ನು ಈ ಕೆಳಗಿನ ಕೆಲವು ಮುಖ್ಯ ಅಂಶಗಳ ಮೂಲಕ ತಿಳಿಯಬಹುದಾಗಿದೆ.

01. ಕಾರ್ಪೊರೇಟ್ ಉದ್ಯಮಗಳು ಸಾಮಾನ್ಯವಾಗಿ ಲಿಂಗ ತಾರತಮ್ಯ ಧೋರಣೆಯನ್ನು ಅನುಸರಿಸಿ ಅಸಮಾನತೆಯನ್ನು ಹೇರುವುದಿಲ್ಲ.

02. ಇನ್ನು ಸರ್ಕಾರಿ ಸೇವೆಯಲ್ಲಂತೂ ನೇಮಕಾತಿಯಿಂದ ಹಿಡಿದು ಪದೋನ್ನತಿಯವರೆಗೂ ಹೆಣ್ಣು ಎನ್ನುವ ಕಾರಣಕ್ಕಾಗಿ ತಾರತಮ್ಯ ಧೋರಣೆಯನ್ನು ಅನುಸರಿಸುವುದಿಲ್ಲ.

03. ಇಲ್ಲಿ ಬಹುತೇಕವಾಗಿ ಸಮಾನ ಕೆಲಸಕ್ಕೆ ಸಮಾನ ವೇತನ ಎನ್ನುವ ನಿಯಮವಿರುವುದರಿಂದ ಹೆಣ್ಣು ಗಂಡು ಎನ್ನುವ ಕಾರಣಗಳಿಂದ ವೇತನದಲ್ಲಿ ವ್ಯತ್ಯಾಸ ಮಾಡಲಾಗದು.

04. ಸಂಘಟಿತ ಕ್ಷೇತ್ರದ ಉದ್ದಿಮೆಗಳು ಮಹಿಳಾ ಕಾರ್ಮಿಕರಿಗೆ ಶಿಶು ಆರೈಕೆ ಕೇಂದ್ರಗಳ ಸೌಲಭ್ಯ ಕಲ್ಪಿಸಿದೆ. ಮಾತೃತ್ವ ಸೌಲಭ್ಯವನ್ನು ಕೂಡಾ ಒದಗಿಸುತ್ತವೆ.

05. ಕೆಲ ದೊಡ್ಡ ದೊಡ್ಡ ಕಂಪನಿಗಳು ತಮ್ಮಲ್ಲಿ ಕೆಲಸ ಮಾಡುವ ಮಹಿಳೆಯರಿಗಾಗಿ ಸಾರಿಗೆ, ವಿಶ್ರಾಂತಿ ಕೊಠಡಿ, ಸೌಲಭ್ಯಗಳನ್ನು ಕಲ್ಪಿಸಿವೆ.

06. ಉದ್ದಿಮೆಯಲ್ಲಿ ಕೆಲಸ ಮಾಡುವಾಗ ಏನಾದರೂ ದೌರ್ಜನ್ಯಗಳು ಮಹಿಳೆಯರ ಮೇಲೆ ನಡೆದರೆ ಅದಕ್ಕೆ ಕಾರಣವಾದವರ ಮೇಲೆ ತಕ್ಕ ಕ್ರಮ ಕೈಗೊಳ್ಳುವ ಅಧಿಕಾರ ಈ ಬಗೆಯ ಉದ್ದಿಮೆಗಳಿಗಿದೆ.

07. ಈ ಬಗೆಯ ಉದ್ದಿಮೆಗಳಲ್ಲಿ ಮಹಿಳೆಯರಿಗೆ ಪುರುಷರ ಹಾಗೆ ಸಂಘಟನೆಗಳನ್ನು ರೂಪಿಸಿಕೊಳ್ಳುವ ಮತ್ತು ತಮ್ಮ ಬೇಡಿಕೆಗಳಿಗಾಗಿ ಹೋರಾಟ ಮಾಡುವ ಹಕ್ಕನ್ನು ಒದಗಿಸಿಕೊಡಲಾಗಿದೆ.

08. ಈ ಬಗೆಯ ಸಂಘಟಿತ ಉದ್ದಿಮೆಗಳಲ್ಲಿ ಪುರುಷರಿಗೆ ಲಭ್ಯವಿರುವ ರಜಾ ಸೌಲಭ್ಯಗಳು, ರಜಾ ನಿಗದಿಕರಣ, ವೈದ್ಯಕೀಯ ಸೌಲಭ್ಯ ಮುಂತಾದ ಅನುಕೂಲಗಳನ್ನು ಒದಗಿಸಿಕೊಡಲಾಗುವುದು.

ಅಸಂಘಟಿತ ಕ್ಷೇತ್ರದಲ್ಲಿ ಮಹಿಳಾ ದುಡಿಮೆ :

ಮೇಲೆ ಅಧ್ಯಯನ ಮಾಡಿದ ಹಾಗೆ ವೇತನದಲ್ಲಿ ಸಮಾನತೆ, ಸೌಲಭ್ಯಗಳಲ್ಲಿ ಸಮಾನತೆಯ ಜೊತೆಗೆ ಉದ್ಯೋಗದ ಸುಭದ್ರತೆ ಇರುವ,ಸಂಘಟಿತ ಕ್ಷೇತ್ರದಲ್ಲಿಯೇ ಅಸಾಮಾನ್ಯ ಸಮಸ್ಯೆಗಳಿರುವಾಗ ಅಸಂಘಟಿತ ಕ್ಷೇತ್ರದಲ್ಲಿಯ ಸಮಸ್ಯೆಗಳು ನೂರಾರು. ಕೃಷಿ, ಬೇಟೆಯಾಡುವುದು, ಪಶುಪಾಲನೆ, ಗುಡಿ ಕೈಗಾರಿಕೆ ಮುಂತಾದವುಗಳು ಈ ಬಗೆಯ ಶ್ರಮಕ್ಕೆ ಉದಾಹರಣೆಗಳಾಗಿವೆ. ಅಸಂಘಟಿತ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹಿಳೆಯರು ಈ ಕೆಳಗಿನ ಕೆಲವು ತೊಂದರೆಗಳಿಗೆ ಸಿಲುಕಿರುತ್ತಾರೆ.

- ಇಲ್ಲಿ ಹೆಚ್ಚು ದುಡಿಸಿಕೊಂಡು ಕಡಿಮೆ ಕೂಲಿ ಮಾಡುವುದನ್ನು ಕಾಣುತ್ತೇವೆ. ಇನ್ನು ಸಂಘಟಿತ ಉದ್ದಿಮೆಗಳೊಂದಿಗೆ ಹೋಲಿಸಿದಾಗ ಇಲ್ಲಿ ಕೊಡುವ ಸಂಬಳವೇ ಕಡಿಮೆ. ಪುರುಷ ಮತ್ತು ಮಹಿಳೆಯರು ಅದೇ ಕಾರ್ಯವನ್ನು ನಿರ್ವಹಿಸಿದರೂ ಮಹಿಳೆಗೆ ಪುರುಷನಿಗಿಂತಲೂ ಕಡಿಮೆ ಸಂಬಳವನ್ನು ಕೊಡಲಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಇದು ಅವರ ದೈನಂದಿನ ಜೀವನದ ಅವಶ್ಯಕತೆಗಳನ್ನು ಪೂರೈಸಲು ಅಸಾಧ್ಯ ಎನ್ನುವಷ್ಟಿರುತ್ತದೆ.
- ಬೀಡಿ, ಸಿಗರೇಟು, ಊದಬತ್ತಿ, ಚರ್ಮೋದ್ಯಮ, ಕಡ್ಡಿ ಪೆಟ್ಟಿಗೆ ತಯಾರಿಕೆ ಮುಂತಾದ ಕಡೆಗಳಲ್ಲಿ ಕೆಲಸ ಮಾಡುವ ಮಹಿಳೆಯರು ಅತ್ಯಂತ ಅನಾರೋಗ್ಯಕರವಾದ ವಾತಾವರಣದಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇಲ್ಲಿ ದುಡಿಯುವವರು ಅನೇಕ

ಬಗೆಯ ರೋಗ ರುಜಿನುಗಳಿಗೆ ಬಲಿಯಾಗಬೇಕಾಗುವುದು. ಇಲ್ಲಿ ಅನೇಕ ರಜೆಗಳಾಗಲೀ, ವೈದ್ಯಕೀಯ ಸೌಲಭ್ಯಗಳಾಗಲೀ ಸಂಘಟಿತ ಉದ್ದಿಮೆಯಲ್ಲಿ ದೊರೆಯುವ ಹಾಗೆ ಸಾಧ್ಯವಿಲ್ಲ.

- ಈ ಬಗೆಯ ಉದ್ದಿಮೆಗಳಲ್ಲಿ ದುಡಿಯುವವರಿಗೆ ತಮ್ಮನ್ನು ಕೆಲಸದಿಂದ ಯಾವುದೇ ಗಳಿಗೆಯಲ್ಲಿ ತೆಗೆದುಹಾಕುವರೆಂಬ ಭಯ ಇದ್ದೇ ಇದೆ. ಯಾಕೆಂದರೆ ಇಲ್ಲಿ ಯಾವುದೇ ರೀತಿಯ ಉದ್ಯೋಗದ ಭದ್ರತೆಯು ಇರುವುದಿಲ್ಲ.
- ಇಲ್ಲಿ ಕೆಲಸ ಮಾಡುವವರು ಮಾಲೀಕರ ಎಲ್ಲ ಬಗೆಯ ಶೋಷಣೆಯನ್ನು ಅನುಭವಿಸಲು ತಯಾರಿರಬೇಕು. ಕೆಲ ಬಾರಿ ಲೈಂಗಿಕ ಕಿರುಕುಳವನ್ನೂ ಅವರು ಎದುರಿಸಬೇಕಾಗುತ್ತದೆ.
- ಪುರುಷ ಪ್ರಾಧಾನ್ಯತೆ ಮತ್ತು ಬಂಡವಾಳಶಾಹಿ ಧೋರಣೆಗಳೆರಡೂ ಇಲ್ಲಿ ಮಹಿಳೆಯನ್ನು ಶೋಷಣೆ ಮಾಡುತ್ತವೆ. ಆಕೆ ಅಸಹಾಯಕಳಾಗಿ ಅನುಭವಿಸಬೇಕಾಗುತ್ತದೆ.
- ಇನ್ನು ಅಸಂಘಟಿತ ವಲಯದ ಮಹಿಳೆಯರು ಏನೇ ಹೋರಾಟ ಮಾಡಿದರೂ ಅದು ನಿರ್ಧಿಷ್ಟ ಫಲಿತಾಂಶ ತಲುಪುವುದಿಲ್ಲ[10].

ಸಮಸ್ಯೆಗಳ ಸಾಗರವೇ ಆದಂತಹ ಇಂತಹ ಅಸಂಘಟಿತ ವಲಯದಲ್ಲಿ ಬಹುಪಾಲು ದುಡಿಯುವ ವರ್ಗವೆಂದರೆ ಕಾರ್ಮಿಕ ಕೃಷಿ ವರ್ಗವಾಗಿದೆ.

ಕೃಷಿಯೇ ಪ್ರಧಾನ ಉದ್ಯೋಗವಾಗಿರುವ ಭಾರತ ದೇಶದಲ್ಲಿ ಪುರುಷರಿಗಿಂತಲೂ ಹೆಚ್ಚು ಸಂಖ್ಯೆಯ ಮಹಿಳೆಯರು ಕೃಷಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

---

10. 'ಮಹಿಳಾ ಅಧ್ಯಯನ'ಲೇಖಕರು–ಎಸ್ ಬಿ ಜೋಗೂರ,ಕ.ವಿ.ವಿ ಬಿ.ಎ,ತೃತೀಯ 5 ನೇ ಸೆಮಿಸ್ಟರ್.ಅಧ್ಯಾಯ 4– ಮಹಿಳೆ ಮತ್ತು ಅಭಿವೃದ್ಧಿ ಪುಟ ಸಂಖ್ಯೆ– 93,95,96,97

1.2. ಅಧ್ಯಯನದ ಮಹತ್ವ:

ಕೃಷಿಯ ಪ್ರಾಮುಖ್ಯತೆ :

ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಶೇ 60 ಕ್ಕಿಂತಲೂ ಅಧಿಕ ಜನ ಕೃಷಿಯನ್ನು ಆವಲಂಬಿಸಿದ್ದಾರೆ. ಭಾರತದ ಆರ್ಥಿಕ ರಚನೆ ಕೃಷಿಯನ್ನು ಆವಲಂಬಿಸಿರುವುದರಿಂದ "ಕೃಷಿ ಆರ್ಥಿಕತೆಯ ಬೆನ್ನೆಲಬು" ಎಂದು ಪರಿಗಣಿಸಲ್ಪಟ್ಟಿದೆ. ದೇಶದಲ್ಲಿ ಕೃಷಿ ಜೀವನಾಧಾರ ಕಸುಬಾಗಿರುವುದರಿಂದ ಅದನ್ನು 'ಪ್ರಾಥಮಿಕ ವಲಯ' ಎಂದೂ ಕರೆಯಲಾಗಿದೆ. ಕೃಷಿ ಪ್ರಾಮುಖ್ಯತೆಯನ್ನು ಈ ಕೆಳಗಿನ ಅಂಶಗಳು ವಿವರಿಸುತ್ತವೆ.

1. ರಾಷ್ಟ್ರಾದಾಯದಲ್ಲಿ ದೊಡ್ಡ ಪಾಲು
2. ಗರಿಷ್ಟ ಉದ್ಯೋಗ
3. ಆಹಾರ ಪೂರೈಕೆ
4. ಕೈಗಾರಿಕಾಭಿವೃದ್ಧಿ
5. ವಿದೇಶಿ ವ್ಯಾಪಾರಕ್ಕೆ ಕೊಡುಗೆ
6. ಸರಕಾರಕ್ಕೆ ಆದಾಯ
7. ಬಂಡವಾಳ ಸಂಚಯನ ಮೂಲ
8. ಪ್ರಾಣಿಗಳಿಗೆ ಮೇವು
9. ಕೈಗಾರಿಕೋತ್ಪನ್ನಗಳಿಗೆ ಮಾರುಕಟ್ಟೆ
10. ರಾಷ್ಟ್ರ ರಕ್ಷಣೆ
11. ಬೆಲೆ ಸ್ಥಿರತೆ
12. ತೃತೀಯ ವಲಯದ ಬೆಳವಣಿಗೆ
13. ಆಯವ್ಯಯ ಪತ್ರದ ಮೇಲೆ ಪ್ರಭಾವ
14. ಅನುಭೋಗದ ಬುಟ್ಟಿಯಲ್ಲಿ ಅಗ್ರಸ್ಥಾನ [11]

ಭಾರತವು ಪ್ರತಿಶತ 2.2 ಭೌಗೋಳಿಕ ಕ್ಷೇತ್ರ, ಮಳೆ ಪ್ರತಿಶತ 1 ರಷ್ಟು, ಅರಣ್ಯ ಪ್ರತಿಶತ 0.5 ರಷ್ಟು ಹಾಗೂ ಹುಲ್ಲುಗಾವಲಗಳು 0.5 ಪ್ರತಿಶತದಷ್ಟು ಹೊಂದಿದ್ದು, ಜಗತ್ತಿನ ಪ್ರತಿಶತ 16 ರಷ್ಟು ಜನಸಂಖ್ಯೆಗೆ ಆಶ್ರಯ ಕೊಟ್ಟಿದೆ. ಅಲ್ಲದೆ ಅದರಲ್ಲಿ ಶೇ 70 ರಷ್ಟು ಜನಸಂಖ್ಯೆ ಕೃಷಿಯನ್ನು ಆವಲಂಬಿಸಿದೆ. ಇತ್ತೀಚಿಗೆ ಸುಮಾರು 50 ವರ್ಷಗಳಿಂದ ಕೃಷಿ ಸಂಶೋಧನೆಯಲ್ಲಾದ ಗಣನೀಯ ಪ್ರಗತಿಯಿಂದಾಗಿ ಕೃಷಿ ಅಗಾಧ ಮಾರ್ಪಾಟುಗಳನ್ನು ಕಂಡುಕೊಂಡಿದೆ. ಆಹಾರ ಉತ್ಪಾದನೆಯು ಕೂಡಾ ಜನಸಂಖ್ಯೆಯ ಬೆಳವಣಿಗೆಗೆ ಸಮವಾಗಿ ಸಾಗಿದೆ. ಸಮೀಕ್ಷೆಯೊಂದರ ಪ್ರಕಾರ ಭಾರತದ ಜನಸಂಖ್ಯೆ ಕ್ರಿ. ಶ 2015 ರ ಹೊತ್ತಿಗೆ 1225 ಮಿಲಿಯನ್ ಮತ್ತು ಜಾನುವಾರುಗಳ ಸಂಖ್ಯೆ 600 ಮಿಲಿಯನ್‌ಗಳವರೆಗೆ ಮುಟ್ಟಲಿದ್ದು, ಈ ಜನಸಂಖ್ಯೆ ಬೇಡಿಕೆ ಪೂರೈಸಲು ನಾವು 275 ಮಿಲಿಯನ್ ಟನ್ ಆಹಾರ ಧಾನ್ಯ, 1083 ಮಿಲಿಯನ್ ಟನ್ ಹಸಿರುಮೇವು ಮತ್ತು 235 ಮಿಲಿಯನ್ ಘನ ಮೀಟರ್ ಉರುವಲು ಕಟ್ಟಿಗೆ ಬೇಕಾಗುವುದು ಕೃಷಿ ಸಂಶೋಧನೆಯಲ್ಲಾದ ಪ್ರಗತಿಯಿಂದ ಹಸಿರು

---

11. 2009-10 ರಲ್ಲಿ ಪ್ರಕಟಿತ ಡಾ: ಎಚ್ ಆರ್ ಕೃಷ್ಣಮೂರ್ತಿ ಇವರ 'ಭಾರತದ ಆರ್ಥಿಕ ಅಭಿವೃದ್ಧಿ' ಪುಟ ಸಂಖ್ಯೆ: 177.

ಕ್ರಾಂತಿ ಸಾಧಿಸಿ ಆಹಾರ ಧಾನ್ಯಗಳ ಉತ್ಪಾದನೆಯನ್ನು 50 ಮಿಲಿಯನ್ ಟನ್‌ನಿಂದ (1950-51) ಸುಮಾರು 206 ಮಿಲಿಯನ್ ಟನ್‌ಗೆ (2000-01) ಹೆಚ್ಚಿಸಿ ಜಗತ್ತಿನ ಆಹಾರ ಸ್ವಾವಲಂಬಿ ರಾಷ್ಟ್ರವೆಂಬ ಹಿರಿಮೆಗೆ ಪಾತ್ರರಾಗಿದ್ದೇವೆ. ಈ ಉತ್ಪಾದನೆಯಿಂದ ನಮ್ಮ ಆಹಾರ ದಾಸ್ತಾನು ಸುಮಾರು 60 ಮಿಲಿಯನ್ ಟನ್‌ಗಿಂತ ಹೆಚ್ಚಿಗೆ ಇದ್ದು, ಇಂದು ನಾವು ದೇಶದ ಮೂಲೆ ಮೂಲೆಗೆ ಅವಶ್ಯವಿದ್ದ ಆಹಾರ ಪೂರೈಕೆ, ಸಾಮಾನ್ಯ ಪಡಿತರ ವ್ಯವಸ್ಥೆಯಿಂದ ಕೈಗೊಂಡಿದ್ದೇವೆ. ಪ್ರತಿಯೊಬ್ಬರಿಗೆ ಆಹಾರ ಲಭ್ಯತೆಯು 395 ಗ್ರಾಂನಿಂದ 500 ಗ್ರಾಂಗೆ ಹೆಚ್ಚಿದೆ. ಗೋಧಿ ಮತ್ತು ಭತ್ತಗಳಲ್ಲಿ ಸಾಧಿಸಿದ ಹಸಿರು ಕ್ರಾಂತಿ ಇತರ ಉತ್ಪಾದನೆಗಳಾದ ಜೋಳ, ಗೋವಿನ ಜೋಳ, ಎಣ್ಣೆ ಕಾಳು, ಹಾಲು, ಹಣ್ಣು, ಕಾಯಿ ಪಲ್ಲೆಗಳಲ್ಲಿಯೂ ಕೂಡ ಕಂಡು ಕೊಂಡಿದ್ದೇವೆ 12.

ಇಷ್ಟೆಲ್ಲ ಪ್ರಾಮುಖ್ಯತೆಯನ್ನು ಕೃಷಿಯು ಪಡೆದಿದ್ದರೂ ಸಹ ಇಂದು ಭಾರತದಲ್ಲಿನ ಅನೌಪಚಾರಿಕ ಉದ್ದಿಮೆಗಳಲ್ಲಿ ಕೃಷಿಯೇ ಅತೀ ದೊಡ್ಡ ಉದ್ದಿಮೆಯಾಗಿದೆ. ಭಾರತದ ಕೃಷಿರಂಗ ಬಹಳ ಕಾಲದಿಂದಲೂ ಒಂದು ಬೃಹತ್ ಅಸಂಘಟಿತ ಕ್ಷೇತ್ರವಾಗಿ ಮುಂದುವರೆದಿದೆ. ಕೃಷಿಕರು ಮತ್ತು ಕೃಷಿ ಕಾರ್ಮಿಕರು ಅಸಂಘಟಿತರಾಗಿ ಉಳಿಯಲು ನಾನಾ ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಬೇಸಾಯ ಕಾರ್ಯ ಚಟುವಟಿಕೆಗಳ ಅನಿಯತಕಾಲಿಕೆ, ನಿರಂತರ ಏರುತ್ತಿರುವ ಉತ್ಪಾದನಾಂಗಗಳ ಬೆಲೆಗಳು, ಆಗಿಂದ್ದಾಗೆ ಉಂಟಾಗುವ ಕೃಷಿ ಉತ್ಪನ್ನಗಳ ಬೆಳೆಗಳ ಅಸ್ಥಿರತೆ ಮತ್ತು ಅದರಿಂದಾಗುವ ಕೃಷಿಕರ ಆದಾಯದ ಅಸ್ಥಿರತೆ ಮತ್ತು ಗ್ರಾಮೀಣ ಕಾರ್ಮಿಕರ ಅನಕ್ಷರತೆ, ಗ್ರಾಮೀಣ ಕಾರ್ಮಿಕರು ಅದರಲ್ಲಿ ಕೃಷಿ ಕಾರ್ಮಿಕರು, ದಿನಗೂಲಿ ಮತ್ತು ಗುತ್ತಿಗೆ ಕೆಲಸಗಾರರು ಬಡಕುಟುಂಬಗಳ ಮಕ್ಕಳು ಮತ್ತು ಮಹಿಳಾ ಕಾರ್ಮಿಕರು ಹಾಗೂ ಸ್ವಂತ ಕೆಲಸ ಇಲ್ಲದವರು,ಬಡತನ ಮತ್ತು ಸಾಮಾಜಿಕ ಹಿಂದುಳಿಯುವಿಕೆಯ ಸ್ಥಿತಿಗೆ ಬೇಗ ಒಳಗಾಗುವಂತವರು13.

ಕೃಷಿ ಕಾರ್ಮಿಕರ ಗಾತ್ರ :

ಕೃಷಿ ಕಾರ್ಮಿಕರ ಸಂಖ್ಯೆಯು 1921 ರಿಂದ ನಿರಂತರವಾಗಿ ಹೆಚ್ಚಿದೆ. ಇಂದು ಒಟ್ಟು ಶ್ರಮಬಲದ ಪ್ರತಿ ನಾಲ್ಕನೇ ವ್ಯಕ್ತಿ ಕೃಷಿ ಕಾರ್ಮಿಕನಾಗಿದ್ದಾನೆ.

ಭಾರತದಲ್ಲಿ ಕೃಷಿ ಕಾರ್ಮಿಕನ ಬೆಳವಣಿಗೆ (ಲಕ್ಷಗಳಲ್ಲಿ)

ವರ್ಷ	ಸಂಖ್ಯೆ	ವರ್ಷ	ಸಂಖ್ಯೆ
1881	75	1961	320
1891	187	1971	480
1911	216	1981	555
1921	210	1991	777
1931	299	2001	1074
1951	280		

ಆಧಾರ: ಜನಗಣತಿ ವರದಿಗಳು.

1881 ರಲ್ಲಿ ಕೃಷಿಕಾರ್ಮಿಕರ ಸಂಖ್ಯೆ ಕೇವಲ 75 ಲಕ್ಷ ಇದ್ದದ್ದು, 2001 ರಲ್ಲಿ 1074 ಲಕ್ಷಕ್ಕೆ ಏರಿತು. ಇದು ಒಟ್ಟು ಶ್ರಮಬಲದ ಶೇ 26.69 ರಷ್ಟಾಗಿತ್ತು.

12.. 2005 ರಲ್ಲಿ ಪ್ರಕಟಿತ ಎಂ ವಿ ರಾಜಶೇಖರನ್–75 'ಗ್ರಾಮ ಚೇತನ' ಕರ್ನಾಟಕದಲ್ಲಿ ಗ್ರಾಮೀಣಾಭಿವೃದ್ಧಿ, ಲೇಖನ: ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ.ಲೇಖಕರು: ಡಾ: ಎಸ್ ಎ ಪಾಟೀಲ.ಪುಟ ಸಂಖ್ಯೆ: 278,279.

13. .2005 ರಲ್ಲಿ ಪ್ರಕಟಿತ ಎಂ ಪಿ ರಾಜಶೇಖರನ್–75 'ಗ್ರಾಮ ಚೇತನ' ಕರ್ನಾಟಕದಲ್ಲಿ ಗ್ರಾಮೀಣಾಭಿವೃದ್ಧಿ, ಲೇಖನ: ಕೃಷಿ ಕಾರ್ಮಿಕರ ಆರ್ಥಿಕ ಸ್ಥಿತಿಗತಿ.ಲೇಖಕರು: ಡಾ: ಎಂ ವಿ ಶ್ರೀನಿವಾಸಗೌಡ .ಪುಟ ಸಂಖ್ಯೆ: 278,279

ಕರ್ನಾಟಕದಲ್ಲಿ ಆರ್ಥಿಕ ಚಟುವಟಿಕೆ ಆಧರಿಸಿ ಜನಸಂಖ್ಯೆಯ ಹಂಚಿಕೆ–2001 (ಸಾವಿರಗಳಲ್ಲಿ)

ಆರ್ಥಿಕ ಚಟುವಟಿಕೆ	ಗ್ರಾಮೀಣ		ನಗರ		ಒಟ್ಟು		ಒಟ್ಟು
	ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ	
ಕೃಷಿ ಕಾರ್ಮಿಕರು	1828	1723	134	100	1962	1823	3785

ಆಧಾರ : ಸೆನ್ಸ್ಸ್ ಆಫ್ ಇಂಡಿಯಾ 2001

ಪ್ರತಿಶತ 49 ರಷ್ಟು ಗ್ರಾಮೀಣ ಮಹಿಳೆಯರು ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ.

ಕೃಷಿಯಲ್ಲಿ ಮಹಿಳಾ ಕೃಷಿ ಕಾರ್ಮಿಕರ ಗಾತ್ರ :

ಭಾರತವು ಗ್ರಾಮಗಳ ನಾಡು, ಹಳ್ಳಿಗಳ ಬೀಡು ಎಂಬ ನುಡಿ ಸತ್ಯವಾಗಿದೆ, ಎಂದು ಹೇಳಲು ಹಲವಾರು ಸಾಕ್ಷಿ ಪುರಾವೆಗಳಿವೆ. ಮಹಿಳೆಯಿಲ್ಲದ ಮನೆ ಮಸಣದ ಸಮಾನ, ಎಂಬುದು ಮಹಿಳೆಯ ಅವಶ್ಯಕತೆಯನ್ನು ತೋರಿಸುತ್ತದೆ. ಗಂಡಿಗಿಂತ ಮಹಿಳೆ ಕಡಿಮೆಯೇನಲ್ಲ ಎಂಬುದಕ್ಕೆ ಹಲವಾರು ಸತ್ಯಾಂಶಗಳಿವೆ. ಆಧುನಿಕ ಯುಗದಲ್ಲಿ ಮಹಿಳೆ ಸಬಲಳಾಗುತ್ತಿದ್ದಾಳೆ ಎಂಬುದಕ್ಕೆ ಹಲವಾರು ಉದಾಹರಣೆಗಳಿವೆ. ಆದಾಗ್ಯೂ ಕೂಡಾ ಗ್ರಾಮೀಣ ಮಹಿಳೆಯ ಸ್ಥಿತಿ ಶೋಚನೀಯವಾಗಿದೆ ಹಲವಾರು ಸೌಲಭ್ಯಗಳಿಂದ ವಂಚಿತಳಾಗಿದ್ದಾಳೆ ಎಂಬುದು ಖೇದದ ಸಂಗತಿಯಾಗಿದೆ. ಭಾರತದ ಜನಗಣತಿಯಲ್ಲಿ ಗ್ರಾಮೀಣ ಮಹಿಳೆಯ ಪಾಲು ನೋಡಿದಾಗ ಆಶ್ಚರ್ಯವಾಗಬಹುದು.

ಭಾರತದಲ್ಲಿ ಜನಗಣತಿಯನ್ನು ವೀಕ್ಷಿಸಿದಾಗ ಮಹಿಳಾ ಕೃಷಿ ಕಾರ್ಮಿಕರ ಗಾತ್ರ ಹೆಚ್ಚಾಗುತ್ತಾ ಹೋಗಿದೆ. ಮುಂದೆಯೂ ಹೆಚ್ಚಾಗುತ್ತಾ ಹೋಗುತ್ತದೆ. ಆದರೆ ಎಲ್ಲ ರಾಜ್ಯಗಳಲ್ಲಿ ಏಕರೀತಿಯಾದ ಪ್ರಮಾಣ ಕಂಡುಬರುವುದಿಲ್ಲ.

ಭಾರತದಲ್ಲಿ ಮಹಿಳಾ ಕೃಷಿ ಕಾರ್ಮಿಕರ ಹಂಚಿಕೆ

ಕ್ರಮ ಸಂಖ್ಯೆ	ರಾಜ್ಯಗಳು	ಒಟ್ಟು ಕೃಷಿ ಕಾರ್ಮಿಕರು	ಮಹಿಳಾ ಕೃಷಿ ಕಾರ್ಮಿಕರು	ಪ್ರತಿಶತ ಮಹಿಳಾ ಕಾರ್ಮಿಕರು
01	ಆಂಧ್ರ ಪ್ರದೇಶ	11850113	7191188	60.68
02	ಅಸ್ಸಾಂ	2509526	437630	17.44
03	ಅರುಣಾಚಲ ಪ್ರದೇಶ	171565	7972	4.65
04	ಬಿಹಾರ	7205937	4652672	64.57
05	ಗುಜರಾತ	5721030	2515045	43.96
06	ಹರಿಯಾಣ	2376211	543088	22.85
07	ಹಿಮಾಚಲ ಪ್ರದೇಶ	1266666	37288	2.98
08	ಕರ್ನಾಟಕ	6854752	3455460	50.40
09	ಕೇರಳ	1925009	50586	26.24

10	ಮಹಾರಾಷ್ಟ್ರ	12695748	6121358	48.21
11	ಮಧ್ಯಪ್ರದೇಶ	8669974	3769434	43.48
12	ಪಂಜಾಬ್	1745465	3636685	20.79
13	ಓರಿಸ್ಸಾ	42009430	2390685	56.90
14	ರಾಜಾಸ್ಥಾನ	84963556	1449004	17.05
15	ತಮಿಳು ನಾಡು	7175171	3897586	54.32
16	ಉತ್ತರ ಪ್ರದೇಶ	11799397	51844385	43.94
17	ಪಶ್ಚಿಮ ಬಂಗಾಳ	5821973	2244803	38.55

ಮೂಲ : ಭರತದ ಜನಗಣತಿ, 2001.

ಈ ಪ್ರಮುಖ ರಾಜ್ಯಗಳಲ್ಲಿ ಮಹಿಳಾ ಕೃಷಿ ಕಾರ್ಮಿಕರ ಗಾತ್ರವನ್ನು ನೋಡಿದಾಗ ಬಿಹಾರ ಪ್ರಥಮ (64.57%) ಆಂದ್ರ ಪ್ರದೇಶ (60.68%) ದ್ವಿತೀಯ, ಓರಿಸ್ಸಾ (56.50%) ತೃತೀಯ ಸ್ಥಾನದಲ್ಲಿರುವುದು ಕಂಡು ಬರುತ್ತದೆ. ಕರ್ನಾಟಕವು ಶೇ 50.40 ರಷ್ಟು ಮಹಿಳಾ ಕೃಷಿ ಕಾರ್ಮಿಕರನ್ನು ಹೊಂದಿ ದೇಶದಲ್ಲಿ 5ನೇ ಸ್ಥಾನದಲ್ಲಿದೆ 14.

1.3. ಅಧ್ಯಯನದ ಅವಶ್ಯಕತೆ

ಕೃಷಿ ಮತ್ತು ಮಹಿಳೆ :

ಭಾರತದ ಮೂಲ ಮತ್ತು ಪ್ರಧಾನ ಉದ್ಯೋಗವಾದ ಕೃಷಿಗೂ, ತಾಯಿಯನ್ನೇ ದೇವರೆಂದು ಪೂಜಿಸುವ ಸಂಸ್ಕೃತಿಗೂ ಅತ್ಯಂತ ನಿಕಟ ಸಂಬಂಧ, ಮೇಲುನೋಟಕ್ಕೆ ನಮಗೆ ಕೃಷಿಯ ಕರ್ತೃ ಪುರುಷ ಎಂದೆನಿಸಿದರೂ, ಅದರ ಆವಿಷ್ಕಾರದಿಂದ ಹಿಡಿದು ಅದರ ಎಲ್ಲ ಬದಲಾವಣೆ ಮತ್ತು ಬೆಳವಣಿಗೆಯ ಹಂತದಲ್ಲಿ ಮಹಿಳೆ ತನ್ನ ಛಾಪು ಮೂಡಿಸಿದ್ದಾಳೆ.

ಕೃಷಿ ಮತ್ತು ಮಹಿಳೆಯ ನಂಟು ಇಂದು ನಿನ್ನೆಯದಲ್ಲ. ಕೃಷಿ ಆವಿಷ್ಕಾರದ ಸಂಶೋಧಕಿ ಮಹಿಳೆಯೇ ಎಂಬುದಕ್ಕೆ ಅನೇಕ ಪುರಾವೆಗಳಿವೆ. ದಾಖಲೆಗಳು ಭಿತ್ತಿ ಚಿತ್ರಗಳು ಗೋಚರಿಸುತ್ತವೆ. ಮಾನವ ತನ್ನ ಅಲೆಮಾರಿ ಜೀವನಕ್ಕೆ ತಿಲಾಂಜಲಿಯಿತ್ತು ಒಂದು ಕಡೆ ನೆಲೆಯೂರಿ ಬದುಕಲು ಪ್ರಾರಂಭಿಸಿದ ಹಂತದಲ್ಲಿ, ಪುರುಷ ಆಹಾರಕ್ಕೋಸ್ಕರ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಲು ಹೋದಾಗ, ಮಹಿಳೆ ತನ್ನ ಸುತ್ತ ಮುತ್ತಲಿನ ಭೂಮಿಯನ್ನು ಸಮತಟ್ಟು ಮಾಡಿ ಬೆಳೆ ಬೆಳೆದು ರಕ್ಷಿಸುವುದರ ಜೊತೆಗೆ ಪ್ರಕೃತಿಯ ಗಿಡ, ಮರ, ಕಲ್ಲು ಬಂಡೆಗಳು, ನೀರು ಎಲ್ಲವೂ ಆಕೆಗೆ ಆರಾಧ್ಯ ದೈವಗಳಾದವು. ತದನಂತರದಲ್ಲಿ ನೀರಿನ ಉಪಯೋಗ ತಿಳಿದು ಬಂದಿದ್ದರಿಂದ ಸಮುದಾಯಗಳು ನದಿ, ಕಣವೆ, ಸರೋವರ, ತಗ್ಗು ಪ್ರದೇಶಗಳ ಕಡೆಗೆ ಸ್ಥಳಾಂತರಗೊಂಡಾಗ, ಗಟ್ಟಿಯಾದ ಕಡ್ಡಿ ನೇಗಿಲಾಗಿ ರೂಪಾಂತರಗೊಂಡು, ಎತ್ತುಗಳನ್ನು ಉಪಯೋಗಿಸಿಕೊಂಡು ಪುರುಷ ವ್ಯವಸಾಯ ಮಾಡಲು ತೊಡಗಿದಾಗ, ಅವನು 'ನೇಗಿಲ ಯೋಗಿ' ಎಂಬ ಪದವನ್ನು ಪಡೆದು ಕೊಂಡನು 15.

---

14 .2006 ರಲ್ಲಿ ಕೆ.ಶಿವಚಿತ್ತಪ್ಪ ಇವರ ಸಂಪಾದಕತ್ವದಲ್ಲಿ ಪ್ರಕಟಿತ ಪುಸ್ತಕ 'ಮಹಿಳಾ ಸಬಲೀಕರಣದ ವಿಭಿನ್ನ ನೆಲೆಗಳು' ಲೇಖನ: 'ಗ್ರಾಮೀಣ ಕೃಷಿ ಅಭಿವೃದ್ಧಿಯಲ್ಲಿ ಮಹಿಳಾ ಕಾರ್ಮಿಕರ ಸಮಸ್ಯೆಗಳು' ಪುಟ ಸಂಖ್ಯೆ: 68-70.

15. ಜನೇವರಿ 2000 ರಲ್ಲಿ ಕನ್ನಡ ವಿಶ್ವ ವಿದ್ಯಾಲಯ, ಹಂಪಿ ಇವರಿಂದ ಪ್ರಕಟಿತ, ಮಹಿಳಾ ಅಧ್ಯಯನ ಉತ್ತರಾಯಣ–ಸಂಚಿಕೆ.ಲೇಖನ: ' ಕೃಷಿ ಮತ್ತು ಮಹಿಳೆ' ಲೇಖಕರು: ಸಿದ್ದಗಂಗಮ್ಮ.ಪುಟ ಸಂಖ್ಯೆ: 89,92.

ಯಾವುದೇ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಬೇಕಾದರೆ ಅಲ್ಲಿನ ಮಾನವ ಸಂಪತ್ತು ಪ್ರಮುಖ ಪಾತ್ರ ವಹಿಸುತ್ತದೆ. ಆರೋಗ್ಯವಂತ ವ್ಯಕ್ತಿಗಳೇ ದೇಶದ ನಿಜವಾದ ಸಂಪತ್ತಾಗಿರುತ್ತಾರೆ. ಕೃಷಿಕ್ಷೇತ್ರದಲ್ಲಿ ಅಂತಹ ಯಥೇಚ್ಛವಾಗಿ ದೊರೆಯುವ ಸಂಪನ್ಮೂಲವೆಂದರೆ ಕೃಷಿ ಕ್ಷೇತ್ರದಲ್ಲಿನ ಮಹಿಳೆಯರು. ಗ್ರಾಮೀಣ ಪ್ರದೇಶದಲ್ಲಿನ ಮಹಿಳೆಯರಲ್ಲಿ ಶೇ. 74 ರಷ್ಟು ಮಹಿಳೆಯರು ಕೃಷಿ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ ಶೇ. 28 ರಷ್ಟು ಮಹಿಳೆಯರು ಸಾಗುವಳಿದಾರರಿದ್ದಾರೆ. ಶೇ.46 ರಷ್ಟು ಕೃಷಿ ಕಾರ್ಮಿಕ ಮಹಿಳೆಯರಿದ್ದಾರೆ. ಕರ್ನಾಟಕದ ಅರ್ಥವ್ಯವಸ್ಥೆಯ ಕೃಷಿಕ್ಷೇತ್ರದಲ್ಲಿ ಮಹಿಳೆಯರದೇ ಸಿಂಹ ಪಾಲು. ವ್ಯವಸಾಯದ ಕೆಲಸಗಳಲ್ಲಿ ನಿರತರಾಗಿರುವ ಒಟ್ಟು ಜನರಲ್ಲಿ ಶೇ 51.21 ರಷ್ಟು ಮಹಿಳೆಯರಿದ್ದಾರೆ. ಪುರುಷರ ಸಂಖ್ಯೆ ಶೇ. 48.8 ರಷ್ಟು. ಅಂದರೆ ಪುರುಷರಿಗಿಂತ 6 ಲಕ್ಷ ಮಹಿಳೆಯರು ಅಧಿಕ ಸಂಖ್ಯೆಯಲ್ಲಿದ್ದಾರೆ 16.

ಕೃಷಿಗೆ ಮೂಲಾಧಾರವಾದ ಮಹಿಳೆಗೆ ಕೃಷಿಯಲ್ಲಿ ನೀಡಲಾಗುವ ಅಥವಾ ಅವಳು ಮಾಡುವ ಕೆಲಸಗಳಲ್ಲಿ ಶ್ರಮವೇ ಜಾಸ್ತಿ. ಅಲ್ಲಿ ಮತ್ತೆ ಮತ್ತೆ ಅದೇ ಮಾಡುವಂತಹ ಕೆಲಸಗಳು. ಅಂದರೆ ಅಲ್ಲಿ ಬುದ್ದಿ ಶಕ್ತಿ ಬೇಕಾಗಿಲ್ಲ. ಹೆಚ್ಚು ಶ್ರಮ ವಹಿಸಿ ಶ್ರದ್ಧೆಯಿಂದ ಮಾಡಿದರಾಯಿತು. ಉದಾ: ನಾಟಿ ಹಾಕುವುದು, ಕಳೆ ತೆಗೆಯುವುದು, ಕುಯ್ಲು ಮಾಡುವುದು ಹಿಗೆಯೇ. ಇಲ್ಲಿ ಯಾವುದೇ ತೀರ್ಮಾನ ಕೈಗೊಳ್ಳುವಂತಹ ಅವಶ್ಯಕತೆ ಇಲ್ಲ. ಆ ಒಂದು ಸ್ವಾತಂತ್ರ್ಯವೂ ಅವಳಿಗಿರುವುದಿಲ್ಲ.

ಕೃಷಿಯಲ್ಲಿ ಮಹಿಳೆ ಮಾಡುತ್ತಿದ್ದ ಮತ್ತು ಮಾಡುತ್ತಿರುವ ಪ್ರಮುಖ ಕೆಲಸವೆಂದರೆ, ಬೆಳೆ ಬೆಳೆದು ಬಂದ ನಂತರ ಸ್ವಚ್ಛಗೊಳಿಸಿ, ಬಿಸಿಲಲ್ಲಿ ಒಣಗಿಸಿ, ಶೇಖರಿಸಿಟ್ಟುಕೊಳ್ಳುವಂತಹ, ಅಂದರೆ ಅದನ್ನು ಮರು ಬಳಕೆ ಮಾಡಿಕೊಳ್ಳುವಂತಹ ಒಂದು ಚಟುವಟಿಕೆಗೆ ಪ್ರಾಧಾನ್ಯತೆ ಇತ್ತು. ಅಂದರೆ ಇಲ್ಲಿ ಬೀಜಗಳ ಸಂಸ್ಕರಣ, ಶೇಖರಣೆ ಮತ್ತು ಅವುಗಳನ್ನು ಮತ್ತೆ ಬಳಕೆ ಮಾಡಿಕೊಳ್ಳುವಂತಹ ಕಲೆ ಮಹಿಳೆಗೆ ಕರಗತವಾಗಿತ್ತು.

ಕೋಳಿ ಕೂಗುವ ಮುನ್ನವೇ ನಿದ್ರೆಯಿಂದ ಏಳುವ, ಅಂದರೆ ಬೆಳಗಿನ 4 ಘಂಟೆಗೆ ಎಚ್ಚೆತ್ತುಕೊಳ್ಳುವ ಮಹಿಳೆಯರು ಮನೆಯ ಕೆಲಸ ಮುಗಿಸಿಕೊಂಡು ಹೊಲದ ಕೆಲಸಗಳಿಗೆ ತೊಡಗುತ್ತಾರೆ. ಸಂಜೆ ತಡವಾಗಿ ಮನೆ ಸೇರುತ್ತಾರೆ. ಅದರ ನಂತರವೂ ಆಕೆಗೆ ವಿಶ್ರಾಂತಿ ಎಂಬುದಿಲ್ಲ 17.

ಮನೆಗೆ ಆದಾಯ ತರುವ ಕೃಷಿ ಚಟುವಟಿಕೆಯಲ್ಲಿ ಲಭ್ಯವಾಗುವ ಇವರು, ದನಕರುಗಳಿಗೆ ತಿನ್ನಲು ಮೇವು, ಮನೆಗೆ ಬೇಕಾದ ನೀರು, ಅಡುಗೆ ಮಾಡಲು ಸೌದೆ ತರುವುದರ ಜೊತೆಗೆ ಮೊಸರು, ಮಜ್ಜಿಗೆ ಬೆಣ್ಣೆ ಮಾಡಿ ಹತ್ತಿರದ ಪಟ್ಟಣಕ್ಕೆ ಹೋಗಿ ಮಾರಾಟ ಸಹ ಮಾಡಿಬರುತ್ತಾರೆ.

---

16. ಜನೇವರಿ 2000 ರಲ್ಲಿ ಕನ್ನಡ ವಿಶ್ವ ವಿದ್ಯಾಲಯ, ಹಂಪಿ ಇವರಿಂದ ಪ್ರಕಟಿತ, ಮಹಿಳಾ ಅಧ್ಯಯನ ಉತ್ತರಾಯಣ ಸಂಚಿಕೆ.ಲೇಖನ; ' ಕೃಷಿ ಮತ್ತು ಮಹಿಳೆ' ಲೇಖಕರು: ಸಿದ್ದಗಂಗಮ್ಮ.ಪುಟ ಸಂಖ್ಯೆ; 89,92.

17 .2007 ಮಹಿಳಾ ಅಧ್ಯಯನ ಕೇಂದ್ರ,ಕನ್ನಡ ಪಿಶ್ವಪಿದ್ಯಾಲಯ,ಹಂಪಿ ಇವರಿಂದ ಪ್ರಕಟಿತ 'ಮಹಿಳೆ ದುಡಿಮೆ ಮತ್ತು ಬಿಡುವು' ಪಸ್ತಕ,ಸಂಪಾದಕತ್ವ: ಡಾ: ಎಚ್ ಎಸ್ ಶ್ರೀಮತಿ,ಡಾ: ಶಿವಾನಂದ ಎಸ್ ವಿರಕ್ತಮಠ,ಡಾ: ಜೆ ಕೃಷ್ಣ, ಲೇಖನ: ಕೃಷಿ,ಗ್ರಾಮೀಣ ಸಮಾಜ ಮತ್ತು ಮಹಿಳೆ.ಲೇಖಕರು: ಕೆ,ಜಿ.ಗಾಯತ್ರಿದೇವಿ.ಪುಟ ಸಂಖ್ಯೆ.77.

ನಂತರ ಮನೆಗೆ ಬಂದು ಮನೆಗೆಲಸ, ಕುಟುಂಬದವರಿಗೆ ಬೇಕಾದ ಚಹಾ, ತಿಂಡಿ, ಮಧ್ಯಾಹ್ನದ ಊಟಕ್ಕೆ ಅಡುಗೆ ಮಾಡಿಟ್ಟು, ತನಗೆ ಊಟ ಕಟ್ಟಿಕೊಂಡು ಹೊಲಕ್ಕೆ ಹೋಗುವ ಹೊತ್ತಿಗೆ ಬೆಳಗಿನ 10 ಘಂಟೆಯಾಗಿರುತ್ತದೆ. ಅಲ್ಲಿ ಮತ್ತೆ ಮೈ ಮುರಿಯುವಂತಹ ದುಡಿತ. ಹೊಲದಲ್ಲಿ ಕಳೆ ಕೀಳುವುದರಿಂದ ಹಿಡಿದು ನೇಗಿಲ ಹೊತ್ತು ನಡೆಸುವ ಕೆಲಸಕ್ಕೂ ಮಹಿಳೆ ಮುಂದಾಗುತ್ತಾಳೆ [18].

ಹಾವೇರಿ ಜಿಲ್ಲೆಯ ಸವಣೂರು ತಾಲೂಕಿನ ಒಂಟಿ ಬಡ ಮಹಿಳೆಯೊಬ್ಬಳು ಜೀವನಕ್ಕೆ ಹೈನುಗಾರಿಕೆಯನ್ನು ಆಧರಿಸಿದ್ದಳು. ವಾರವಿಡೀ ತೆಗೆದಿಟ್ಟುಕೊಂಡ ಬೆಣ್ಣೆಯನ್ನು ಸವಣೂರಿನಿಂದ ಶಿಗ್ಗಾವಿಗೆ, ಶಿಗ್ಗಾವಿಯಿಂದ ಬಂಕಾಪೂರಕ್ಕೆ ಹೀಗೆ ಹತ್ತಿರದ ಪಟ್ಟಣಗಳಿಗೆ ತನ್ನದೇ ಸ್ವಂತ ಚಕ್ಕಡಿ (ಎತ್ತಿನ ಗಾಡಿ) ಯಲ್ಲಿ ತೆಗೆದುಕೊಂಡು ಹೋಗಿ ಮಾರಾಟ ಮಾಡಿ ಜೀವನ ಮಾಡುತ್ತಿದ್ದ ಈ ಸಂದರ್ಭದಲ್ಲಿ ತಾನೇ ಸ್ವತಃ ಚಕ್ಕಡಿ ನಡೆಸುತ್ತಿದ್ದ ಧೈರ್ಯ, ದಿಟ್ಟತನ ಇಂದಿಗೂ ಹಸಿ ಹಸಿರಾದ ನೆನಪನ್ನೇ ಉಳಿಸಿದೆ.

ಅರ್ಥಶಾಸ್ತ್ರಜ್ಞರೊಬ್ಬರ ಹೇಳಿಕೆಯಂತೆ **"ಬಡತನದ ಅತ್ಯಂತ ಉಲ್ಬಣ ಸ್ಥಿತಿಗೆ ಹೆದರದೆ ಅದನ್ನೆದುರಿಸುವ ಧೈರ್ಯ ಸಾಮರ್ಥ್ಯ ಮಹಿಳೆಗೆ ಮಾತ್ರ ಇರುತ್ತದೆ"**.(ಟಿ.ಆರ್.ಚಂದ್ರಶೇಖರ್,ಎಂ ಫಿಲ್,ಅವಧಿ–2009)

ಇಂಥಹ ಹಲವು ಕಷ್ಟ ಕಾರ್ಪಣ್ಯಗಳ ಮಧ್ಯೆಯೂ, ತನ್ನ ಕುಟುಂಬ ನಿರ್ವಹಣೆಗಾಗಿ ತನ್ನ ಜೀವಮಾನದ ಯಾವ ಹಂತದಲ್ಲೂ, ಸೋಮಾರಿ ಜೀವನ ನಡೆಸದೇ, ಪರೋಕ್ಷವಾಗಿ ಭಾರತದ ಆರ್ಥಿಕ ವ್ಯವಸ್ಥೆ,ಸಾಮಾಜಿಕ ವ್ಯವಸ್ಥೆಗೆ ತನ್ನದೆ ಆದಂತಹ ಪಾಲನ್ನು ನೀಡುತ್ತಾ ಬರುತ್ತಿದ್ದಾಳೆ. ಆದರೂ ಕೆಲವೊಂದು ಕಷ್ಟಕರ ಸಮಸ್ಯೆಗಳಿಂದ ಅವಳು ಹೊರ ಬರಲು ಸಾಧ್ಯವಾಗುತ್ತಿಲ್ಲಾ. ಅವುಗಳೆಂದರೆ,

1. ಕಡಿಮೆ ವೇತನ
2. ಅನಾರೋಗ್ಯ
3. ನಿಕೃಷ್ಟ ಗುಣ ಮಟ್ಟದ ಜೀವನ
4. ಮೇಲು ವರ್ಗದವರಿಂದ ಶೋಷಣೆ
5. ಲೈಂಗಿಕ ಕಿರುಕುಳ
6. ಕಡಿಮೆ ಉದ್ಯೋಗಾವಕಾಶ

ಹೀಗೆ ಹಲವಾರು ಸಮಸ್ಯೆಗಳಿಂದ ನರಳುತ್ತಿದ್ದಾಳೆ. ಇದಲ್ಲದೇ ಇತ್ತೀಚಿನ ಜಾಗತೀಕರಣ, ಉದಾರೀಕರಣ ನೀತಿಯಿಂದಾಗಿ ಸಾಕಷ್ಟು ಸಂಶೋಧನೆಗಳು, ಹೈಬ್ರಿಡ್ ತಳಿಗಳ ಉಪಯೊಗದಿಂದ, ಸರಿಯಾಗಿ ಮಳೆ ಬರದೇ ಇರುವುದರಿಂದ, ಗ್ರಾಮೀಣ ಭಾಗದ ಜನರು ಕೃಷಿಯಲ್ಲಿ ಸೋತು, ಪಟ್ಟಣಗಳಿಗೆ ವಲಸೆ ಹೋಗುವ ಸಂದರ್ಭಗಳು ಸಾಮಾನ್ಯವಾಗಿವೆ.

---

18. ಆಧಾರ. 2007 ಮಹಿಳಾ ಅಧ್ಯಯನ ಕೇಂದ್ರ,ಕನ್ನಡ ಪಿಶ್ವಪಿದ್ಯಾಲಯ,ಹಂಪಿ ಇವರಿಂದ ಪ್ರಕಟಿತ 'ಮಹಿಳೆ ದುಡಿಮೆ ಮತ್ತು ಬಿಡುವು' ಪಸ್ತಕ,ಸಂಪಾದಕತ್ವ: ಡಾ: ಎಚ್ ಎಸ್ ಶ್ರೀಮತಿ,ಡಾ: ಶಿವಾನಂದ ಎಸ್ ಪಿರಕ್ತಮಠ,ಡಾ: ಜೆ ಕೃಷ್ಣ, ಲೇಖನ: ಕೃಷಿ,ಗ್ರಾಮೀಣ ಸಮಾಜ ಮತ್ತು ಮಹಿಳೆ.ಲೇಖಕರು: ಕೆ,ಜಿ.ಗಾಯತ್ರಿದೇವಿ.ಪುಟ ಸಂಖ್ಯೆ.77,78.

ಗ್ರಾಮಕ್ಕೆ ಮೂಲ ಆಧಾರವಾದ ಕೃಷಿಯೇ ಪ್ರಾಧಾನ್ಯತೆ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಆ ಕೃಷಿಯನ್ನೇ ಜೀವನಕ್ಕೆ ಆಧಾರ ಮಾಡಿಕೊಂಡ ಮಹಿಳೆಯ ಸ್ಥಿತಿ ಎಷ್ಟೊಂದು ಅಸಹನೀಯವಾಗಿದೆ ಎಂಬುದು ಊಹಿಸಲು ನಿಲುಕದು.

ಕೃಷಿಯಲ್ಲಿ ಮಹಿಳಾ ಕೆಲಸಗಾರರ ಸಹಭಾಗಿತ್ವ ಅಧಿಕವಾಗಿದೆ. ಅದೂ ಕೂಲಿ ಕಾರ್ಮಿಕರಾಗಿ ಅವರ ಸಂಖ್ಯೆ ಹೆಚ್ಚಾಗುತ್ತಿದೆ. ದ್ವಿತಿಯ ಹಾಗೂ ತೃತೀಯ ವಲಯದಲ್ಲಿ ಅವರ ಸಹಭಾಗಿತ್ವವು ತುಂಬಾ ಕಡಿಮೆಯಾಗಿಯೇ ಇದೆ. ಅತಿ ಸಣ್ಣ ಮಹಿಳಾ ಕೆಲಸಗಾರರ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಳವಾಗಿದ್ದು, ಈ ಸ್ಥಿತಿಯು ಬಡ ಪ್ರದೇಶಗಳಲ್ಲಿ ಇನ್ನೂ ಶೋಚನೀಯವಾಗಿದೆ. ಇಷ್ಟೇ ಅಲ್ಲ, ಮಹಿಳಾ ಕೆಲಸಗಾರರು ತಮ್ಮ ಜೀವನೋಪಾಯಕ್ಕಾಗಿ ಕಡಿಮೆ ಕೂಲಿ ನೀಡುವ ಕೃಷಿಯನ್ನೇ ಅಧಿಕವಾಗಿ ಅವಲಂಬಿಸಿರುವಂತೆ ಕಂಡು ಬರುತ್ತದೆ. ಈ ಚಿತ್ರಣವು ಮಹಿಳಾ ಕೆಲಸಗಾರರಲ್ಲಿ ಅವರ ಪ್ರತಿಸ್ಪರ್ಧಿ ಪುರುಷ ಕೆಲಸಗಾರರಿಗಿಂತ ವಿಭಿನ್ನವಾಗಿದ್ದು, ಪುರುಷ ಕೆಲಸಗಾರರಲ್ಲಿನ ಹೆಚ್ಚಳವು ಸಮಾನವಾಗಿ ಎಲ್ಲ ಪ್ರದೇಶಗಳಲ್ಲಿ ಹಂಚಲ್ಪಡುತ್ತದೆ. ಮತ್ತು ಅವರಲ್ಲಿ ಅತಿ ಕೆಲಸಗಾರರ ಸಂಖ್ಯೆಯು ಹಿಂದೆ ಇರುವುದಕ್ಕಿಂತ ಅಧಿಕಗೊಂಡರೂ ಸಹ ಆ ಹೆಚ್ಚಳ ಶೇ 10 ಕ್ಕಿಂತ ಕಡಿಮೆಯಾಗಿದೆ. ಅಷ್ಟೆ ಅಲ್ಲ ಅದು 2001ರ ಹೊತ್ತಿಗೆ ಕೃಷಿಯ ಮೇಲಿನ ಅವರ ಅವಲಂಬನೆ ಇಳಿಮುಖಗೊಂಡಿದೆ. 1990ರ ಅವಧಿಯಲ್ಲಿ ರಾಜ್ಯದ ಆರ್ಥಿಕ ಅಭಿವೃದ್ಧಿ ಪರಕಾಷ್ಟೆಯ ಲಾಭಗಳು ಮಹಿಳಾ ಕೆಲಸಗಾರರನ್ನು ವಿಶೇಷವಾಗಿ ಬಡ ಪ್ರದೇಶದಲ್ಲಿರುವವರಿಗೆ ಇನ್ನೂ ತಲುಪಿದಂತೆ ಕಂಡು ಬರುದಿಲ್ಲ 19.

ಮಹಿಳಾ ಕೃಷಿ ಕಾರ್ಮಿಕರ ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ಮಹಿಳೆ ಖುದ್ದಾಗಿ ತಾವು ಸನ್ನದ್ದವಾಗಬೇಕಿದೆ. ಅದಕ್ಕೆ ಪ್ರತಿಯಾಗಿ ಸಮಾಜ ಸರಕಾರ ಅವಳಿಗೆ ಬೆಂಬಲ ನೀಡಿ ಪೋಷಿಸಬೇಕಿದೆ. ಈ ದಿಶೆಯಲ್ಲಿ ಹತ್ತು ಹಲವು ಸಂಕೀರ್ಣ ಸಮಸ್ಯೆಗಳನ್ನು ಎದುರಿಸುತ್ತಲೂ, ಅದೇ ದುಡಿಮೆಯಲ್ಲಿ ತನ್ನನ್ನು ತೊಡಗಿಸಿಕೊಂಡು ಕುಟುಂಬ ನಿರ್ವಹಣೆ ಮಾಡಲೇಬೇಕಾದ ಅವಶ್ಯಕತೆ ಗ್ರಾಮೀಣ ಮಹಿಳೆಯರಿಗೆ ಇರುವುದರಿಂದ ಅವಳು ಸಮಸ್ಯೆಗಳ ಸುಳಿಯಲ್ಲಿಯೇ ಬದುಕು ನಡೆಸುತ್ತಿದ್ದಾಳೆ.

ಪ್ರಸ್ತುತ ಸ್ಥಿತಿಯಲ್ಲಿ ಮಹಿಳಾ ಕೃಷಿ ಕಾರ್ಮಿಕರ ಸಾಮಾಜಿಕ ಆರ್ಥಿಕ ಸ್ಥಿತಿ ಗತಿ, ಆರೋಗ್ಯದ ಸ್ಥಿತಿ ಗತಿ, ಶೈಕ್ಷಣಿಕ ಸ್ಥಿತಿ ಗತಿ, ಕುಟುಂಬ ನಿರ್ವಹಣೆಯಲ್ಲಿ ರೈತ ಮಹಿಳೆಯ ಕೊಡುಗೆ ಮತ್ತು ಕೃಷಿ ಉತ್ಪಾದನೆಯಲ್ಲಿ ಮಹಿಳೆಯರ ಪಾಲು ಎಷ್ಟಿದೆ ಮತ್ತು ಅದರ ಪ್ರಾಮುಖ್ಯತೆ ಏನು ಎಂಬುದರ ಕುರಿತು ಅಧ್ಯಯನ ಮಾಡುವುದು ಅತ್ಯವಶ್ಯವಾಗಿದ್ದು, ಪ್ರಸ್ತುತ ಅಧ್ಯಯನದಲ್ಲಿ ಈ ದಿಶೆಯಲ್ಲಿ ಅಧ್ಯಯನ ಮಾಡುವ ಪ್ರಯತ್ನ ಮಾಡಲಾಗಿದೆ.

---

19. 'ಕರ್ನಾಟಕ ಮಾನವಾಭಿವೃದ್ಧಿ ವರದಿ.2005

1.4. ಅಧ್ಯಯನದ ಉದ್ದೇಶಗಳು :

ಪ್ರಸ್ತುತ ಅಧ್ಯಯನಕ್ಕೆ ಈ ಕೆಳಕಂಡ ಉದ್ದೇಶಗಳನ್ನು ನಿಗದಿಪಡಿಸಿಕೊಳ್ಳಲಾಗಿದೆ.

1. ಕೃಷಿ ಕಾರ್ಮಿಕ ಮಹಿಳೆಯ ಸಾಮಾಜಿಕ ಸ್ಥಿತಿ ಗತಿ.
2. ಕೃಷಿ ಕಾರ್ಮಿಕ ಮಹಿಳೆಯ ಆರ್ಥಿಕ ಸ್ಥಿತಿ ಗತಿ.
3. ಕೃಷಿ ಕಾರ್ಮಿಕ ಮಹಿಳೆಯ ಶೈಕ್ಷಣಿಕ ಸ್ಥಿತಿ ಗತಿ.
4. ಕೃಷಿ ಕಾರ್ಮಿಕ ಮಹಿಳೆಯ ಆರೋಗ್ಯದ ಸ್ಥಿತಿ ಗತಿ.
5. ಕುಟುಂಬ ನಿರ್ವಹಣೆಯಲ್ಲಿ ಕೃಷಿ ಕಾರ್ಮಿಕ ಮಹಿಳೆಯ ಕೊಡುಗೆ.

1.5. ಅಧ್ಯಯನದ ವಿಧಾನ :

1. ಪ್ರಾಥಮಿಕ ಮಾಹಿತಿ ಸಂಗ್ರಹ ವಿಧಾನ,
   ಪ್ರಶ್ನಾವಳಿ ಅನುಸೂಚಿ
2. ಅನುಷಂಗಿಕ ಮಾಹಿತಿ ಸಂಗ್ರಹ ವಿಧಾನ

ಈ ಮೇಲಿನ ಎರಡು ವಿಧಾನಗಳ ಮೂಲಕ ಮಾಹಿತಿ ಸಂಗ್ರಹಣೆ ಮಾಡಲಾಯಿತು.

1. ಪ್ರಾಥಮಿಕ ಮಾಹಿತಿ ಸಂಗ್ರಹ ವಿಧಾನದಲ್ಲಿ :

ಪ್ರಶ್ನಾವಳಿ ಅನುಸೂಚಿ ವಿಧಾನವನ್ನು ಬಳಸಿಕೊಂಡು ಕ್ಷೇತ್ರ ಕಾರ್ಯ ಕೈಗೊಂಡು ಸಮೀಕ್ಷೆಯ ಮೂಲಕ ಮಾಹಿತಿ ಸಂಗ್ರಹಿಸಲಾಯಿತು.

ಮಹಿಳಾ ಕೃಷಿಕಾರ್ಮಿಕರಲ್ಲಿ ಅನಕ್ಷರತೆಯು ಹೆಚ್ಚಿನ ಪ್ರಮಾಣದಲ್ಲಿರುತ್ತದೆ ಎಂಬ ಪೂರ್ವ ಮಾಹಿತಿಯ ಆಧಾರದ ಮೇಲೆ 'ಪ್ರಶ್ನಾವಳಿ ಅನುಸೂಚಿಯ' ಯನ್ನು ರಚಿಸಿಕೊಂಡು, ಪ್ರಶ್ನಾವಳಿಯಲ್ಲಿದ್ದ ಪ್ರಶ್ನೆಗಳನ್ನು ನಾವೇ ಕೇಳಿ, ಅದಕ್ಕೆ ಅವರಿಂದ ದೊರೆತ ಉತ್ತರ ಮತ್ತು ಪ್ರತಿಕ್ರಿಯೆಯನ್ನು ದಾಖಲಿಸಿಕೊಳ್ಳಲಾಯಿತು.

2. ಅನುಷಂಗಿಕ ಮಾಹಿತಿ ಸಂಗ್ರಹ ವಿಧಾನದಲ್ಲಿ :

ಅಧ್ಯಯನಕ್ಕೆ ಸಂಬಂಧಿಸಿದ ಇತರೇ ಮಾಹಿತಿಯನ್ನು ಮಾನವ ಅಭಿವೃದ್ಧಿ ವರದಿಗಳು, ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಈಗಾಗಲೇ ನಡೆದು ಹೋದಂತಹ ಕೆಲ ಅಧ್ಯಯನಗಳ ಮೂಲಕ ಹಲವಾರು ಲೇಖಕರ, ಅರ್ಥಶಾಸ್ತ್ರಜ್ಞರ, ಸಮಾಜಶಾಸ್ತ್ರಜ್ಞರ ಪ್ರಕಟಿತ ಬರಹಗಳು, ಪುಸ್ತಕಗಳು, ದಿನಪತ್ರಿಕೆಗಳು,ಲೇಖನ, ವರದಿಗಳ ಮೂಲಕ ಮಾಹಿತಿ ಸಂಗ್ರಹಣ ಮಾಡಲಾಯಿತು.

05. ಅಧ್ಯಯನದ ವ್ಯಾಪ್ತಿ.

ಬೆಳಗಾವಿ ಜಿಲ್ಲೆಯ ಹತ್ತು ತಾಲೂಕುಗಳಲ್ಲಿ, ಜಿಲ್ಲಾ ಪ್ರದೇಶದಿಂದ 140 ಕೀ.ಮೀ ದೂರದಲ್ಲಿರುವ ಮತ್ತು ಮಹಾರಾಷ್ಟ್ರ ರಾಜ್ಯಕ್ಕೆ ಹೊಂದಿಕೊಂಡಿರುವಂತಹ ಗಡಿ ಪ್ರದೇಶ ಅಥಣಿ ತಾಲೂಕು, ಈ ಅಧ್ಯಯನಕ್ಕೆ ಒಳಗಾದ ಪ್ರದೇಶವಾಗಿದೆ. ಸಹಜವಾಗಿಯೇ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ಗಡಿ ವಿವಾದದಿಂದ ಸುಮಾರು 22 ಹಳ್ಳಿಗಳು ಮೂಲಸೌಕರ್ಯಗಳನ್ನು ಸಹ ಪಡೆಯುವಲ್ಲಿ ವಂಚಿತಗೊಂಡಿವೆ.

ಇಂಥ ಕ್ಷೇತ್ರದಲ್ಲಿ ಕೃಷಿಯೇ ಪ್ರಮುಖವಾದ ಉದ್ಯೋಗವಾಗಿದ್ದು ಮಳೆಯನ್ನಾಧರಿಸಿ ಶುಷ್ಕ ಬೇಸಾಯವಾಗಿದೆ. ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಮಹಾಬಳೇಶ್ವರ ಸಹ್ಯಾದ್ರಿ ಶ್ರೇಣಿಯಲ್ಲಿ ಉಗಮ ಹೊಂದಿ ಅಥಣಿ ತಾಲೂಕಿನ ಮಂಗಾವತಿಯ ಮೂಲಕ ಕರ್ನಾಟಕವನ್ನು ಪ್ರವೇಶಿಸಿದ ಕೃಷ್ಣಾ ನದಿಯು ತಾಲೂಕಿನಲ್ಲಿ ಸುಮಾರು 96 ಕೀ.ಮಿ ವರೆಗೆ ಹರಿದು ಬಾಗಲಕೋಟೆ ಜಿಲ್ಲೆಗೆ ಸೇರುತ್ತದೆ. ಈ ಹರಿಯುವಿಕೆಯ ಮಧ್ಯದಲ್ಲಿ ತಾಲೂಕಿನ 33 ಹಳ್ಳಿಗಳು ನೀರನ್ನು ಪಡೆದು ಸಂಪೂರ್ಣ ನೀರಾವರಿಯ ಮೂಲಕವೇ ವ್ಯವಸಾಯ ಮಾಡುತ್ತವೆ. ಉಳಿದಂತೆ ಇತರೆ 75 ಹಳ್ಳಿಗಳು ಮಳೆಯನ್ನೇ ಮುಖ್ಯವಾಗಿ ಆವಲಂಬಿಸಿವೆ.

ಆದ್ದರಿಂದ ಈ ಅಧ್ಯಯನದಲ್ಲಿ ತಾಲೂಕಿನ 20 ಹಳ್ಳಿಗಳನ್ನು ಆಯ್ಕೆ ಮಾಡಲಾಗಿದ್ದು, ಅವುಗಳಲ್ಲಿ 10 ಹಳ್ಳಿಗಳು ನೀರಾವರಿಗೆ ಒಳಪಟ್ಟಂತ ಪ್ರದೇಶಗಳು ಮತ್ತು 10 ಹಳ್ಳಿಗಳು ಒಣ ಬೇಸಾಯಕ್ಕೆ ಒಳಪಟ್ಟಂತಹ ಪ್ರದೇಶಗಳು.

ಸಮೀಕ್ಷೆಗೆ ಆಯ್ದುಕೊಳ್ಳಲಾದ ಗ್ರಾಮಗಳ ಪಟ್ಟಿ.

ಅ.ಸಂ	ನೀರಾವರಿ ಗ್ರಾಮಗಳು	ಅ.ಸಂ	ಒಣ ಬೇಸಾಯದ ಗ್ರಾಮಗಳು
01	ಕೃಷ್ಣಾ ಕಿತ್ತೂರ	01	ತೆಲಸಂಗ
02	ಉಗಾರ ಕೆ. ಎಚ್	02	ಕೋಹಳ್ಳಿ
03	ಶಿರಗುಪ್ಪಿ	03	ಕಕಮರಿ
04	ಐನಾಪೂರ	04	ಕೊಟ್ಟಲಗಿ
05	ಕಾಗವಾಡ	05	ಮದಭಾವಿ
06	ಮಂಗಸೂಳಿ	06	ಮಲಾಬಾದ
07	ಕರ್ಲಟ್ಟಿ	07	ಬಾಳಿಗೇರಿ
08	ಸತ್ತಿ	08	ಸುಟ್ಟಟ್ಟಿ
09	ಝುಂಜರವಾಡ	09	ಕೋಕಟನೂರ
10	ಅವರಕೋಡ	10	ಗುಂಡೇವಾಡಿ

ಗ್ರಾಮಗಳ ಆಯ್ಕೆಯಲ್ಲಿ ರ್‍ಯಾಂಡಮ್ ಪದ್ದತಿಯನ್ನು ಅನುಸರಿಸಲಾಗಿದ್ದು ಪ್ರತಿ ಗ್ರಾಮದಿಂದ ಎರಡು ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ.

06. ಅಧ್ಯಯನದ ಇತಿಮಿತಿಗಳು :

ಪ್ರಸ್ತುತ ಅಧ್ಯಯನದಲ್ಲಿ 'ದುಡಿಯುವ ಮಹಿಳೆ' ಎಂಬ ಶೀರ್ಷಿಕೆಯಡಿಯಲ್ಲಿ ಒಟ್ಟು ದುಡಿಯುವ ಮಹಿಳೆಯ ಸಮಸ್ಯೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಸಂಘಟಿತ ವಲಯದಲ್ಲಿ ದುಡಿಯುವಂತಹ ಅದರಲ್ಲೂ ಗ್ರಾಮೀಣ ಭಾಗದಲ್ಲಿ ಕೃಷಿಯಲ್ಲಿ ದುಡಿಯುವ ಮಹಿಳೆಯರನ್ನು ಮಾತ್ರ ಅಂದರೆ "ಮಹಿಳಾ ಕೃಷಿ ಕಾರ್ಮಿಕರು" ಈ ಬಗ್ಗೆ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಗ್ರಾಮೀಣ ಭಾಗದಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಈ ಅಧ್ಯಯನವು ಮಹಿಳಾ ಕೃಷಿ ಕಾರ್ಮಿಕರ ಸಮಾಜೊ-ಆರ್ಥಿಕ ಸ್ಥಿತಿಗತಿಗಳ ಬಗ್ಗೆ ನಡೆಸಿದಂತಹ ಒಂದು ಅಧ್ಯಯನವಾಗಿದೆ.

ಅಧ್ಯಾಯ – ಎರಡು

ಸಾಹಿತ್ಯದ ಪುನರಾವಲೋಕನ

ಅಧ್ಯಾಯ ಎರಡು

ಸಾಹಿತ್ಯದ ಪುನರಾವಲೋಕನ:

ಈ ಅಧ್ಯಯನದ ನಿಬಂಧ ಸಿದ್ಧಪಡಿಸುವ ಸಂದರ್ಭದಲ್ಲಿ ಅಧ್ಯಯನಕ್ಕೆ ಪೂರಕವಾಗುವಂತೆ ಈಗಾಗಲೇ ಸಿದ್ಧಪಡಿಸಿದಂತಹ ಅಧ್ಯಯನಗಳು, ಪ್ರಕಟಿತ ಪುಸ್ತಕಗಳಲ್ಲಿಯ ಲೇಖನಗಳು, ದಿನಪತ್ರಿಕೆ, ಸಾಪ್ತಾಹಿಕ, ಮಾಸಿಕ ಪತ್ರಿಕೆಗಳಲ್ಲಿ ಪ್ರಕಟಗೊಂಡ ಲೇಖನಗಳು, ಅಭಿವೃದ್ಧಿ ಕುರಿತ ವರದಿಗಳ ಅಧ್ಯಯನ ಮಾಡಿ ವಿಷಯ ಸಂಗ್ರಹಣೆ ಮಾಡಲಾಯಿತು.

01. 1994 ರಲ್ಲಿ **ಸುಲ್ತಾಚಂದ್ ಮತ್ತು ಸನ್ಸ್, ನ್ಯೂ ದೆಹಲಿ** ಇವರಿಂದ ಪ್ರಕಟವಾದ **ಈಶ್ವರ್** ಸಿ.**ಡಿಂಗ್ರಾ ಇವರು ಬರೆದ 'ದ ಇಂಡಿಯನ್ ಎಕನಾಮಿ ರಿರ್ಸೋರ್ಸಸಸ್, ಪ್ಲ್ಯಾನಿಂಗ್ ಡೆವೆಲಪ್ಮೆಂಟ್ ಮತ್ತು ಪ್ರಾಬ್ಲೆಮ್ಸ್'** ಇದರಲ್ಲಿ – ಈಶ್ವರ್. ಸಿ. ಡಿಂಗ್ರಾ ಇವರು ಬರೆದ ಅಭಿಪ್ರಾಯದ ಪ್ರಕಾರ ಕೃಷಿ ಕಾರ್ಮಿಕರು ಅಸಂಘಟಿತರು, ಅಶಿಕ್ಷಿತರು, ತಿಳುವಳಿಕೆ ಇಲ್ಲದವರು, ರಾತ್ರಿ ಹಗಲು ದುಡಿದು ಒಂದೇ ತರಹದ, ಅಂದರೆ ನಿಗದಿತ ವೇತನ ಪಡೆದು, ಋತುಮಾನದಲ್ಲಿ ವಲಸೆ ಹೋಗಿ ಕೆಲಸ ಮಾಡುವವರು, ಸಣ್ಣ ರೈತರು, ಇನ್ನಿತರ ರೈತರ ಭೂಮಿಯಲ್ಲಿ ಕೆಲಸ ಮಾಡುವವರಾಗಿದ್ದು, ಉಳಿದ ಕಾರ್ಮಿಕರಿಗೆ ಸಂಪೂರ್ಣವಾಗಿ ಅಥವಾ ತೃಪ್ತಿದಾಯಕ ಕೆಲಸದ ಅಭಾವವಿರುವುದರಿಂದ ಅವರು ಅರೆನಿರುದ್ಯೋಗಿಗಳಾಗಿರುವರು. ಕೆಲಸದ ನಿಯಮ ಮತ್ತು ಅವಧಿಯ ಬಗ್ಗೆ ಇವರು ಅರಿತಿರುವುದಿಲ್ಲ. ದುಡಿಯುವ ಕೈಯಲ್ಲಿ ಹೆಚ್ಚು ದುಡಿಯುವದು, ಹೆರುವ ಕೈಯಲ್ಲಿ ಹೆಚ್ಚು ಹೆರುವುದು, ಇವು ಕೃಷಿ ಕಾರ್ಮಿಕನ ಲಕ್ಷಣಗಳಾಗಿವೆ.

ಭಾರತದಲ್ಲಿ ಕೃಷಿ ಕಾರ್ಮಿಕರ ಬೆಳವಣಿಗೆ ಮತ್ತು ಆರ್ಥಿಕ ಬಡತನದ ಪರಿಸ್ಥಿತಿಯ ಕಾರಣಗಳಾದ ಜನಸಂಖ್ಯೆ ಬೆಳವಣಿಗೆ, ಉದ್ಯೋಗವಕಾಶಗಳ ಕೊರತೆ, ಹೆಚ್ಚು ಜನಸಂಖ್ಯೆ ಕೃಷಿಯನ್ನು ಅವಲಂಬಿಸಿರುವುದು, ಇವು ಕೃಷಿ ಕಾರ್ಮಿಕನ ಸಮಸ್ಯೆಗಳಾಗಿವೆ.

(ಆಧಾರ ಎಚ್.ಎನ್.ಚುಳಕಿ, ಸಂಶೋಧಕರು ಕೃಷಿ ಕಾರ್ಮಿಕರ ಸಮಸ್ಯೆಗಳು – ಬಾದಾಮಿ ಹಾಗೂ ಹುನಗುಂದ ತಾಲೂಕುಗಳ ಒಂದು ಅಧ್ಯಯನ, ಅರ್ಥಶಾಸ್ತ್ರ ವಿಭಾಗ, ಕ.ವಿ.ವಿ ಧಾರವಾಡ).

02. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರಿಂದ ಜನೇವರಿ, 2000 ರಲ್ಲಿ ಪ್ರಕಟಿತ ಮಹಿಳಾ ಅಧ್ಯಯನ ಉತ್ತರಾಯಣ ಸಂಚಿಕೆ ಇದರಲ್ಲಿ **ಸಿದ್ದ್ ಗಂಗಮ್ಮ ಇವರು ಬರೆದ 'ಕೃಷಿ ಮತ್ತು ಮಹಿಳೆ' ಲೇಖನದಲ್ಲಿ** ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಅಗಾಧ ಪಾತ್ರದ ಬಗ್ಗೆ ವಿವರಿಸಲಾಗಿದೆ. ಲೇಖಕರು, ಸಾಂಪ್ರದಾಯಿಕವಾದಂತಹ ಪರಂಪರಾಗತವಾಗಿ ಗ್ರಾಮೀಣ ಮಹಿಳೆಯರ ಬೆನ್ನೆಲುಬಾಗಿ ಬೆಳೆದು ಬಂದಂತಹ ಕೃಷಿಯು, ಅಭಿವೃದ್ಧಿಯ ಹೆಸರಲ್ಲಿ ಆಧುನೀಕರಣಗೊಂಡು, ಹೆಚ್ಚು ಹೆಚ್ಚು ಹಣ ಗಳಿಸುವ ಆಸೆಯಿಂದ, ಆಹಾರದ ಬೆಳೆಗಳನ್ನು ಬೆಳೆಯುವ ಬದಲು ಆಹಾರೇತರ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದ್ದರಿಂದ, ಮೂಲ ಕೃಷಿಯನ್ನು ನಂಬಿದ ಮಹಿಳೆಯರು ಕೆಲಸ ಕಳೆದುಕೊಳ್ಳತೊಡಗಿದರು.

ಪಾರಂಪರಿಕ ಕೃಷಿ ಕ್ಷೇತ್ರದಲ್ಲಿ ಸಾಗುವಳಿದಾರಳಾಗಿ, ಕೃಷಿ ಕಾರ್ಮಿಕಳಾಗಿ, ಕುಟುಂಬದ ಆರ್ಥಿಕತೆಗೆ ಬೆಂಗಾವಲಾಗಿ ದುಡಿಯುತ್ತಿದ್ದ ಮಹಿಳೆ, ಆಧುನಿಕ ಕೃಷಿ ಪದ್ಧತಿಯಿಂದ ಅವಳ ಪಾತ್ರ

ನಗಣ್ಯವೆನಿಸಿತು. ಈ ಅತಂತ್ರ ಸ್ಥಿತಿ ಕಳೆದು ಮತ್ತೆ ಕೃಷಿಯಲ್ಲಿ ದುಡಿಯುವ ಮಹಿಳೆಯರು ಸ್ವಾವಲಂಬಿಯಾಗಲು ಹಲವಾರು ಯೋಜನೆಗಳು ಜಾರಿಗೆ ಬಂದರೂ ಅದನ್ನು ಉಪಯೋಗಿಸಿಕೊಳ್ಳಲು ಗ್ರಾಮೀಣ ಮಹಿಳೆಯರಿಗೆ ಸಾಧ್ಯವಾಗಿಲ್ಲ. ಈ ದಿಶೆಯಲ್ಲಿ ಅವರನ್ನು ಅಣಿಗೊಳಿಸಬೇಕು. ಬದುಕುವ ದಾರಿ ಕಳೆದುಕೊಂಡ ಅವರಿಗೆ ಜೀವನ ನಿರ್ವಹಣೆಗೆ ಉದ್ಯೋಗ ಸೃಷ್ಟಿ ಮಾಡಬೇಕೆನ್ನುವ ಅಭಿಪ್ರಾಯವನ್ನು ನೀಡಿದ್ದಾರೆ.

03. ಜುಲೈ–ಆಗಸ್ಟ್ 2003 ರಲ್ಲಿ ಸಂಕ್ರಮಣ ಸಾಹಿತ್ಯ ಸಂಕಲನ ಪತ್ರಿಕೆಯಲ್ಲಿ ಲೇಖಕ **ಅರವಿಂದ ಚೊಕ್ಕಾಡಿ ಇವರು "ಅಮರ್ತ್ಯ ಸೇನರ ಪ್ರಗತಿಯ ದೃಷ್ಟಿ"** ಎಂಬ ಚಿಂತನೆಯಲ್ಲಿ – ಅಮರ್ತ್ಯ ಸೇನ್‌ರವರ "ತಂತ್ರಜ್ಞಾನದ ಆಯ್ಕೆ" ಎಂಬ ಪರಿಕಲ್ಪನೆಯ ಬಗ್ಗೆ ತಿಳಿಸುತ್ತಾರೆ. ಅಲ್ಲಿ ಗಾಂಧೀಜಿಯವರು ಪ್ರಗತಿ, ಅಭಿವೃದ್ಧಿ ಪಥದಲ್ಲಿ 'ಯಂತ್ರ ಭ್ರಾಂತಿ' ಬೇಡವೆಂದಿದ್ದರು. ಆದರೆ ಅದು ಆ ಕಾಲಮಾನಕ್ಕೆ ಸರಿ ಹೋಗಬಹುದಿತ್ತು, ಆದರೆ ಇಂದು ಆ ಕಾಲಕ್ಕೆ ಹಿಂದಿರುಗಲು ಸಾಧ್ಯವಿಲ್ಲ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಸೇನ್‌ರವರು– ಮಾನವನ ಪ್ರಗತಿಗೆ ಪೂರಕವಾದ ತಂತ್ರಜ್ಞಾನ ಬಳಸಿಕೊಂಡು, ಪ್ರಗತಿಗೆ ತೊಡಕಾದಂತಹ ತಂತ್ರಜ್ಞಾನವನ್ನು ನಾವು ನಿರಾಕರಿಸುವುದು ಅಗತ್ಯವೆನಿಸುತ್ತದೆ. ಎಂಬ ಬಗ್ಗೆ ತಿಳಿಸುತ್ತಾರೆ ಇದನ್ನು ನಾವು ನಮ್ಮ ಕೃಷಿಯಲ್ಲಿ ದುಡಿಯುವ ಮಹಿಳೆಯರ ಪರಿಸ್ಥಿತಿಗೆ ಹೋಲಿಸಿದರೆ,ಅತಿಯಾದ ತಂತ್ರಜ್ಞಾನದಿಂದ ಅನಕ್ಷರಸ್ಥರಾದ ಕೃಷಿ ಮಹಿಳೆಯರು ತಂತ್ರಜ್ಞಾನದಿಂದಾಗಿ ಕೈ ಕೆಲಸ ಕಳೆದುಕೊಂಡು, ಕೆಲಸವನ್ನು ಹುಡುಕುತ್ತಾ ಪಟ್ಟಣ ಸೇರಿ, ಅಲ್ಲಿ ಮುಗ್ಧ ಮನಸಿನ ಮಹಿಳೆಯರಿಗೆ ಆಗುತ್ತಿರುವ ಅನ್ಯಾಯದ ಪರಿಸ್ಥಿತಿಯನ್ನು ಡಾ॥ ವಾಸುದೇವ ಸೇಡಂ ಮತ್ತು ವಿಠೋಬ ಭೀಮಣ್ಣ ಇವರು "ಮಹಿಳಾ ಸಬಲೀಕರಣದಲ್ಲಿ ವಿಭಿನ್ನ ನೆಲೆಗಳು" ಇದರಲ್ಲಿ ಕಾಣಬಹುದಾಗಿದೆ.

04. ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಇವರಿಂದ 2004 ರಲ್ಲಿ ಪ್ರಕಟಿತ 'ಮಹಿಳಾ ಅಧ್ಯಯನ' ಸಂಯುಕ್ತ ಸಂಚಿಕೆ ಇದರಲ್ಲಿ ಡಿಸೆಂಬರ್ ಬಿ. ಆರ್. ಕವಿತಾರೈ ಇವರು ಬರೆದ "ಮಹಿಳೆಯರ ಬದುಕು ಬದಲಾದ ದಿಕ್ಕು" ಲೇಖನದಲ್ಲಿ,

ಸ್ಥಿತ್ಯಂತರ ಸಾಂಸ್ಕೃತಿಕ ಸಂದರ್ಭದಲ್ಲಿ ಮಹಿಳೆಯ ಕುರಿತು ಇದ್ದಂತಹ ವಾದಗಳು ಮತ್ತು ವಿಚಾರಗಳ ಬಗ್ಗೆ ತಿಳಿಸುತ್ತಾರೆ.

ಭಾರತದ ಊಳಿಗಮಾನ್ಯ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಒಡಲೊಳಗೆ ಗ್ರಾಮೀಣ ಪ್ರದೇಶಗಳಲ್ಲಿ ಸಮಿಶ್ರ ವ್ಯವಸ್ಥೆಯು ತಲೆದೋರಿ, ಅದರ ಶೋಷಣೆಗೆ ಗುರಿಯಾಗಿ ನಿರ್ಗತಿಕರಾದ ಮಹಿಳೆಯ ಬಗ್ಗೆ ವಿವರಿಸುತ್ತದೆ. ಅಗ್ಗದ ಶ್ರಮಶಕ್ತಿಯ ಮೂಲವಾಗಿ ಬಂಡವಾಳಶಾಹಿ ಕೈಗಾರಿಕೆಗಳಿಗೆ ಒಳಗಾಗಿ, ಊಳಿಗಮಾನ್ಯದ ಜೀತದಾಳುಗಳಾಗಿ ಮಹಿಳೆಯರು ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ಗುಲಾಮರಾದರು.

ಸ್ಥಿತ್ಯಂತರ ಸಾಂಸ್ಕೃತಿಕ ನೆಲೆಯಲ್ಲಿ **ಗಾಂಧೀವಾದದ** ಬಗ್ಗೆ ತಿಳಿಸುವಾಗ ವ್ಯಕ್ತಿಯ ಹಾಗೂ ಸಮಾಜದ ಪ್ರಗತಿಗೆ ಸಾಮೂಹಿಕ ಪ್ರಯತ್ನ ಮತ್ತು ಪರಸ್ಪರ ಸಹಕಾರ ಅನಿವಾರ್ಯ ಎಂದು

ಹೇಳುವ ಗಾಂಧೀವಾದವು ಸಾಮಾಜಿಕ ವ್ಯವಹಾರಗಳಲ್ಲಿ ಸ್ತ್ರೀ ಮತ್ತು ಪುರುಷರ ಸಹಭಾಗಿತ್ವ ಅನಿವಾರ್ಯವೆಂದು ಹೇಳುತ್ತಾರೆ.

"ಅಹಿಂಸೆ ನಮ್ಮ ಜೀವಿತ ನಿಯಮವಾಗಿದ್ದರೆ, ಭವಿಷ್ಯ ಹೆಂಗಸರ ಕಡೆಗಿದೆ". ಎಂಬ ಮಾತನ್ನು ಗಾಂಧೀಜಿಯವರು ಮಹಿಳೆಯರ ಸಾಮರ್ಥ್ಯದ ಬಗ್ಗೆ ಮಾತನಾಡುವಾಗ ತಿಳಿಸುತ್ತಾರೆ.

ಹಾಗೆಯೇ **ಅಂಬೇಡ್ಕರ ವಾದದ** ಬಗ್ಗೆ ತಿಳಿಸುವ ಲೇಖಕರು ಸಂವಿಧಾನದ ಪರಿಚ್ಛೇದ 15 ರ ಪ್ರಕಾರ ಜಾತಿ, ಲಿಂಗ ಬೇಧ, ಮತ, ಕುಲಗಳ ತಾರತಮ್ಯ ಮಾಡದಿರುವ ಹಕ್ಕು, ಪರಿಚ್ಛೇದ 38 ರ ಪ್ರಕಾರ ಸ್ತ್ರೀ ಮತ್ತು ಪುರುಷರಿಗೆ ಸರಿಸಮವಾದ ಜೀವನಾಂಶ ದೊರಕಿಸಬೇಕೆಂದು ತಿಳಿಸುತ್ತಾರೆ. ಸ್ತ್ರೀಯರಿಗೆ ಗಮನಾರ್ಹವಾದ ವ್ಯಕ್ತಿತ್ವ ನೀಡಲು ಪ್ರಯತ್ನಿಸಿದ ಅವರು ಮುಂದೆ ಸ್ತ್ರೀಯರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಗತಿ ಸುಧಾರಿಸದೇ ಯಾವುದೇ ದೇಶದ ಸರ್ವಾಂಗೀಣ ಪ್ರಗತಿ ಸಾಧ್ಯವಿಲ್ಲ. ಎಂದು ಹೆಳುತ್ತಾರೆ. ಸ್ತ್ರೀ ಸಂಘಟನೆಯ ಬಗ್ಗೆ ಅಪಾರ ವಿಶ್ವಾಸ ಹೊಂದಿದ್ದ ಅಂಬೇಡ್ಕರವರು **"ಸಮುದಾಯವೊಂದರ ಪ್ರಗತಿಯನ್ನು, ಅಲ್ಲಿಯ ಮಹಿಳಾ ಪ್ರಗತಿಯ ಮೂಲಕ ಅಂದಾಜಿಸುತ್ತೇನೆ"**. ಎಂದು ಹೇಳಿದ ಬಗ್ಗೆ ಚರ್ಚಿಸುತ್ತಾರೆ.

ಈ ಎಲ್ಲ ಅಂಶಗಳ ಬಗ್ಗೆ ಅತ್ಯಂತ ವೈಜ್ಞಾನಿಕವಾಗಿ ಚರ್ಚಿಸಿದ ಲೇಖಕರು, ಬಂಡವಾಳ ಶಾಹಿ ವ್ಯವಸ್ಥೆಯು ಆರ್ಥಿಕತೆಯ ಉಳಿವಿಗಾಗಿ ಹೇಗೆ ಮಹಿಳೆಯರನ್ನು ಕಾರ್ಮಿಕತೆಯ ಚಲನಾತ್ಮಕ ಘಟ್ಟಕ್ಕೆ ಎಳೆದು ತಂದೂ ಕೂಡ ಪ್ರಾಥಮಿಕ ಸ್ಥಿತಿಯಲ್ಲಿ 'ತಾಯ್ತನ'ದ 'ಕುಟುಂಬ'ದ ಊಳಿಗಮಾನ್ಯ ವ್ಯವಸ್ಥೆಯ 'ಜೀತಕಲ್ಪನೆ'ಯನ್ನು ಎಲ್ಲೂ ಒಡೆಯದಂತೆ ಕಾಪಾಡಿಕೊಂಡು ಬಂದು, ಇದರಿಂದ ಮಹಿಳೆಯರು ಅಗ್ಗದ ಕೂಲಿಗಳಾಗಿ ಮನೆಯಿಂದ ಹೊರಗೆ ದುಡಿಯುವುದಲ್ಲದೆ, ಅದೇ ದಿನದ ಅವಧಿಯಲ್ಲಿ ಮನೆಯ ಒಳಗೆ ಹೆಂಡತಿಯಾಗಿ, ತಾಯಿಯಾಗಿ ಎಂದೂ ಮುಗಿಯದ ಹೊರೆಯನ್ನು ಪ್ರತಿರೋಧ ವ್ಯಕ್ತಪಡಿಸದೇ ನಿಭಾಯಿಸಿದ ಬಗೆಯನ್ನು ವಿವರಿಸುತ್ತಾರೆ.

05. **ಕೆ. ಶಿವಚಿತ್ತಪ್ಪಾ** ಇವರ ಸಂಪಾದಕತ್ವದಲ್ಲಿ 2006 ರಲ್ಲಿ ಪ್ರಕಟಗೊಂಡ **'ಮಹಿಳಾ ಸಬಲೀಕರಣದ ವಿಭಿನ್ನ ನೆಲೆಗಳು'** ಇದರಲ್ಲಿ **ಡಾ॥ ವಾಸುದೇವ ಸೇಡಂ ಮತ್ತು ಎಚ್ ವಿಠೋಬ ಭೀಮಣ್ಣ** ಇವರು "ಕೃಷಿ ಕ್ಷೇತ್ರದ ಅರ್ಧಕ್ಕಿಂತ ಹೆಚ್ಚು ಭಾಗ ಮಹಿಳೆಯರಿಂದ ನಡೆಯುತ್ತಿದ್ದರೂ ಸಹ ಅವಳು ಕಡಿಮೆ ವೇತನ, ಅನಾರೋಗ್ಯ, ನಿಕೃಷ್ಟ ಗುಣಮಟ್ಟದ ಜೀವನ, ಮೇಲ್ವರ್ಗದವರಿಂದ ಶೋಷಣೆ, ಲೈಂಗಿಕ ಕಿರುಕುಳ ಇನ್ನಿತರ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚಿಸುತ್ತಾರೆ.

ಇಂಥ ಸಮಸ್ಯೆಗಳಿಂದ ರೋಸಿ ಹೋದ ಮಹಿಳೆಯರು ಗೊತ್ತಿರದ ಪ್ರದೇಶಗಳಲ್ಲಿ ಕೆಲಸ ಪಡೆಯುವ ಆಸೆಯಿಂದ ಕೆಂಪು ದೀಪಗಳಲ್ಲಿ ನಡೆಯುತ್ತಿರುವ ಲೈಂಗಿಕ ಕೃತ್ಯಗಳಿಗೆ ಬಲಿಯಾಗುತ್ತಿದ್ದಾರೆ ಎಂದೂ ತಿಳಿಸುತ್ತಾರೆ.

ಮಹಿಳೆಯ ಸಹಕಾರವಿಲ್ಲದೇ ಕೃಷಿ ಕ್ಷೇತ್ರ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲವಾದ್ದರಿಂದ, ಅವಳಿಗೆ ಸಾಕ್ಷರತೆ ನೀಡಿ, ಆಧುನಿಕ ಬೇಸಾಯದ ತರಬೇತಿ ನೀಡಿ, ಹಣಕಾಸು ಸಂಘಗಳನ್ನು ಪರಿಚಯಿಸಿ, ವೇತನ ತಾರತಮ್ಯ ನಿವಾರಿಸಿ, ಸರಕಾರದಿಂದ ದೊರಕುವ ಸೌಲಭ್ಯಗಳ ಬಗ್ಗೆ ತರಬೇತಿ

ನೀಡಿ ಅವಳೂ ಸಹ ಸಮಾಜದ ಮುಖ್ಯವಾಹಿನಿಯಲ್ಲಿ ತನ್ನನ್ನು ಗುರುತಿಸಿಕೊಳ್ಳುವಂತೆ ಮಾಡುವುದು ಅತ್ಯವಶ್ಯವಾಗಿದೆ. ಎಂದು ಅಭಿಪ್ರಾಯ ಪಡುತ್ತಾರೆ.

06. **ಡಾ॥ ಶಾಲಿನಿ ರಜನೀಶ್ ಇವರು ಸೆಪ್ಟೆಂಬರ್ 2008** ರಲ್ಲಿ ಬರೆದ **"ನಡೆ ಮುಂದೆ"** ಎಂಬ ಪುಸ್ತಕದಲ್ಲಿ 1976 ರಲ್ಲಿ ಮಹಿಳೆಯರ ವಿರುದ್ಧದ ಎಲ್ಲಾ ರೀತಿಯ ತಾರತಮ್ಯಗಳನ್ನು ತೊಡೆದು ಹಾಕುವ ಅಂತರಾಷ್ಟ್ರೀಯ ಒಡಂಬಡಿಕೆ (E D A W) ಯನ್ನು ರಚಿಸಿದ ಬಗ್ಗೆ ಆ ಪ್ರಕಾರ ಮಹಿಳೆಯು ಪುರುಷನಂತೆ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ನಾಗರಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಮಾನತೆ ಸಾಧಿಸುವುದನ್ನು ಈ ಒಡಂಬಡಿಕೆ ಉತ್ತೇಜಿಸುತ್ತದೆ. ಹಾಗೆಯೇ ಭಾರತವೂ ಇದಕ್ಕೆ ಸಹಿ ಹಾಕಿದ ಬಗ್ಗೆ ತಿಳಿಸುತ್ತದೆ.ಈ ದಿಶೆಯಲ್ಲಿ –

1. ಕೃಷಿ ವಿಭಾಗದಲ್ಲಿ ಹೆಚ್ಚಿನ ಮಹಿಳೆಯರು ವ್ಯವಸಾಯದ ವಿವಿಧ ಸಂಸ್ಕರಣಗಳಲ್ಲಿ ಭಾಗವಹಿಸುತ್ತಿದ್ದಾರೆ.

2. ಪಶು ಸಂಗೋಪನಾ ಕ್ಷೇತ್ರದಲ್ಲಿ ಪಾರಂಪರ್ಯವಾಗಿ ಸಣ್ಣ ಪಶುಪಾಲನಾ ಚಟುವಟಿಕೆಗಳಲ್ಲಿ ಮಹಿಳೆಯರು ಭಾಗವಹಿಸುವಿಕೆ ಹೆಚ್ಚಾಗಿಯೇ ಇದೆ.

3. ಅರಣ್ಯ ಕ್ಷೇತ್ರದಲ್ಲಿ ಮಹಿಳೆಯರೇ ಮೂರು ನಾಲ್ಕು ಘಂಟೆಗಳ ಕಾಲ ಶ್ರಮಿಸಿ ಸೌದೆ ಮತ್ತು ಮೇವುಗಳನ್ನು ಸಂಗ್ರಹಿಸುವುದೇ ಅವರ ಮೊದಲ ಜವಾಬ್ದಾರಿ ಆಗಿರುತ್ತದೆ. ಎಂದು ತಿಳಿಸುವ ಲೇಖಕರು, ಈ ತಾರತಮ್ಯ ಹೋಗಲಾಡಿಸಲು ಮತ್ತು ಮಹಿಳೆಯರನ್ನು ಮುಖ್ಯವಾಹಿನಿಗೆ ತರಲು ಸರಕಾರವು ರಚಿಸಿದ 'ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ'ಯ ಬಗ್ಗೆ ತಿಳಿಸುತ್ತಾರೆ.

ಈ ಪ್ರಕಾರ 1995-96 ನೇ ಸಾಲಿನಿಂದ ಅನುಷ್ಠಾನ ಗೊಳ್ಳುತ್ತಿರುವ ಈ ಯೋಜನೆಯಲ್ಲಿ 25 ಇಲಾಖೆಗಳು ಫಲಾನುಭವಿ ಆಧಾರಿತ ಯೋಜನೆಯಲ್ಲಿ 1/3 ಭಾಗದಷ್ಟು ಆರ್ಥಿಕ ಹಾಗೂ ಭೌತಿಕ ಆಯವ್ಯಯವನ್ನು ಮಹಿಳೆಯರಿಗಾಗಿ ಮೀಸಲಿಟ್ಟಿದೆ.

07. ಜೆ. ಡಿ. ಅಗರವಾಲ್, ಪಿ. ಸಿ. ಬನಸಲ್ ರವರು ತಮ್ಮ ಅಧ್ಯಯನದಲ್ಲಿ ಕೃಷಿ ಕಾರ್ಮಿಕರ ಅರ್ಥ, ಬೇಡಿಕೆ ಪೂರೈಕೆಯ ಲಕ್ಷಣಗಳನ್ನು ಕಾರ್ಮಿಕರ ಬೆಳವಣಿಗೆ, ಸಮಾಜದಲ್ಲಿ ಕೃಷಿ ಕಾರ್ಮಿಕರ ಸ್ಥಾನಮಾನ, ಕಾರ್ಮಿಕರ ಕುಟುಂಬಗಳ ಜೀವನಮಟ್ಟ, ಸಂಘಟನೆ, ರಾಜ್ಯ ನೀತಿ ಕನಿಷ್ಟ ಕೂಲಿಯ ನಿರ್ಧಾರ ಮತ್ತು ಸಲಹೆಗಳನ್ನು ವಿವರಣಾತ್ಮಕವಾಗಿ ವಿವರಿಸಿದ್ದಾರೆ. ಇವರ ಪ್ರಕಾರ ಕೃಷಿ ಕಾರ್ಮಿಕರು ಕೂಲಿಗಾಗಿ ಮತ್ತು ಸಣ್ಣ ಭೂ ಹಿಡುವಳಿಯನ್ನು ಹೊಂದಿದವರು ಕೃಷಿ ಕಾರ್ಮಿಕರಾಗಿದ್ದಾರೆ. ಶ್ರೀಮಂತ ರೈತರ ಮನೆಯಲ್ಲಿಯೇ ಊಟ ಮತ್ತು ವಸತಿ ಮಾಡುವವರಾಗಿದ್ದಾರೆ. ಕಾರ್ಮಿಕರ ಪೂರೈಕೆ ಮತ್ತು ಬೇಡಿಕೆಯು ಋತುಮಾನದಲ್ಲಿ ಹೆಚ್ಚಿಗೆ ಇರುತ್ತದೆ. ಸ್ತ್ರೀಯರು ಅಧಿಕ ದಿನಗಳವರೆಗೆ ದುಡಿಯುತ್ತಿದ್ದಾರೆ. ಅಂದರೆ ಪತಿ ಜೀತದಲ್ಲಿ ಇದ್ದರೆ, ಹೆಂಡತಿಯು ಅವನೊಂದಿಗೆ ದುಡಿಯುವ ಪ್ರವೃತ್ತಿಯಲ್ಲಿ ತೊಡಗಿದ್ದಾರೆ. ಕಾರ್ಮಿಕರ ಪೂರೈಕೆಯ ವಿವರಣೆಯನ್ನು ಜನಸಾಂದ್ರತೆಯ ಮೇಲಿಂದ ನಿರ್ಧರಿಸಿದ್ದಾರೆ. ಅಧಿಕ ಜನಸಾಂದ್ರತೆ ಇರುವ ಪ್ರದೇಶದಲ್ಲಿ ಕಾರ್ಮಿಕರ ಪೂರೈಕೆಯು ಹೆಚ್ಚು ಇರುತ್ತದೆ. ಕಡಿಮೆ ಜನಸಾಂದ್ರತೆ ಇರುವ ಪ್ರದೇಶದಲ್ಲಿ ಕಡಿಮೆ ಅಥವಾ ಸಮತೋಲನವಿರುತ್ತದೆ. ಇಂತಹ ಜನಸಾಂದ್ರತೆಯುಳ್ಳ ಪ್ರದೇಶದಲ್ಲಿ ಸ್ತ್ರೀಯರ ಕೂಲಿಯು ಪುರುಷರಿಗಿಂತ ಕಡಿಮೆ ಇರುವುದು. ಕೆಲವೇ ಕೆಲಸಗಳಿಗೆ ಮಾತ್ರ ಸ್ತ್ರೀಯರಿಗೆ ಮಾನ್ಯತೆ ನೀಡಲಾಗುತ್ತದೆ. ಉತ್ತರ ಭಾರತದಲ್ಲಿ ಅಧಿಕ ದಿನ ಮತ್ತು ದಕ್ಷಿಣ ಭಾರತದಲ್ಲಿ ಕಡಿಮೆ ಕೃಷಿ ಕೆಲಸದ ದಿನಗಳು ಇರುವುದನ್ನು ಈ ಗ್ರಂಥದಲ್ಲಿ

ವಿವರಿಸಲಾಗಿದೆ. ಉದಾಹರಣೆಗೆ ಪಂಜಾಬ, ಉತ್ತರ ಪ್ರದೇಶ ಇವು ಉತ್ತರ ವಲಯದ ರಾಜ್ಯಗಳು, ದಕ್ಷಿಣ ವಲಯದಲ್ಲಿ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ಮತ್ತು ತಮಿಳನಾಡು ಕಾರ್ಮಿಕರಿಗಿಂತ ಜಮಿನ್ದಾರಿ ಪದ್ದತಿಯಲ್ಲಿ ಕೃಷಿ ಕಾರ್ಮಿಕರ ಬೆಳವಣಿಗೆ ಹೆಚ್ಚು ಇರುವುದು ಕಂಡು ಬರುತ್ತದೆ. ಕೃಷಿ ಕಾರ್ಮಿಕರು ಹಿಂದುಳಿದ ಜನಾಂಗದವರಾಗಿದ್ದು, ಇವರ ಗಳಿಕೆಯನ್ನು ಕೈಗಾರಿಕೆಯ ಕಾರ್ಮಿಕರ ಗಳಿಕೆಗೆ ತುಲನಾತ್ಮಕವಾಗಿ ಅಧ್ಯಯನ ಮಾಡಿದ್ದಾರೆ. 'ಕೃಷಿ ಕಾರ್ಮಿಕರ ಜೀವನ ಮಟ್ಟ' ಎಂಬ ಅಧ್ಯಾಯದಲ್ಲಿ ಕೃಷಿ ಕಾರ್ಮಿಕರ ಕನಿಷ್ಠ ಆದಾಯ, ಕೀಳು ಜೀವನ ಮಟ್ಟ ಕುರಿತು ಅಧ್ಯಯನ ಮಾಡಲಾಗಿದೆ. ಇವರ ಜೀವನ ವೆಚ್ಚ ಪ್ರತಿಶತ 85.3% ರಷ್ಟು ,ಆಹಾರಕ್ಕೆ, 6.3% ರಷ್ಟು ಬಟ್ಟೆಗಳಿಗೆ, ಒಟ್ಟು 92% ರಷ್ಟು ಎಂದು ಕಂಡುಹಿಡಿದಿದ್ದಾರೆ. ಕಡಿಮೆ ಉತ್ಪಾದನೆ ಇದ್ದು ಅನುಭೋಗ ಹೆಚ್ಚುತ್ತಿರುವುದರಿಂದ ಋಣಭಾರ ಹೆಚ್ಚು ಇರುತ್ತದೆ. ಕೃಷಿ ಕಾರ್ಮಿಕರ ಮನೆಗಳು, ಹುಲ್ಲಿನ ಗುಡಿಸಲು ಅಥವಾ ಸಣ್ಣ ಮನೆಗಳಾಗಿದ್ದು, ಅವುಗಳಲ್ಲಿ ದನ–ಕರು ಮತ್ತು ಮನೆಯ ಸದಸ್ಯರು ವಾಸಿಸುತ್ತಾರೆ. ಈ ಮನೆಗಳು (ಮನೆಗಳು) ಅತೀ ಕಳಪೆ, ಕೀಳು ದರ್ಜೆಯ ಸಲಕರಣೆಯಿಂದ ನಿರ್ಮಿಸಲಾಗಿರುತ್ತವೆ. ಹೆಚ್ಚು ಮಳೆಯಾದರೆ ನೀರಿನಲ್ಲಿ ಇಡೀ ರಾತ್ರಿ ಕಳೆಯಬೇಕಾಗುತ್ತದೆ. ಮನೆ ಮಳೆಯಲ್ಲಿ ಸೋರುವುದು, ಬೆಚ್ಚಗಿನ ಸ್ಥಳಾವಕಾಶ ಸಿಗುವುದು ಕಷ್ಟ ಹಾಗೂ ಈ ಮನೆಗಳು ಮಳೆಗಾಲದಲ್ಲಿ ಕೊಳಚೆಯಿಂದ ಆವೃತವಾಗಿರುತ್ತವೆ.ಅಲ್ಲದೇ ಕೈಗಾರಿಕಾ ಕಾರ್ಮಿಕರ ಸಂಘಟನೆಯಂತೆ ಕೃಷಿ ಕಾರ್ಮಿಕರು ಸಂಘಟನೆ ಹೊಂದಿ ಈ ಸಂಘಟನೆಯಿಂದ ಕೂಲಿ, ಆದಾಯ ಮತ್ತು ಕೆಲಸದ ನಿಯಮಗಳನ್ನು ನಿರ್ಧರಿಸಿದಾಗ ಮಾತ್ರ ಕೃಷಿ ಕಾರ್ಮಿಕರ ಜೀವನ ಮಟ್ಟ ಮತ್ತು ಕೂಲಿಯನ್ನು ಹೆಚ್ಚಿಸಬಹುದು ಎಂದು ಸಲಹೆ ನೀಡಿದ್ದಾರೆ.

ಹೀಗೆ ಹಲವಾರು ರೀತಿಯಲ್ಲಿ ಕಾರ್ಮಿಕರ ಸಮಸ್ಯೆಗಳನ್ನು ಕುರಿತು ಡಾ॥ ಅಗರ್‌ವಾಲ್ ಮತ್ತು ಪಿ. ಸಿ. ಬನ್‌ಸಿಲ್‌ರವರು ತಮ್ಮ ಗ್ರಂಥದಲ್ಲಿ ವ್ಯಕ್ತಪಡಿಸಿದ್ದಾರೆ.

(ಆಧಾರ: 2008 ರಲ್ಲಿ ಆಧ್ಯಯನ ಮಾಡಲಾದ ಎಂ.ಫಿಲ್ ಪ್ರಬಂಧ. ಶ್ರೀಮತಿ ಭಾರತಿ ಪಾಟೀಲ)

08. 2007 **ರಲ್ಲಿ ಕನ್ನಡ ವಿಶ್ವ ವಿದ್ಯಾಲಯ ಹಂಪಿ, ಮಹಿಳಾ ಅಧ್ಯಯನ ಕೇಂದ್ರದಿಂದ ಪ್ರಕಟಿತ "ಮಹಿಳೆ, ದುಡಿಮೆ & ಬಿಡುವು" ಡಾ॥ ಎಚ್.ಎನ್. ಶ್ರೀಮತಿ, ಡಾ॥ ಶಿವಾನಂದ ವಿರಕ್ತಮಠ, ಡಾ॥ ಜೆ. ಕೃಷ್ಣ** ಇವರ ಸಂಪಾದಕತ್ವದಲ್ಲಿ ಬಂದ ಕೃತಿಯಲ್ಲಿ **ಡಾ॥ ಎಚ್.ಎನ್ ಶ್ರೀಮತಿ ಇವರು 'ಸಾಮಾಜಿಕ ನಿರೀಕ್ಷೆಯಲ್ಲಿ ಹೆಂಗಸಿನ ದುಡಿಮೆ ಮತ್ತು ಬಿಡುವು'** ಈ ಬಗ್ಗೆ ಮಾತನಾಡುತ್ತಾ–

ದುಡಿಮೆ ಮತ್ತು ಉತ್ಪಾದಕತೆ, ಉತ್ಪಾದಕತೆ ಮತ್ತು ಮಹಿಳೆ ಬಗ್ಗೆ ಬರೆಯುತ್ತಾ ಮಹಿಳೆ ದುಡಿಮೆ ಮತ್ತು ಬಿಡುವುಗಳ ಬಗ್ಗೆ ಚರ್ಚಿಸುತ್ತಾರೆ.

ಪುರುಷ ಪ್ರಧಾನವಾದ ಸಮಾಜದಲ್ಲಿ ಮಹಿಳೆಯರನ್ನು ಯಾವ ರೀತಿ ತಮ್ಮ ಬಂಧನದಲ್ಲಿ ವ್ಯವಸ್ಥಿತವಾಗಿ ತೊಡಗಿಸಿಕೊಂಡಿರುತ್ತಾರೆ ಮತ್ತು ಅವರು ಮಾಡುವ ಕೆಲಸವನ್ನು ಯಾವ ನೆಲೆಯಲ್ಲಿ ಗುರುತಿಸುತ್ತಾರೆ ಎಂಬ ಬಗ್ಗೆ ತಿಳಿಸುತ್ತಾರೆ. ಹಾಗೆಯೇ ಅವಳಿಗೆ ಬಿಡುವು ಎಂಬುದನ್ನು ಸಮಾಜ ಒದಗಿಸಿಯೇ ಇಲ್ಲ. ಒಂದು ಕಡೆ ಕುಕ್ಕರ್ ಜೋಡಿಸುತ್ತಾ, ಎಡಗೈಯಲ್ಲೇ ಪಟ ಪಟಾಂತ ಚಹಾ ಕುಡಿಯುವ ಬಗ್ಗೆ, ವಯಸ್ಸಾದ ಹೆಣ್ಣು ಮಕ್ಕಳು ವಿಧವೆಯರು ಬಿಡುವಾಗಿ ಕುಳಿತುಕೊಳ್ಳುವ ನೆಪದಲ್ಲಿ ಬತ್ತಿ ಹೊಸೆಯುವುದನ್ನೋ, ತರಕಾರಿ ಹೆಚ್ಚುವುದನ್ನೋ ರೂಡಿಸಿಕೊಂಡ ಬಗ್ಗೆ ಚರ್ಚಿಸುತ್ತಾರೆ.

ಅಂದರೆ ಮಹಿಳೆ ಹುಟ್ಟುತ್ತಲೇ ಅವಳು ಸಮಾಜದಲ್ಲಿ ತನಗಾಗಿ ಹುಟ್ಟುವ, ಬೆಸೆಯುವ ಬಂಧನಗಳಿಗೆ ಅನುಸರಿಸಿ ನಡೆಯಲೇಬೇಕು ಎಂಬ ಬೇಡಿಕೆಯನ್ನು ಒತ್ತಡ ಪೂರ್ವವಾಗಿಯೇ ಹೇರಿದ್ದು ಗೋಚರಿಸುತ್ತದೆ.

ಗಂಡಸಿನ ಜೀವನದ ಅವಿಭಾಜ್ಯ ಅಂಗವಾಗಿರುವ ಮಹಿಳೆಗೆ ಅವನ ಜೀವನದ ಪ್ರತಿಯೊಂದು ಗಳಿಗೆಯಲ್ಲೂ ಮಹತ್ವವೆನಿಸುವ ಅವಳ ಪಾತ್ರದ ಬಗ್ಗೆ ಮಾತನಾಡುತ್ತಾರೆ. ಆದರೆ ಅಲಂಕಾರಿಕ ಕೆಲಸ ಮಾತ್ರಕ್ಕೇನೇ ಮಹಿಳೆಯರನ್ನ ನಿಗದಿಪಡಿಸಿರುವುದು ಕಂಡುಬರುತ್ತದೆ. ಉದಾ: ಕುಂಬಾರಿಕೆಯಲ್ಲಿ ಗಡಿಗೆಗಳಿಗೆ ಅಲಂಕಾರ ಮಾಡಲು, ಕೃಷಿಯಲ್ಲಿ ಕಳೆ ತೆಗೆಯಲು ಹೀಗೆಯೇ ಅವಳನ್ನು ಉತ್ಪಾದಕತೆಯಲ್ಲಿ ಬಳಸಿಯೂ ಕೂಡ ಅವಳನ್ನು ಸಮಾಜವು–ದುಡಿಮೆಯ ಫಲವನ್ನು ಪಡೆಯುವ ಮತ್ತು ಅನುತ್ಪಾದಕ ಕೆಲಸಗಳಿಗೆ ಸೀಮಿತ ಅನ್ನುವ ರೀತಿ ಮಾತನಾಡುತ್ತಾರೆ.

ಆದರೆ ಅವಳ ಜೀವನ ಕ್ರಮ, ಕರ್ತವ್ಯ ಎಂದು ವಿಂಗಡಣೆ ಮಾಡುವುದರಿಂದ ಅವಳಿಗೆ ಎಂದೂ ಬಿಡುವು ಅನ್ನುವ ಹಕ್ಕು ದೊರೆಯದ ಬಗ್ಗೆ ಮಾತನಾಡುತ್ತಾರೆ.

ಇದೇ ಪುಸ್ತಕದಲ್ಲಿ **ಡಾ॥ ಇಂದಿರಾ ಜೈ ಪ್ರಕಾಶ್ ಇವರು ಹೇಳುತ್ತಾರೆ, ಈ ಮೊದಲು ಕುಟುಂಬದ ಆರ್ಥಿಕ ಚಟುವಟಿಕೆಗಳಿಗೆ ಸೀಮಿತವಾಗಿದ್ದ ಮಹಿಳೆಯ ದುಡಿಮೆ, ಇತ್ತೀಚೆಗೆ ಸಮಾಜದ ಎಲ್ಲ ಕಾರ್ಯಕ್ಷೇತ್ರಗಳಲ್ಲೂ ಕಾಣಿಸಿಕೊಂಡಿದೆ.** ಆದರೂ ಇಂದಿಗೂ ಕೂಡ ಹೆಣ್ಣು ಹೆಚ್ಚಾಗಿ ಅಸಂಘಟಿತ ಮತ್ತು ಕೃಷಿ ಸಂಬಂಧಿತ ವಲಯಗಳಲ್ಲೇ ದುಡಿಯುತ್ತಿದ್ದಾಳೆ. ಅನಿರ್ಧಿಷ್ಟ ಕೆಲಸದ ವೇಳೆ, ವಿರಾಮವಿಲ್ಲದ ದುಡಿತ, ಕಡಿಮೆ ಕೂಲಿ, ದೈಹಿಕ ಶ್ರಮ, ಸವಲತ್ತುಗಳು ಇಲ್ಲದಿರುವುದು, ಲೈಂಗಿಕ ಕಿರುಕುಳ ಮುಂತಾದವುಗಳನ್ನು ಎದುರಿಸಬೇಕಾಗುತ್ತದೆ. ಎಂದು ಅವರು ಅಭಿಪ್ರಾಯ ಪಡುತ್ತಾರೆ.

9. 2007 ರಲ್ಲಿ ಮಹಿಳಾ ಅಧ್ಯಯನ ಕೇಂದ್ರ ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರಿಂದ ಪ್ರಕಟಿತ, **ಡಾ॥ ಎಚ್. ಎನ್. ಶ್ರೀಮತಿ, ಡಾ॥ ಶಿವಾನಂದ ವಿರಕ್ತಮಠ, ಡಾ॥ ಜೆ ಕೃಷ್ಣ ಇವರ ಸಂಪಾದಕತ್ವದಲ್ಲಿ** ಪ್ರಕಟವಾದ **"ಮಹಿಳಾ ಆರ್ಥಿಕತೆ"** ಎಂಬ ಪುಸ್ತಕದಲ್ಲಿ **ಡಾ॥ ಬಿ. ಶೇಷಾದ್ರಿ** ಇವರು ಬರೆದ **'ಮಹಿಳೆಯರ ದುಸ್ಥಿತಿ ಮತ್ತು ಸಬಲೀಕರಣ'** ಕೆಲವು ಟಿಪ್ಪಣಿಗಳು ಈ ಲೇಖನದಲ್ಲಿ ಹೀಗೆ ಅಭಿಪ್ರಾಯ ಪಡುತ್ತಾರೆ.

ಮಾನವ ಜನಾಂಗದ ಸೃಷ್ಟಿ ಹಾಗೂ ಅದರ ಸುಸ್ಥಿರಗತಿ ಪ್ರಕ್ರಿಯೆಯ ಕೇಂದ್ರ ಧಾತು ಮಹಿಳೆ. ಆದರೆ ಅನೇಕ ಸಾಮಾಜಿಕ, ಆರ್ಥಿಕ, ರಾಜಕಿಯ ಮತ್ತು ಸಾಂಸ್ಕೃತಿಕ ಕಾರಣಗಳಿಗಾಗಿ ಸಾಮಾಜಿಕ ಜೀವನದ ಪ್ರಧಾನ ಧಾರೆಯಲ್ಲಿ ಆಕೆ ಅಂಚಿಗೆ ನೂಕಲ್ಪಟ್ಟಿದ್ದಾಳೆ.ವಿಶ್ವದ ಜನಸಂಖ್ಯೆಯಲ್ಲಿ ಮಹಿಳೆಯರು ಸರಿಸುಮಾರು ಶೇ.50 ರಷ್ಟಿದ್ದಾರೆ.ಒಟ್ಟು ದುಡಿಮೆಯಲ್ಲಿ ಶೇ.66 ರಷ್ಟನ್ನು ಅವರು ನಿಭಾಯಿಸುತ್ತಿದ್ದಾರೆ.ಆದರೆ ವಿಶ್ವದಲ್ಲಿ ಉತ್ಪಾದನೆಯಾಗುವ ಸಂಪತ್ತಿನಲ್ಲಿ ಅವರು ಕೇವಲ ಶೇ.10 ರಷ್ಟನ್ನು ಪಡೆಯುತ್ತಿದ್ದಾರೆ.ಆದರೆ ವಿಶ್ವದ ಸಂಪತ್ತಿನಲ್ಲಿ ಮಹಿಳೆಯರ ಮಾಲೀಕತ್ವದ ಪ್ರಮಾಣ ಕೇವಲ ಶೇಕಡ ಒಂದರಷ್ಟಿದೆ. ಅಭಿವೃದ್ಧಿಯ ಫಲಗಳು,ಸಂಪನ್ಮೂಲ ಹಾಗೂ ದುಡಿಮೆಗಳಿಗೆ ಸಂಬಂಧಿಸಿದಂತೆ ಮಹಿಳೆಯರು ತೀವ್ರ ಸ್ವರೂಪದ ಅಸಮಾನತೆಯನ್ನು ಅನುಭವಿಸುತ್ತಿದ್ದಾರೆ.ಅಸಮಾನತೆ,ಶ್ರೇಣೀಕರಣ ಹಾಗೂ ಪುರುಷಶಾಹಿ ಸಮಾಜಗಳಲ್ಲಿ ಇಂತಹ ಲಿಂಗ ಸಂಬಂಧಿ ಅಸಮಾನತೆಗಳು ಹೆಚ್ಚು ಸ್ಪಷ್ಟ ರೂಪದಲ್ಲಿ ಗೋಚರಿಸುತ್ತವೆ ಎಂದು ಹೇಳುತ್ತಾರೆ.

ಮಹಿಳೆಯರು ಜಾಗತೀಕರಣ ಪ್ರಕ್ರಿಯೆಯಿಂದಾಗಿ ಹೆಚ್ಚು ಆಘಾತಕ್ಕೆ ಒಳಗಾಗಿದ್ದಾರೆ ಎಂಬುದನ್ನು ಅನೇಕ ಅಧ್ಯಯನಗಳು ದೃಢಪಡಿಸಿವೆ. ಅವರು ಎರಡು ರೀತಿಯಲ್ಲಿ ಸಂಕಷ್ಟ ಎದುರಿಸುತ್ತಿದ್ದಾರೆ. ಮೊದಲನೆಯದಾಗಿ ವರ್ಗ ಸಂಬಂಧಿ ದೃಷ್ಟಿಯಿಂದ ಅವರು ಶೋಷಣೆಗೆ ಒಳಗಾಗುತ್ತಿದ್ದಾರೆ. ಎರಡನೆಯದಾಗಿ ಮಹಿಳೆಯರಿಗಾಗಿ ಲಿಂಗ ಸಂಬಂಧಿ ತಾರತಮ್ಯ ಎದುರಿಸುತ್ತಿದ್ದಾರೆ. ಪ್ರಸ್ತುತ ಟಿಪ್ಪಣಿಗಳಲ್ಲಿ ಮಹಿಳೆ ಎದುರಿಸುತ್ತಿರುವ ಎಲ್ಲ ಬಗೆಯ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ದುಸ್ಥಿತಿ, ತಾರತಮ್ಯ, ಅನಾನುಕೂಲ ಹಾಗೂ ಸಂಕೋಲೆಗಳಿಗೆ ಪ್ರಧಾನವಾದ ಪರಿಹಾರ ಸಾಧನವೆಂದರೆ ಮಹಿಳೆಯರ ಸಬಲೀಕರಣ.ಇಲ್ಲಿ ಸಬಲೀಕರಣವೇನೆಂಬುದನ್ನು ತೋರಿಸಲು ಪ್ರಯತ್ನಿಸಲಾಗಿದೆ.

ಲೇಖಕರು ಹೀಗೆ ಮುಂದುವರೆದು, ಸಮಾಜದಲ್ಲಿ ಉತ್ಪಾದನಾ ಮತ್ತು ಸಂತಾನೋತ್ಪತ್ತಿ ದುಡಿಮೆಗೆ ಮಹಿಳೆಯರ ಕಾಣಿಕೆ ಅಪಾರ. ಮಹಿಳೆಯರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಾನಮಾನಗಳನ್ನು ಉತ್ತಮಪಡಿಸುವ ದೃಷ್ಟಿಯಿಂದ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅನೇಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಇಷ್ಟಾದರೂ ಪ್ರಧಾನ ಸಾಮಾಜಿಕ ವಾಹಿನಿಯಲ್ಲಿ ಅವರು ಮೂಲೆಗುಂಪಾಗಿ ಬಿಟ್ಟಿದ್ದಾರೆ. ಸ್ವಾತಂತ್ರ್ಯವು ಪ್ರಾಪ್ತವಾದ 1947 ರಲ್ಲಿ ಮಹಿಳೆಯರನ್ನು ಯಾವ ಸಮಸ್ಯೆಗಳು ಕಾಡುತ್ತಿದ್ದವೋ, ಅವು ಇಂದಿಗೂ 2007 ರಲ್ಲೂ ಮಹಿಳೆಯರ ಸಮಸ್ಯೆಗಳಾಗಿ ಮುಂದುವರೆದಿವೆ. ಲಿಂಗ ತಾರತಮ್ಯದಿಂದ ಕೂಡಿದ ಪುರುಷ ಪ್ರಧಾನವಾದ ಸಮಾಜ, ಆರ್ಥಿಕತೆ ಹಾಗೂ ರಾಜಕಾರಣದ ಕಪಿಮುಷ್ಟಿಯಲ್ಲಿ ಸಿಲುಕಿರುವ ಮಹಿಳೆಯರನ್ನು ವಿವೇಚನೆಗೊಳಿಸುವ ಉದ್ದೇಶದಿಂದ 1970 ರ ದಶಕದಲ್ಲಿ ಮಹಿಳಾ ಅಭಿವೃದ್ಧಿ ದೃಷ್ಟಿಕೊನವು ಮಹಿಳಾ ಸಬಲೀಕರಣ ದೃಷ್ಟಿಕೋನವಾಗಿ ಪರಿವರ್ತನೆಗೊಂಡಿತ್ತು. ಇದೊಂದು ಸೈದ್ಧಾಂತಿಕ ಮಹಾಪಲ್ಲಟವಾಗಿದೆ. ಮಹಿಳೆಯರ ಸಬಲೀಕರಣ ಪ್ರಕ್ರಿಯೆಯು ಮುಂದುವರೆಯುತ್ತಿದೆ. ಆದರೂ ಸಂಘರ್ಷ ರಹಿತ ಸಮಾನತಾ ಚೌಕಟ್ಟಿನಲ್ಲಿ ಪುರುಷರು ಪಡೆದುಕೊಂಡಿರುವ ಸ್ಥಾನಮಾನಕ್ಕೆ ಸಮಾನವಾದ ಸ್ಥಾನಮಾನ ಪಡೆಯುವ ಸಾಮರ್ಥ್ಯವನ್ನು ಗಳಿಸಿಕೊಳ್ಳಲು ಮಹಿಳೆಯರು ಸಾಗಬೇಕಾದ ದಾರಿ ಬಹಳ ದೂರವಿದೆ.

ಇದೇ ಮೇಲೆ ತಿಳಿಸಿದ ಮಹಿಳಾ ಆರ್ಥಿಕತೆ ಪುಸ್ತಕದಲ್ಲಿ, **ಡಾ॥ ಛಾಯಾ ದೇಗಾಂವಕರ್** ಇವರು ಮಹಿಳೆಯರ ದುಡಿತ, ಸ್ವಾವಲಂಬನೆ ಸಬಲೀಕರಣದ ಬಗ್ಗೆ ಹೀಗೆ ಬರೆಯುತ್ತಾರೆ.

ಮಹಿಳೆ ಆರ್ಥಿಕವಾಗಿ ಸಬಲಳಾಗಬೇಕಾದರೆ ಅವಳಿಗೆ ನಾಲ್ಕು ಕಾಸು ಸಿಗಬೇಕು. ಇದರಿಂದ ಆತ್ಮವಿಶ್ವಾಸ ಬೆಳೆಯುತ್ತದೆ. ವ್ಯವಸ್ಥೆ ಜೊತೆಗೆ ಹೋರಾಡುವ ಶಕ್ತಿ ದೊರೆಯುತ್ತದೆ. ಮಹಿಳೆಯರು ಒಂದಿಷ್ಟು ಹಣ ಸಂಪಾದಿಸುತ್ತಾರೆ ಎಂದರೆ ಬದುಕುವ ಧೈರ್ಯ ಬರುತ್ತದೆ. ಸಬಲೀಕರಣದ ಮಾರ್ಗ ಸುಗಮವಾಗುತ್ತದೆ.

ಸಂಘಟಿತ ಕ್ಷೇತ್ರದಲ್ಲಿ, ಒಟ್ಟು ಉದ್ಯೋಗಾವಕಾಶಗಳಲ್ಲಿ 17 ಮಹಿಳೆಯರಿಗೆ ದೊರೆತಿದೆ ಉಳಿದ ಪ್ರಮಾಣ ಅಸಂಘಟಿತ ವಲಯದಲ್ಲಿ ತೊಡಗಿದ್ದಾರೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಸೇವಾ ವಲಯಗಳನ್ನು ತೆಗೆದುಕೊಂಡಾಗ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ 85% ಪ್ರಾಥಮಿಕ ವಲಯದಲ್ಲಿ 10% ಮಾಧ್ಯಮಿಕ ವಲಯದಲ್ಲಿ ತೊಡಗಿಕೊಂಡಿದ್ದಾರೆ. 2001-02 ರ ಅಂಕಿ–ಅಂಶಗಳ ಪ್ರಕಾರ ಮಹಿಳೆಯರು ಪ್ರಾಥಮಿಕ ಕ್ಷೇತ್ರದಲ್ಲಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡಿರುವುದು

ಕಂಡುಬರುತ್ತದೆ. ಇದಕ್ಕೆ ಮೂಲ ಕಾರಣ ಅಂದರೆ ಅವಳಿಗೆ ತರಬೇತಿ ಇಲ್ಲ, ಸಂಭಾವನೆ ಇಲ್ಲ, ಮಾನವ ಬಂಡವಾಳ ಇಲ್ಲ ಎಂದು ನೆಪ ಹೇಳುತ್ತಾರೆ.

ಲೇಖಕರು ಹಾಗೆಯೇ ಮುಂದುವರೆದು ಕೆಲಸದ ಯಾಂತ್ರೀಕರಣದಿಂದ ಮಹಿಳೆಯರು ಅವಕಾಶವಂಚಿತರಾಗಿ ಅಂಚಿಗೆ ತಳ್ಳುತ್ತಿರುವುದನ್ನು ತಿಳಿಸುತ್ತಾರೆ. ವಂದನಾ ಶಿವ ಎಂಬ ಪರಿಸರದಿಂದ ಸ್ತ್ರೀ ವಾದಿ ಇವರ ಪ್ರಕಾರ – ಪಾಶ್ಚಾತ್ಯ ವಿಜ್ಞಾನಿಗಳು ಕೃಷಿಯಲ್ಲಿ ಬಂದಾಗಿನಿಂದ ಮಹಿಳೆಯರನ್ನು ಅಂಚಿಗೆ ತಳ್ಳುತ್ತಿದ್ದಾರೆ ಎಂದು ತಿಳಿಸುತ್ತಾರೆ.

ಹಳ್ಳಿಗಳಲ್ಲಿ ಮಹಿಳೆಯರು ಹೊಲಕ್ಕೆ ಹೋಗುವುದು, ಬೀಜ ಹಾಕುವುದು, ಮೊದಲಾದ ಕೆಲಸ ಮಾಡುತ್ತಿದ್ದಾರೆ. ಆದರೆ ಮಹಿಳೆಯರ ಕೆಲಸ ಯಾಂತ್ರೀಕರಣದಿಂದಾಗಿ ಅಂಚಿಗೆ ತಳ್ಳಲ್ಪಡುತ್ತಿವೆ. ಮಹಿಳೆಯರಿಗೆ ಪಾಶ್ಚಾತ್ಯ ಜ್ಞಾನದ ತರಬೇತಿ ಕೊಡುತ್ತಿಲ್ಲ. ಪಾಶ್ಚಾತ್ಯ ಜ್ಞಾನ ಬಂದು ಸ್ಥಳೀಯ ಜ್ಞಾನದ ಮೇಲೆ ಪ್ರಭಾವ ಬೀರುತ್ತಿದೆ. ಆದರೆ ಮಹಿಳೆಯರು ಇನ್ನೂ ಹಳೆಯ ವಿಧಾನಗಳನ್ನೇ ಬಳಸುತ್ತಾರೆ.

ಈ ರೀತಿಯ ಯಾಂತ್ರೀಕರಣದಿಂದಾಗಿ ಮಹಿಳೆಯರು ಕೃಷಿಯಿಂದ ಹೊರಬರುತ್ತಿದ್ದಾರೆ. ಸಾಗುವಳಿ ಪದ್ಧತಿಯಿಂದ ಹೊರಬರುತ್ತಿದ್ದಾರೆ. ಇದು ಪ್ರಮುಖವಾಗಿ ಅವಳ ಸಬಲೀಕರಣದ ಮೇಲೆ ಕೆಟ್ಟ ಪ್ರಭಾವ ಬೀರುತ್ತಿದೆ. ಅದಕ್ಕಾಗಿ ಮಹಿಳೆಯರಿಗೆ ಹೊಸ ಕೃಷಿ ವಿಧಾನಗಳಲ್ಲಿ ತರಬೇತಿ ಹೇಳಿ ಕೊಡಬೇಕು ಎಂದು ಅಭಿಪ್ರಾಯ ಪಡುತ್ತಾರೆ.

ಅಧ್ಯಾಯ – ಮೂರು

ಅಧ್ಯಯನ ಕ್ಷೇತ್ರದ ಪಾರ್ಶ್ವನೋಟ

ಅಧ್ಯಾಯ ಮೂರು

ಅಧ್ಯಯನ ಕ್ಷೇತ್ರದ ಪಾರ್ಶ್ವ ನೋಟ

ಕರ್ನಾಟಕ ರಾಜ್ಯದ ಸಕ್ಕರೆಯ ಜಿಲ್ಲೆಯೆಂದೇ ಹೆಸರಾದದ್ದು ಬೆಳಗಾವಿ ಜಿಲ್ಲೆ.ಜಿಲ್ಲೆಯ 10 ತಾಲೂಕುಗಳಲ್ಲಿ ಅಥಣಿ ತಾಲೂಕು ಕರ್ನಾಟಕ ರಾಜ್ಯ ಮತ್ತು ಮಹಾರಾಷ್ಟ್ರ ರಾಜ್ಯಕ್ಕೆ ಹೊಂದಿಕೊಂಡಂತಹ ಗಡಿ ತಾಲೂಕು ಆಗಿದೆ. ಕೃಷಿಯೇ ಪ್ರಮುಖ ಉದ್ಯೋಗವಾಗಿರುವ ಈ ತಾಲೂಕಿನಲ್ಲಿ ಕಬ್ಬು ಪ್ರಮುಖ ಬೆಳೆಯಾಗಿದೆ.

ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ 72,116 ಜನ ಗಂಡಸರು, 39,539 ಜನ ಹೆಂಗಸರು ಒಟ್ಟು 1,11,655 ಜನ ಹಿಡುವಳಿದಾರರು (ಖಾತೆದಾರರು) ಕೃಷಿಯಲ್ಲಿ ತೊಡಗಿದ್ದು ತಾಲೂಕಿನ 35,846 ಜನ ಗಂಡಸರು ಮತ್ತು 47,815 ಜನ ಹೆಂಗಸರು ಒಟ್ಟು 83,661 ಜನರು ಕೃಷಿ ಕಾರ್ಮಿಕರು ವ್ಯವಸಾಯ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಒಟ್ಟಾರೆ ಕೃಷಿ ಕ್ಷೇತ್ರದಲ್ಲಿ ಸಾಗುವಳಿದಾರರಾಗಿ ಮತ್ತು ಕಾರ್ಮಿಕರಾಗಿ 87,354 ಜನ ಮಹಿಳೆಯರು ದುಡಿಯತ್ತಿದ್ದಾರೆ. ಈ ಮಹಿಳೆಯರ ಆರ್ಥಿಕ,ಸಾಮಾಜಿಕ,ಶೈಕ್ಷಣಿಕ ಮತ್ತು ಅವರ ಆರೋಗ್ಯದ ಸ್ಥಿತಿ ಗತಿಗಳೇನು ಎಂಬುದನ್ನು ಅಧ್ಯಯನ ಮಾಡುವುದಕ್ಕಾಗಿ ಈ ಅಥಣಿ ತಾಲೂಕಿನ ಗ್ರಾಮೀಣ ಭಾಗವನ್ನು ಅಧ್ಯಯನ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಳ್ಳಲಾಯಿತು.

ಕ್ಷೇತ್ರದ ಭೌಗೋಳಿಕ ಅಂಶಗಳು :

ವಿಸ್ತೀರ್ಣ	:	1994.96 ಚ.ಕಿ.ಮೀ
ಸಮುದ್ರ ಮಟ್ಟದಿಂದ ಇರುವ ಎತ್ತರ	:	2,410 ಅಡಿ
ವ್ಯಾಪ್ತಿ	:	
ಪೂರ್ವ ರೇಖಾಂಶ	:	75 ಡಿಗ್ರಿ ಸೆಲ್ಸಿಯಸ್ ದಿಂದ 75 .05 ಡಿಗ್ರಿ ಸೆಲ್ಸಿಯಸ್ ದವರೆಗೆ.
ಉತ್ತರ ಅಕ್ಷಾಂಶ	:	16 .05 ಡಿಗ್ರಿ ಸೆಲ್ಸಿಯಸ್ ದಿಂದ 16 .17 ಡಿಗ್ರಿ ಸೆಲ್ಸಿಯಸ್ ದವರೆಗೆ.
ಮೇರೆಗಳು	:	
ಪೂರ್ವಕ್ಕೆ	:	ವಿಜಾಪೂರ
ಪಶ್ಚಿಮಕ್ಕೆ	:	ಶಿರೋಳ, (ಕೊಲ್ಲಾಪೂರ ಜಿಲ್ಲೆ (ಮ.ರಾ)
ದಕ್ಷಿಣಕ್ಕೆ	:	ಚಿಕ್ಕೋಡಿ, ರಾಯಭಾಗ, ಜಮಖಂಡಿ
ಉತ್ತರಕ್ಕೆ	:	ಸಾಂಗಲಿ ಜಿಲ್ಲೆ.
ಗ್ರಾಮಗಳು	:	89

ಹೋಬಳಿ	:	ಕಂದಾಯ ಆಡಳಿತ ದೃಷ್ಟಿಯಿಂದ 4 ಹೋಬಳಿಗಳನ್ನಾಗಿ ಮಾಡಲಾಗಿದೆ. 1) ಅನಂತಪೂರ 2) ಅಥಣಿ 3) ಕಾಗವಾಡ 4) ತೇಲಸಂಗ
ಗ್ರಾಮ ಪಂಚಾಯತಿ	:	51
ಒಟ್ಟು ಜನಸಂಖ್ಯೆ	:	4,61,862 (2001 ರ ಜನಗಣತಿ)
ಮಹಿಳೆಯರು	:	2,24,984
ಪುರುಷರು	:	2,36,878
ನಗರ	:	40,950
ಗ್ರಾಮೀಣ	:	4,20,912
ಲಿಂಗಾನುಪಾತ	:	1000 ಕ್ಕೆ 949
ಪ್ರತಿ.ಚ.ಕಿ.ಮೀ ಜನಸಂಖ್ಯೆ	:	231

ಸಾಕ್ಷರತಾ ಪ್ರಮಾಣ :

	ಗ್ರಾಮೀಣ	ನಗರ	ಒಟ್ಟು
ಗಂಡು	71.21	86.18	72.54
ಹೆಣ್ಣು	47.95	67.71	49.74
ಒಟ್ಟು	59.86	77.08	61.40

ಆಧಾರ :ವರದಿ –2008-2009

ಕೃಷಿಗೆ ಸಂಬಂಧಿಸಿದಂತೆ ಸಾಮಾನ್ಯ ಮೂಲ ಮಾಹಿತಿಗಳು:

ಅಥಣಿ ತಾಲೂಕಿನ ಭೌಗೋಳಿಕ ಕ್ಷೇತ್ರ 1,99,513 ಹೆಕ್ಟೇರ ಇರುತ್ತದೆ. ಇದರಲ್ಲಿ 3173 ಹೆಕ್ಟೇರ ಭೂಮಿ ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿಯಾಗಿದ್ದು 2134 ಹೆಕ್ಟೇರ ಭೂಮಿ ಕಾಯಂ ಗೋಮಾಳವಾಗಿರುತ್ತದೆ. ಹಾಗೂ 129 ಹೆಕ್ಟೇರ ಭೂಮಿ ವೃಕ್ಷ ಮತ್ತು ತೋಟಗಳು (ಗಿಡಗಳ ಬನಗಳು) ಇವೆ. ಅಲ್ಲದೇ 581 ಹೆಕ್ಟೇರ ಭೂಮಿ ಅರಣ್ಯ, 6,468 ಹೆಕ್ಟೇರ ಭೂಮಿ ವ್ಯವಸಾಯೇತರ, (ಬಿನ್‌ಶೇತ್ಕಿ) 4,364 ಹೆಕ್ಟೇರ ಭೂಮಿ ಬಂಜರು (ಕಾಯಂ ಪಡ) ಆಗಿದ್ದು, 31,628 ಹೆಕ್ಟೇರ ಭೂಮಿ ಚಾಲ್ತಿ ಬೀಳು ಮತ್ತು 1,074 ಹೆಕ್ಟೇರ ಭೂಮಿ ಇತರ ಬೀಳು ಭೂಮಿ ಆಗಿರುತ್ತದೆ. ತಾಲೂಕಿನ ಭೂಮಿಯಲ್ಲಿ 1,49,964 ಹೆಕ್ಟೇರ ಭೂಮಿ ಬಿತ್ತನೆಗೆ ಯೋಗ್ಯವಾಗಿದೆ. ಮುಂಗಾರಿ ಹಂಗಾಮಿನಲ್ಲಿ 1,49,964 ಹೆಕ್ಟೇರ ಭೂಮಿ ಬಿತ್ತನೆಯಾಗುತ್ತಿದ್ದು. 39,768 ಹೆಕ್ಟೇರ ಭೂಮಿಯಲ್ಲಿ ಒಂದಕ್ಕಿಂತ ಹೆಚ್ಚು ಸಲ ಬಿತ್ತನೆ ಮಾಡುವ ಭೂಮಿಯಾಗಿದೆ. ಒಟ್ಟು ತಾಲೂಕಿನ ವ್ಯಾಪ್ತಿಯಲ್ಲಿ 1,89,732 ಹೆಕ್ಟೇರ ಭುಮಿ ಬಿತ್ತನೆ ಮಾಡಿ ಬೆಳೆಗಳನ್ನು ಬೆಳೆಯಲಾಗುತ್ತದೆ. ತಾಲೂಕಿನ ಜನಸಾಂದ್ರತೆಯಲ್ಲಿ ಬಹುಪಾಲು ಜನತೆಯ ಮುಖ್ಯ ಉದ್ಯೋಗ ಕೃಷಿ ಆಗಿರುತ್ತದೆ.

ಈ ತಾಲೂಕಿನ ವ್ಯಾಪ್ತಿಯ ದಕ್ಷಿಣ ಭಾಗದಲ್ಲಿ ಕೃಷ್ಣಾ ನದಿ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿಯುತ್ತಿದ್ದು ನದಿಯ ಎರಡು ದಡಗಳಲ್ಲಿ ಅತೀ ಫಲವತ್ತಾದ ಉತ್ತಮ

ರೇವೆ ಮಣ್ಣಿನ ಭೂಮಿ ಇರುತ್ತದೆ ಹಾಗೂ ನದಿ ದಡದಿಂದ ಸುಮಾರೂ 20 ಕಿ.ಮೀ ಅಂತರದವರೆಗೆ ಆಳವಾದ ಎರೆ ಭೂಮಿ ಇರುತ್ತದೆ. ಉಳಿದ ಭಾಗದಲ್ಲಿ (ದಕ್ಷಿಣ ದಿಕ್ಕಿನಲ್ಲಿ) ಬಿರಸು ಎರೆ (ಕರ್ಲ) ಭೂಮಿಯಾಗಿದೆ ಮತ್ತು ಹೆಚ್ಚಿನ ಭೂಮಿ ಗರಸು, ಮುರಮು ಭೂಮಿಯಾಗಿದೆ. ಆದಾಗ್ಯೂ ತಾಲೂಕಿನ ಭೂಮಿಯಲ್ಲಿ ಸಾರಜನಕ, ಪೋಟ್ಯಾಶಿಯಂ, ರಂಜಕ ಪೋಷಕಾಂಶಗಳು ತಕ್ಕ ಮಟ್ಟಿಗೆ ಚೆನ್ನಾಗಿದ್ದು ಯಾವುದೇ ಸಮಸ್ಯಾತ್ಮಕ ಭೂಮಿ ಇರುವುದಿಲ್ಲ. ಆದರೆ ಇತ್ತಿತ್ತಲಾಗಿ ನದಿ ನೀರು ಉಪಯೋಗಿಸುವ ಪ್ರದೇಶಗಳಲ್ಲಿ ಭೂಮಿ ಸವಳು ಆಗ ತೊಡಗಿದೆ. ತಾಲೂಕಿನಲ್ಲಿ 1 ಹೆಕ್ಟೇರಗಿಂತ ಕಡಿಮೆ ಭೂಮಿ ಹೊಂದಿದ ಹಿಡುವಳಿದಾರರು 1,65,586 ಇದ್ದು, ಅವರು ಹೊಂದಿದ ಭೂಮಿ 8,22,5 ಹೆಕ್ಟೇರ ಇದೆ. 1 ರಿಂದ 2 ಹೆಕ್ಟೇರ ಭೂಮಿ ಹೊಂದಿರುವ ಹಿಡುವಳಿದಾರರು 2007 ಜನವಿದ್ದು, 28,864 ಹೆಕ್ಟೇರ ಭೂಮಿ ಹೊಂದಿರುತ್ತಾರೆ. 2 ರಿಂದ 4 ಹೆಕ್ಟೇರ ಭೂಮಿ ಹೊಂದಿರುವ ಹಿಡುವಳಿದಾರರು 18,596 ಜನರಿದ್ದು, ಅವರು ಹೊಂದಿದ ಭೂಮಿ 50,900 ಹೆಕ್ಟೇರ ಇರುತ್ತದೆ. 4 ರಿಂದ 10 ಹೆಕ್ಟೇರ ಭೂಮಿ ಹೊಂದಿರುವ ಹಿಡುವಳಿದಾರರು 11,350 ಜನರಿದ್ದು, 67,334 ಹೆಕ್ಟೇರ ಭೂಮಿ ಹೊಂದಿರುತ್ತಾರೆ ಹಾಗೂ 10 ಹೆಕ್ಟೇರಗಿಂತಲೂ ಹೆಚ್ಚು ಭೂಮಿ ಹೊಂದಿರುವ ದೊಡ್ಡ ಹಿಡುವಳಿದಾರರು 1,900 ಜನರಿದ್ದು, 27,567 ಹೆಕ್ಟೇರ ಭೂಮಿಯನ್ನು ಹೊಂದಿರುತ್ತಾರೆ. ಒಟ್ಟು 68,439 ಜನ ಹಿಡುವಳಿದಾರರು ಭೂಮಿಯನ್ನು ಹೊಂದಿದ್ದು 1,82,880 ಹೆಕ್ಟೇರ ಭೂಮಿಯ ಮಾಲೀಕತ್ವ ಪಡೆದಿರುತ್ತಾರೆ. ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ 72,116 ಜನ ಗಂಡಸರು, 39,539 ಜನ ಹೆಂಗಸರು ಒಟ್ಟು 1,11,655 ಜನ ಹಿಡುವಳಿದಾರರು (ಖಾತೆದಾರರು) ಕೃಷಿಯಲ್ಲಿ ತೊಡಗಿದ್ದು ತಾಲೂಕಿನ 35,846 ಜನ ಗಂಡಸರು ಮತ್ತು 47,815 ಜನ ಹೆಂಗಸರು ಒಟ್ಟು 83,661 ಜನರು ಕೃಷಿ ಕಾರ್ಮಿಕರು ವ್ಯವಸಾಯ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ.

ತಾಲೂಕಿನಲ್ಲಿ ಮುಖ್ಯವಾಗಿ ಕೃಷ್ಣಾ ನದಿ ಹರಿಯುತ್ತಿದ್ದು ನದಿ ನೀರನ್ನು ಉಪಯೋಗಿಸಿಕೊಂಡು ಬಹುಪಾಲು ಭೂಮಿ ನೀರಾವರಿಯಾಗಿದೆ. ಒಟ್ಟಿನಲ್ಲಿ ಘಟಪ್ರಭಾ ಎಡದಂಡೆ ಕಾಲುವೆ ಮುಖಾಂತರ 1,784 ಹೆಕ್ಟೇರ, ತೆರೆದ ಭಾವಿಗಳಿಂದ 18,109 ಹೆಕ್ಟೇರ, ಕೊಳವೆ ಭಾವಿ (ಬೋರವೆಲ್) ಗಳಿಂದ 6,281 ಹೆಕ್ಟೇರ, ಏತ ನೀರಾವರಿಯಿಂದ 43,509 ಹೆಕ್ಟೇರ ಮತ್ತು ಇತರೆ ಮೂಲಗಳಿಂದ 17,581 ಹೆಕ್ಟೇರ ಭೂಮಿ ಒಟ್ಟು 86,509 ಹೆಕ್ಟೇರ ಭೂಮಿ ನೀರಾವರಿ ಭೂಮಿಯಾಗಿರುತ್ತದೆ. ಸಮೀಪದ ವರ್ಷಗಳಲ್ಲಿ ಹಿಪ್ಪರಗಿ ಆಣೆಕಟ್ಟು ಯೋಜನೆಯ ಎರಡು ಬೃಹತ್ ಏತ ನೀರಾವರಿ ಯೋಜನೆಗಳಿಂದ ಇನ್ನು ಹೆಚ್ಚಿನ ಪ್ರಮಾಣದ ಭೂಮಿ ನೀರಾವರಿ ಸೌಲಭ್ಯ ಪಡೆಯಲಿದೆ. ತಾಲೂಕಿನ ವ್ಯಾಪ್ತಿ ಪ್ರದೇಶದಲ್ಲಿ ವಾರ್ಷಿಕವಾಗಿ ಸರಿ ಸುಮಾರು 37 ದಿವಸಗಳಲ್ಲಿ ಮಳೆಯಾಗುತ್ತಿದೆ. ಇಲ್ಲಿ ವಾರ್ಷಿಕವಾಗಿ ಸರಾಸರಿ 581.6 ಮಿಲಿ ಮೀಟರ ಮಳೆಯ ಪ್ರಮಾಣ ಇರುತ್ತದೆ. ಈ ಅಂಶಗಳಿಂದ ಜಿಲ್ಲೆಯಲ್ಲಿ ಅತೀ ಕಡಿಮೆ ಮಳೆಯಾಗುವ ತಾಲೂಕು ಅಂತಾ ಪರಿಗಣಿಸಲ್ಪಟ್ಟಿದೆ. ತಾಲೂಕಿನ ವ್ಯಾಪ್ತಿಯಲ್ಲಿ ತೋಡು ಭಾವಿಗಳ ಅಂತರ ಜಲ ಲಭ್ಯತೆ ಸರಾಸರಿ 9.36 ಮೀಟರ ಆಳ ಮತ್ತು ಕೊಳವೆ ಭಾವಿಗಳ ಅಂತರ ಜಲ ಲಭ್ಯತೆ ಸರಾಸರಿ 13.8 ಮೀಟರ ಆಳವಾಗಿತ್ತದೆ.

ತಾಲೂಕಿನ ಭೂಮಿಗಳಲ್ಲಿ ಏಕದಳ ಧಾನ್ಯಗಳಾದ ಜೋಳ 85,269 ಹೆಕ್ಟೇರ, ಸಜ್ಜೆ 148 ಹೆಕ್ಟೇರ, ಮುಸುಕಿನ ಜೋಳ (ಗೋಜೋಳ) 13,028 ಹೆಕ್ಟೇರ, ಗೋಧಿ 13,788 ಹೆಕ್ಟೇರ ಒಟ್ಟು

1,12,233 ಹೆಕ್ಟೇರ ಏಕದಳ ಧಾನ್ಯಗಳು ಬೆಳೆಯಲಾಗುತ್ತದೆ. 11,600 ಹೆಕ್ಟೇರ ಕಡಲೆ, 106 ಹೆಕ್ಟೇರ ತೊಗರಿ, 123 ಹೆಕ್ಟೇರ ಇತರೆ ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತಿದೆ. 1,282 ಹೆಕ್ಟೇರ ನೆಲಗಡಲೆ (ಶೇಂಗಾ), 10,770 ಹೆಕ್ಟೇರ ಸೂರ್ಯಕಾಂತಿ, 3,540 ಇತರೆ ಎಣ್ಣೆ ಕಾಳು. ಒಟ್ಟು 15,592 ಹೆಕ್ಟೇರ ಪ್ರದೇಶದಲ್ಲಿ ಎಣ್ಣೆ ಕಾಳುಗಳನ್ನು ಬೆಳೆಯಲಾಗುತ್ತಿದೆ.

ಅದರಂತೆ ತಾಲೂಕಿನ ವ್ಯಾಪ್ತಿಯಲ್ಲಿ ಹಣ್ಣುಗಳಾದ ದ್ರಾಕ್ಷಿ– 516 ಹೆಕ್ಟೇರ, ಮಾವು– 68 ಹೆಕ್ಟೇರ, ಬಾಳೆ– 317 ಹೆಕ್ಟೇರ, ಡಾಳಿಂಬೆ– 38 ಹೆಕ್ಟೇರ, ಪೇರಲ– 913 ಹೆಕ್ಟೇರ, ಚಿಕ್ಕು(ಸಪೋಟ) 35 ಹೆಕ್ಟೇರ, ಇತರೆ ಹಣ್ಣುಗಳು-300 ಹೆಕ್ಟೇರ. ಒಟ್ಟು 2,187 ಹೆಕ್ಟೇರ ಪ್ರದೇಶದಲ್ಲಿ ಹಣ್ಣಿನ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಅದರಂತೆ ಹಣಕಾಸಿನ ಬೆಳೆಗಳಿಗೆ 44,562 ಹೆಕ್ಟೇರ ಪ್ರದೇಶವಿದ್ದು, ಇದರಲ್ಲಿ 1,930 ಹೆಕ್ಟೇರ ಕ್ಷೇತ್ರದಲ್ಲಿ ಹತ್ತಿ, 1,399 ಹೆಕ್ಟೇರದಲ್ಲಿ ಇತರೆ ಹಣಕಾಸಿನ ಬೆಳೆಗಳನ್ನು ಬೆಳೆಯಲಾಗುತ್ತದೆ.

ಇದರಂತೆ ತಾಲೂಕಿನ ಕೆಲವು ಭಾಗದಲ್ಲಿ ಹಿಪ್ಪುನೇರಳೆ ಬೆಳೆ ಬೆಳೆಯಲಾಗುತ್ತಿದೆ. ಹಿಪ್ಪುನೇರಳೆ ಬೆಳೆ ಬೆಳೆದು ರೇಷ್ಮೆ ಹುಳು ಸಾಕಿ ಹಿಪ್ಪುನೇರಳೆ ಸೊಪ್ಪು ಮೇಯಿಸಿ, ರೇಷ್ಮೆ ಕಸಬು ಮಾಡುವ ಕೃಷಿಕರ ಸಂಖ್ಯೆ 409 ಜನರಿದ್ದು, ಹಿಪ್ಪುನೇರಳೆ ಬೆಳೆಯುವ ಕ್ಷೇತ್ರ 183.24 ಹೆಕ್ಟೇರ ಆಗಿರುತ್ತದೆ. ತಾಲೂಕಿನ ಒಟ್ಟು ರೇಷ್ಮೆ ಕೃಷಿಕರಿಂದ ವಾರ್ಷಿಕವಾಗಿ 96.4 ಟನ್ ರೇಷ್ಮೆ ಗೂಡು ಉತ್ಪಾದನೆಯಾಗುತ್ತಿದೆ. ಉತ್ಪಾದನೆಯಾದ ರೇಷ್ಮೆ ಗೂಡಿನ ಮೌಲ್ಯ ಸರಾಸರಿ 96 ಲಕ್ಷ ರೂಪಾಯಿ ಆಗುತ್ತದೆ. ಇತ್ತಿತ್ತಲಾಗಿ ರೇಷ್ಮೆ ಕಸುಬಿನ ಕಡೆಗೆ ತಾಲೂಕಿನ ಕೃಷಿಕರ ಗಮನ ಹರಿಯ ತೊಡಗಿದ್ದು ಭವಿಷ್ಯದಲ್ಲಿ ಇದು ಇನ್ನೂ ಹೆಚ್ಚು ಕ್ಷೇತ್ರದಲ್ಲಿ ಬೆಳೆಯುವ ಲಕ್ಷಣಗಳು ಕಂಡು ಬರುತ್ತಿವೆ.

ತಾಲೂಕಿನ ಕೃಷಿಕರ ಸಾಗುವಳಿಗಾಗಿ ಎತ್ತುಗಳುನ್ನು ಉಪಯೋಗಿಸುವ ಪದ್ದತಿ ಇರುತ್ತದೆ ಮತ್ತು ಹೈನಕ್ಕಾಗಿ ಎಮ್ಮೆ, ಆಕಳುಗಳನ್ನು ಸಾಕುತ್ತಾರೆ. ಅದರಂತೆ ಉಣ್ಣೆ, ಚರ್ಮ, ಮಾಂಸಕ್ಕಾಗಿ ಕುರಿ–ಆಡು ಸಾಕುತ್ತಿದ್ದಾರೆ.

ತಾಲೂಕಿನಲ್ಲಿ ಮಾಡುತ್ತಿರುವ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ ಮತ್ತು ರಾಸಾಯನಿಕ ಕ್ರಿಮಿನಾಶಕ ಉಪಯೋಗಿಸಲಾಗುತ್ತಿದೆ. ಇತ್ತಿತ್ತಲಾಗಿ ತಾಲೂಕಿನ ಕೆಲವು ಕೃಷಿಕರು ರಾಸಾಯನಿಕ ರಹಿತ (ಸಾವಯವ) ಕೃಷಿ ಮಾಡಲು ಪ್ರಾರಂಭಿಸಿರುತ್ತಾರೆ. ಈ ಸಾವಯವ ಕೃಷಿಯಲ್ಲಿ ದ್ರಾಕ್ಷಿ, ಆಹಾರ ಧಾನ್ಯ, ಬೆಲ್ಲ ಮುಂತಾದವುಗಳನ್ನು ಉತ್ಪಾದಿಸುತ್ತಿರುತ್ತಾರೆ. ಈ ತಾಲೂಕಿನಲ್ಲಿ ನಾಲ್ಕು ಸಕ್ಕರೆ ಉತ್ಪಾದಿಸುವ ಕಾರಖಾನೆಗಳಿದ್ದು ಅವುಗಳಿಗೆ ಅನುಗುಣವಾಗಿ ಕೃಷಿಕರು ಕಬ್ಬು ಬೆಳೆಯುತ್ತಿರುತ್ತಾರೆ. ತಾಲೂಕಿನಲ್ಲಿ ಹರಿಯುತ್ತಿರುವ ಕೃಷ್ಣಾ ನದಿ ಇತ್ತಿತ್ತಲಾಗಿ ಮಹಾಪೂರದಿಂದ ನದಿಯ ದಡದಲ್ಲಿಯ ರೈತರ ಬೆಳೆ ಹಾನಿ ಅತೀ ಆಗುತ್ತಲಿದೆ. ಅದರಂತೆ ಇತ್ತಿತ್ತಲಾಗಿ ಮಳೆಯ ಅಭಾವದಿಂದ ಬರಗಾಲದ ಅನುಭವವಾಗತೊಡಗಿದೆ. ಈ ಪ್ರಕಾರ ತಾಲೂಕಿನ ಉತ್ತರ ಭಾಗದಲ್ಲಿ ಬರಗಾಲ ಹಾಗೂ ದಕ್ಷಿಣ ಭಾಗದಲ್ಲಿ ನದಿ ಮಹಾಪೂರದಿಂದ ತಾಲೂಕಿನ ರೈತರು ಆತ್ಮ ಸ್ಥೈರ್ಯ ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ತಕ್ಕ ಉಪಾಯ ಶೋಧಿಸದಿದ್ದಲ್ಲಿ ತಾಲೂಕಿನ ಕೃಷಿ ಅಪಾಯಕ್ಕೆ ಸಿಲುಕಲಿದೆ.

ಅಧ್ಯಾಯ – ನಾಲ್ಕು

"ಕೃಷಿ ಕಾರ್ಮಿಕ ಮಹಿಳೆ,

ಒಂದು ಸಮಾಜೋ-ಆರ್ಥಿಕ ಅಧ್ಯಯನ"

ಅಧ್ಯಾಯ ನಾಲ್ಕು

ಪ್ರಸ್ತಾವನೆ

ಮಿಂಚಿನ ವೇಗದಲ್ಲಿ ಬೆಳೆಯುತ್ತಿರುವ ಇಂದಿನ ದಿನ ಮಾನದಲ್ಲಿ ಅನ್ನ ಕೊಡುವ ಭೂಮಿಯನ್ನು ಹದಗೊಳಿಸಿ ಉತ್ತಿ ಬಿತ್ತಿ ಹಸಿರುಗೊಳಿಸುವ ಬದಲು ಹರಿದು ಹುರಿದು ಮಾರಿ ಕೈಗಾರಿಕೀಕರಣದ ತುಂಬದ ಹೊಟ್ಟೆಗೆ ಬಲಿ ಕೊಡುತ್ತಿರುವ ಇಂದಿನ ನಮ್ಮ ಯೋಚನೆ ಯೋಜನೆ ಎಷ್ಟು ಪ್ರಸ್ತುತ ಎಂಬುದು ಒಂದು ಕಡೆಯಾದರೆ, ನಮಗೆ ಬೇಕಾದಂತಹ ಊಟವನ್ನು ನಮ್ಮ ಹೊಲ ಗದ್ದೆಗಳಲ್ಲಿ ಬೆಳೆಯುವ ಬದಲು, ಹಣಕ್ಕಾಗಿ ವಾಣಿಜ್ಯದ ಬೆಳೆ ಬೆಳೆದು, ಬೇಕಾದ ಅನ್ನವನ್ನು ಹೊರದೇಶದಿಂದ ಆಮದು ಮಾಡಿಕೊಳ್ಳುತ್ತಿರುವ ವಿಪರ್ಯಾಸ ಇನ್ನೊಂದು ಕಡೆ.

ಈ ಅಭಿವೃದ್ಧಿ ಅನಭಿವೃದ್ಧಿಗಳ ಬೇಕು-ಬೇಡಗಳ ದ್ವಂದ್ವದಲ್ಲಿ ಮೂಲ ನೆಲೆಯನ್ನೇ ನಂಬಿದ ಸಹಸ್ರಾರು ಜೀವಿಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಣೆಗೊಳಗಾಗುತ್ತಿರುವುದು ಅಷ್ಟೇ ಸತ್ಯವಾದ ಸಂಗತಿಯಾಗಿದೆ.

ಕೃಷಿಯನ್ನೇ ನಂಬಿದ ನಾಡು ನಮ್ಮದು ಚಂದ್ರನೊಬ್ಬ ದೇವತೆ ಎಂದು ನಂಬಿ ಪೂಜಿಸುತ್ತಿದ್ದ ದಿನದಿಂದ ಹಿಡಿದು ಚಂದ್ರನಂಗಳದಲ್ಲಿ ಜೀವಜಲವಿರುವ ಸತ್ಯವನ್ನು ಕಂಡುಹಿಡಿಯಲು ಸಾಧ್ಯವಾದ ಇಂದಿನ ದಿನದವರೆಗೂ, 60% ರಷ್ಟು ಜನರು ಕೃಷಿಯನ್ನೇ ಜೀವನದ ಸರ್ವ ಅವಶ್ಯಕತೆಗಳನ್ನು ತೃಪ್ತಿಪಡಿಸುವಂತಹ ಮೂಲ ಉದ್ಯೋಗವನ್ನಾಗಿ ಆವಲಂಬಿಸಿಕೊಂಡಿದ್ದಾರೆ.

ಇಂಥ ಕೃಷಿಯಲ್ಲಿ ಗ್ರಾಮೀಣ ಭಾರತದ ಗಣನೀಯ ಪ್ರಮಾಣದ ಮಹಿಳೆಯರು ಪ್ರತಿನಿತ್ಯವೂ ಕಾರ್ಮಿಕರಾಗಿ ದುಡಿಯುತಿದ್ದು, ಕುಟುಂಬದ ಗಂಜಿಗೆ ಆಧಾರವಾಗಿದ್ದಾರೆ.

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ವಿಶಾಲ ಪರಿಕಲ್ಪನೆಯ ಮೇಲೆ ಅಭಿವೃದ್ಧಿಯ ಮಹಲನ್ನು ಕಟ್ಟುತ್ತಿರುವ ಇಂದಿನ ಸರಕಾರದ ಆರ್ಥಿಕ ನೀತಿಯ ಮುಂದೆ, ಒಂದು ಹೊತ್ತಿನ ಗಂಜಿಗೂ ಪರದಾಡಿ ಮಳೆ ಬಂದಾಗ ಸೋರದಂತೆ, ಸೂರನ್ನು ಹೊಲಿಯಲು ದಾರವೂ ಸಿಗದ ಪರಿಸ್ಥಿತಿಯಲ್ಲಿ ಬದುಕುತ್ತಿರುವ ಗ್ರಾಮೀಣ ಭಾರತದ ಕೃಷಿಯನ್ನು ನಂಬಿ, ಕ್ಷಿತಿಜದೆತ್ತರಕ್ಕೆ ಬೆಳೆಯುವ ಕನಸು ಕಂಡ ಕೃಷಿ ಕಾರ್ಮಿಕ ಮಹಿಳೆಯರ ಸಾಮಾಜಿಕ, ಆರ್ಥಿಕ ಜಿವನದ ಸ್ಥಿತಿ ಗತಿ, ಆರೋಗ್ಯ, ಶೈಕ್ಷಣಿಕ ಮಟ್ಟ, ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯ ಕೊಡುಗೆ ಮತ್ತು ಕೃಷಿ ಉತ್ಪಾದನೆಯಲ್ಲಿ ಮಹಿಳೆಯರ ಪಾತ್ರದ ಕುರಿತು ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ, ಆ ಮೂಲಕ ಕೃಷಿ ಕಾರ್ಮಿಕ ಮಹಿಳೆಯ ಪರಿಸ್ಥಿತಿಯನ್ನು ವೈಜ್ಞಾನಿಕವಾದ ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ದೃಷ್ಠಿಯಿಂದ ಈ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ 3 ನೇ ಈ ಭಾಗದಲ್ಲಿ ಒಟ್ಟು 50 ಕೋಷ್ಟಕಗಳಿದ್ದು ಅವುಗಳ ಮೂಲಕ ಸಮೀಕ್ಷೆ ನಡೆಸಿದ 40 ಕೃಷಿ ಕಾರ್ಮಿಕ ಮಹಿಳೆಯರ ಕುಟುಂಬಕ್ಕೆ ಸಂಬಂಧಿಸಿದಂತಹ ಸಾಮಾನ್ಯ,ಸಾಮಾಜಿಕ,ಆರ್ಥಿಕ,ಶೈಕ್ಷಣಿಕ,ಆರೋಗ್ಯ ಮತ್ತು ಕುಟುಂಬದ ನಿರ್ವಹಣೆಯಲ್ಲಿ ಕೃಷಿ

ಕಾರ್ಮಿಕ ಮಹಿಳೆಯರ ಪ್ರತಿಶತ ಪಾಲು ಇವುಗಳ ಕುರಿತು ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಲಾಗಿದೆ. ಇಲ್ಲಿ ಸಮೀಕ್ಷೆ ಮಾಡಿದ 40 ಕುಟುಂಬಗಳಲ್ಲಿ 20 ಕುಟುಂಬಗಳು ನೀರಾವರಿ ಬೇಸಾಯದಲ್ಲಿ ಕಾರ್ಮಿಕಳಾಗಿ ದುಡಿಯುವ ಮಹಿಳೆಗೆ ಸಂಬಂಧಿಸಿದಂತೆ ಹಾಗೂ 20 ಕುಟುಂಬಗಳು ಮಳೆಯಾಶ್ರಿತ ಬೇಸಾಯದಲ್ಲಿ ಕಾರ್ಮಿಕಳಾಗಿ ದುಡಿಯುವ ಮಹಿಳೆಗೆ ಸಂಬಂಧಿಸಿದಂತೆ ಇರುವಂತೆ ಆಯ್ದುಕೊಳ್ಳಲಾಗಿದೆ. ಈ ಎರಡು ಪ್ರದೇಶಗಳ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಅಥಣಿ ತಾಲೂಕಿನಲ್ಲಿ ಒಟ್ಟಾರೆ ಕೃಷಿ ಕಾರ್ಮಿಕರಾಗಿ ದುಡಿಯುವ ಮಹಿಳೆಯರ ಸಮಾಜೋ-ಆರ್ಥಿಕ ಸ್ಥಿತಿಯನ್ನ ತಿಳಿಯಲು ಪ್ರಯತ್ನಿಸಲಾಗಿದೆ.

1. ಸಂದರ್ಶಿತ ಕೃಷಿ ಕಾರ್ಮಿಕ ಮಹಿಳೆಗೆ ಸಂಬಂಧಿಸಿದ ಸಾಮಾನ್ಯ ವೈಯಕ್ತಿಕ ಮಾಹಿತಿಗಳು.

ಪ್ರಸ್ತುತ ಅಧ್ಯಯನಕ್ಕೆ ಸೂಕ್ತವಾಗುವ ರೀತಿಯಲ್ಲಿ ಕೃಷಿಯಲ್ಲಿ ಕಾರ್ಮಿಕರಾಗಿ ದುಡಿಯುವ ಮಹಿಳೆಯ ವಯಸ್ಸು,ಶೈಕ್ಷಣಿಕ ಮಟ್ಟ, ಹಾಗೂ ಕುಟುಂಬದ ಪ್ರಕಾರ ಅಂದರೆ ಮಹಿಳೆಯ ಕುಟುಂಬವು ವಿಭಕ್ತವೋ, ಅವಿಭಕ್ತವೊ ಎಂಬ ವಿಷಯಗಳ ಕುರಿತು ಅಂಕಿ ಸಂಖ್ಯೆಗಳನ್ನು ಪಡೆಯಲಾಯಿತು.

ಕೋಷ್ಟಕ 1.1 ವಯಸ್ಸಿನ ಪ್ರಮಾಣ

ಅ ಸಂ	ವಯಸ್ಸಿನ ಪ್ರಮಾಣ	ನೀರಾವರಿ ಬೇಸಾಯ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ ಬೇಸಾಯ	ಒಣ ಬೇಸಾಯ	
1	15–20	2	–	10%	–	5%
2	20–25	2	–	10%	–	5%
3	25–30	1	2	5%	10%	7.5%
4	30–35	4	4	20%	20%	20%
5	35–40	6	7	30%	35%	32.5%
6	40–45	1	4	5%	20%	12.5%
7	45–50	3	3	15%	15%	15%
8	50 ಕ್ಕಿಂತ ಮೇಲ್ಪಟ್ಟು	1	–	5%	–	2.5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ಗರಿಷ್ಠ 35 ರಿಂದ 45 ವಯಸ್ಸಿನ 30%ರಷ್ಟು, ಕನಿಷ್ಠ 40 ರಿಂದ 45 ಮತ್ತು 50 ವಯಸ್ಸಿಗೂ ಮೇಲ್ಪಟ್ಟ ವಯಸ್ಸಿನ 5%ರಷ್ಟು ಮಹಿಳೆಯರು ದುಡಿಯುತ್ತಿರುವುದು ಕಂಡುಬರುವದು.

ಮಳೆಯಾಶ್ರಿತ ಬೇಸಾಯದಲ್ಲಿ ಮತ್ತು ಗರಿಷ್ಠ 35 ರಿಂದ 45 ವಯಸ್ಸಿನ 35% ರಷ್ಟು ಕಂಡುಬರುವದು ಹಾಗೂ ಕನಿಷ್ಠ 25 ರಿಂದ 30 ವಯಸ್ಸಿನ 10%ರಷ್ಟು ಮಹಿಳೆಯರು ದುಡಿಯುತ್ತಿರುವುದು ಕಂಡುಬರುವದು.

ಒಟ್ಟಾರೆ ಅಥಣಿ ತಾಲೂಕಿನಲ್ಲಿ ಗರಿಷ್ಠ 35 ರಿಂದ 45 ವಯಸ್ಸಿನ 32.5% ರಷ್ಟು ಮಹಿಳೆಯರು ಮತ್ತು ಕನಿಷ್ಠ 35 ರಿಂದ 40 ವಯಸ್ಸಿನ 2.5% ರಷ್ಟು ಮಹಿಳೆಯರು ದುಡಿಯುತ್ತಿರುವದು ಕಂಡುಬರುತ್ತದೆ.

ಕೋಷ್ಟಕ 1.2 ಶೈಕ್ಷಣಿಕ ಮಟ್ಟ

ಅ ಸಂ	ಶೈಕ್ಷಣಿಕ ಮಟ್ಟ	ನೀರಾವರಿ ಬೇಸಾಯ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ ಬೇಸಾಯ	ಒಣ ಬೇಸಾಯ	
1	ಅಕ್ಷರಸ್ಥ	–	–			
2	ಅನಕ್ಷರಸ್ಥ	16	20	80%	100%	90%
3	ಪ್ರಾಥಮಿಕ	3	–	15%	–	7.5%
4	ಪ್ರೌಢ	1	–	05%	–	2.5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರ ಗರಿಷ್ಠ ಮಟ್ಟದ, ಪ್ರೌಢ ಶಿಕ್ಷಣ ಹೊಂದಿದವರು 5% ರಷ್ಟು ಮಹಿಳೆಯರು ಮತ್ತು ಕನಿಷ್ಠ ಶೈಕ್ಷಣಿಕ ಮಟ್ಟದ ಅನಕ್ಷರತೆಯಲ್ಲಿ 5% ಮಹಿಳೆಯರು ಇರುವರು.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರ ಗರಿಷ್ಠ ಮಟ್ಟವು ಶೂನ್ಯವಾಗಿದೆ ಮತ್ತು ಕನಿಷ್ಠ ಶೈಕ್ಷಣಿಕ ಮಟ್ಟ ಅನಕ್ಷರತೆಯಾಗಿದ್ದು, 100% ರಷ್ಟು ಮಹಿಳೆಯರು ಅನಕ್ಷರಸ್ಥರಾಗಿರುವುದು ಕಂಡುಬರುತ್ತದೆ.

ಒಟ್ಟು ಅಥಣಿ ತಾಲೂಕಿನ ಕೃಷಿ ಕಾರ್ಮಿಕ ಮಹಿಳೆಯರ ಗರಿಷ್ಠ ಶೈಕ್ಷಣಿಕ ಮಟ್ಟವು ಪ್ರೌಢ ಶಿಕ್ಷಣವಾಗಿದ್ದು 2.5% ರಷ್ಟು ಇದೆ. ಕನಿಷ್ಠ ಮಟ್ಟದ ಅನಕ್ಷರತೆಯಲ್ಲಿ 90% ರಷ್ಟು ಇರುವುದು ಕಂಡು ಬರುತ್ತದೆ.

ಕೋಷ್ಟಕ 1.3 ಕುಟುಂಬದ ಪ್ರಕಾರ

ಅ ಸಂ	ಕುಟುಂಬದ ಪ್ರಕಾರ	ನೀರಾವರಿ ಬೇಸಾಯ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ ಬೇಸಾಯ	ಒಣ ಬೇಸಾಯ	
1	ವಿಭಕ್ತ	16	16	80%	80%	80%
2	ಅವಿಭಕ್ತ	4	4	20%	20%	20%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ 80% ರಷ್ಟು ಮಹಿಳೆಯರು ವಿಭಕ್ತ ಕುಟುಂಬಗಳನ್ನು ಮತ್ತು 20% ಮಹಿಳೆಯರು ಅವಿಭಕ್ತ ಕುಟುಂಬಗಳನ್ನು ಹೊಂದಿದ್ದಾರೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರು ಗರಿಷ್ಠ 80% ರಷ್ಟು ಮಹಿಳೆಯರು ವಿಭಕ್ತ ಕುಟುಂಬಗಳನ್ನು ಮತ್ತು ಕನಿಷ್ಠ 20% ಮಹಿಳೆಯರು ಅವಿಭಕ್ತ ಕುಟುಂಬಗಳನ್ನು ಹೊಂದಿದ್ದಾರೆ.

ಒಟ್ಟು ಅಥಣಿ ತಾಲೂಕು ಗರಿಷ್ಟ 80% ರಷ್ಟು ಮಹಿಳೆಯರು ವಿಭಕ್ತ ಕುಟುಂಬಗಳನ್ನು ಮತ್ತು ಕನಿಷ್ಠ 20% ಮಹಿಳೆಯರು ಅವಿಭಕ್ತ ಕುಟುಂಬಗಳನ್ನು ಹೊಂದಿದ್ದಾರೆ.

2. ಸಂದರ್ಶಿತ ಕೃಷಿ ಕಾರ್ಮಿಕ ಮಹಿಳೆಯ ಸಾಮಾಜಿಕ ಸ್ಥಿತಿ ಗತಿ

ಪ್ರಸ್ತುತ ಅಧ್ಯಯನಕ್ಕೆ ಸೂಕ್ತವಾಗುವ ರೀತಿಯಲ್ಲಿ ಕೃಷಿಯಲ್ಲಿ ಕಾರ್ಮಿಕರಾಗಿ ದುಡಿಯುವ ಮಹಿಳೆಯರ ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಮದುವೆಯ ಅಂದಾಜು ವಯಸ್ಸು, ವರದಕ್ಷಿಣೆ ಆಚರಣೆ, ಕೆಲಸದ ಸ್ಥಳಗಳಲ್ಲಿ ಪುರುಷ ಕಾರ್ಮಿಕರಿಂದ, ಹೊಲದ ಮಾಲೀಕರಿಂದ ನಡೆಯುವಂತಹ ತೊಂದರೆಗಳ ಕುರಿತು ಅಂಕಿ ಸಂಖ್ಯೆಗಳನ್ನು ಪಡೆಯಲಾಯಿತು.

ಕೋಷ್ಟಕ 2.1 ಮದುವೆಯ ವಯಸ್ಸು

ಅ ಸಂ	ವಯಸ್ಸಿನ ಪ್ರಮಾಣ	ನೀರಾವರಿ ಬೇಸಾಯ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ ಬೇಸಾಯ	ಒಣ ಬೇಸಾಯ	
1	18 ರ ಒಳಗೆ	13	11	65%	55%	60%
2	18 ಮತ್ತು 18 ರ ನಂತರ	7	9	35%	45%	40%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ 65% ರಷ್ಟು ಕುಟುಂಬಗಳಲ್ಲಿ 18 ವಯಸ್ಸಿಗೂ ಮೊದಲು ಮತ್ತು 35% ರಷ್ಟು ಕುಟುಂಬಗಳಲ್ಲಿ 18 ಮತ್ತು 18 ವಯಸ್ಸಿನ ನಂತರ ಹೆಣ್ಣು ಮಕ್ಕಳ ಮದುವೆ ಮಾಡುವುದು ಕಂಡುಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ 55% ರಷ್ಟು ಕುಟುಂಬಗಳಲ್ಲಿ 18 ವಯಸ್ಸಿಗೂ ಮೊದಲು ಮತ್ತು 45% ರಷ್ಟು ಕುಟುಂಬಗಳಲ್ಲಿ 18 ಮತ್ತು 18 ವಯಸ್ಸಿನ ನಂತರ ಹೆಣ್ಣು ಮಕ್ಕಳ ಮದುವೆ ಮಾಡುವುದು ಕಂಡುಬರುತ್ತದೆ.

ಒಟ್ಟು ಅಥಣಿ ತಾಲೂಕಿನ 60% ರಷ್ಟು ಕುಟುಂಬಗಳಲ್ಲಿ 18 ವಯಸ್ಸಿಗೂ ಮೊದಲು ಮತ್ತು 40% ರಷ್ಟು ಕುಟುಂಬಗಳಲ್ಲಿ 18 ಮತ್ತು 18 ವಯಸ್ಸಿನ ನಂತರ ಹೆಣ್ಣು ಮಕ್ಕಳ ಮದುವೆ ಮಾಡುವುದು ಕಂಡುಬರುತ್ತದೆ.

ಕೋಷ್ಟಕ 2.2 ವರದಕ್ಷಿಣೆ ಪದ್ಧತಿಯ ಆಚರಣೆ

ಅ ಸಂ	ವರದಕ್ಷಣೆ ಪದ್ದತಿ	ನೀರಾವರಿ ಬೇಸಾಯ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ ಬೇಸಾಯ	ಒಣ ಬೇಸಾಯ	
1	ಇದೆ	11	9	55%	45%	50%
2	ಇಲ್ಲ	9	11	45%	55%	50%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ 55% ರಷ್ಟು ಕುಟುಂಬಗಳಲ್ಲಿ ವರದಕ್ಷಿಣೆ ಪದ್ಧತಿ ಆಚರಣೆಯಲ್ಲಿರುವದು ಮತ್ತು 45% ರಷ್ಟು ಕುಟುಂಬಗಳಲ್ಲಿ ವರದಕ್ಷಿಣೆ ಪದ್ಧತಿ ಆಚರಣೆಯಲ್ಲಿ ಇಲ್ಲದಿರುವದು ಕಂಡುಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ 45% ರಷ್ಟು ಕುಟುಂಬಗಳಲ್ಲಿ ವರದಕ್ಷಿಣೆ ಪದ್ಧತಿ ಆಚರಣೆಯಲ್ಲಿರುವದು ಮತ್ತು 55% ರಷ್ಟು ಕುಟುಂಬಗಳಲ್ಲಿ ವರದಕ್ಷಿಣೆ ಪದ್ಧತಿ ಆಚರಣೆಯಲ್ಲಿ ಇಲ್ಲದಿರುವದು ಕಂಡುಬರುತ್ತದೆ.

ಒಟ್ಟು ಅಥಣಿ ತಾಲೂಕಿನ 50% ರಷ್ಟು ಕುಟುಂಬಗಳಲ್ಲಿ ವರದಕ್ಷಿಣೆ ಪದ್ಧತಿ ಆಚರಣೆಯಲ್ಲಿರುವದು ಮತ್ತು 50% ರಷ್ಟು ಕುಟುಂಬಗಳಲ್ಲಿ ವರದಕ್ಷಿಣೆ ಪದ್ಧತಿ ಆಚರಣೆಯಲ್ಲಿ ಇಲ್ಲದಿರುವದು ಕಂಡುಬರುತ್ತದೆ.

ಕೋಷ್ಟಕ 2.3 ಪುರುಷ ಕಾರ್ಮಿಕರಿಂದ ತೊಂದರೆ

ಅ ಸಂ	ಪುರುಷ ಕಾರ್ಮಿಕರಿಂದ ತೊಂದರೆ	ನೀರಾವರಿ ಬೇಸಾಯ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ ಬೇಸಾಯ	ಒಣ ಬೇಸಾಯ	
1	ಇದೆ					
2	ಇಲ್ಲ	20	20	100%	100%	100%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರು ಮತ್ತು ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರು ನೀಡಿದ ಮಾಹಿತಿಯ ಪ್ರಕಾರ ಯಾವುದೇ ಮಹಿಳೆಗೆ ಕೆಲಸದ ಸ್ಥಳದಲ್ಲಿ ಪುರುಷ ಕಾರ್ಮಿಕರಿಂದ ತೊಂದರೆಯಾಗದಿರುವದು ಕಂಡುಬರುತ್ತದೆ.

ಕೋಷ್ಟಕ 2.4 ಹೊಲದ ಮಾಲೀಕರಿಂದ ತೊಂದರೆ

ಅ ಸಂ	ತೊಂದರೆಯ ಪ್ರಕಾರಗಳು	ನೀರಾವರಿ ಬೇಸಾಯ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ ಬೇಸಾಯ	ಒಣ ಬೇಸಾಯ	
1	ಲೈಂಗಿಕವಾಗಿ	–	–	–	–	–
2	ಕೂಲಿ ನೀಡದಿರುವುದು	–	–	–	–	–
3	ಕೂಲಿ ನೀಡಲು ಸತಾಯಿಸುವುದು	01	–	5%	–	2.5%
4	ಹೆಚ್ಚು ಹೆಚ್ಚು ಕೆಲಸ ನೀಡುವುದು	04	08	20%		30%
5	ಕೂಲಿ ನೀಡಲು ಸತಾಯಿಸುವುದು ಮತ್ತು ಹೆಚ್ಚು ಹೆಚ್ಚು ಕೆಲಸ ನೀಡುವುದು	10	10	50%		17.5%
6	ಯಾವುದು ಇಲ್ಲ	05	02	25%		50%
	ಒಟ್ಟು	20	20	100%		100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯುವ ಮತ್ತು ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ 50% ರಷ್ಟು ಮಹಿಳೆಯರಿಗೆ ಹೊಲದ ಮಾಲೀಕರಿಂದ ಯಾವುದೇ ರೀತಿಯ ತೊಂದರೆ ಕಂಡುಬರುವುದಿಲ್ಲ.ಆದರೆ 25% ರಷ್ಟು ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಿಗೆ ಹೆಚ್ಚು ಹೆಚ್ಚು ಕೆಲಸ ನೀಡುವ ಮತ್ತು ಕೂಲಿ ನೀಡಲು ಸತಾಯಿಸುವ ಸಮಸ್ಯೆಗಳು ಹಾಗೂ 40% ರಷ್ಟು ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರಿಗೆ ಹೆಚ್ಚು ಹೆಚ್ಚು ಕೆಲಸ ನೀಡುವ ಸಮಸ್ಯೆಗಳು ಕಂಡುಬರುತ್ತವೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 30% ರಷ್ಟು ಮಹಿಳೆಯರಿಗೆ ಹೆಚ್ಚು ಹೆಚ್ಚು ಕೆಲಸ ನೀಡುವ ಸಮಸ್ಯೆಗಳು ಕಂಡುಬರುತ್ತಿದ್ದು 50% ರಷ್ಟು ಮಹಿಳೆಯರಿಗೆ ಯಾವುದೇ ರೀತಿಯ ತೊಂದರೆ ಕಂಡುಬರುವುದಿಲ್ಲ.

3. ಸಂದರ್ಶಿತ ಕೃಷಿ ಕಾರ್ಮಿಕ ಮಹಿಳೆಯ ಆರ್ಥಿಕ ಸ್ಥಿತಿ ಗತಿ

ಕೋಷ್ಟಕ 3.1 ವೃತ್ತಿಯ ಸ್ವರೂಪ

ಅ ಸಂ	ವೃತ್ತಿಗಳು	ನೀರಾವರಿ ಬೇಸಾಯ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ ಬೇಸಾಯ	ಒಣ ಬೇಸಾಯ	
1	ಕೃಷಿ	1		5%	–	2.5%
2	ಕೃ. ಕಾರ್ಮಿಕ	6	7	30%	35%	32.5%
3	ಕೃಷಿ ಆಧಾರಿತ ಉಪಕಸಬು	–	–	–	–	–
4	ಕೃಷಿ ಮತ್ತು ಕೃ ಕಾರ್ಮಿಕ	3	4	15%	20%	17.5%
5	ಕೃಷಿ,ಕೃ ಕಾರ್ಮಿಕ & ಕೃಷಿ ಆಧಾರಿತ ಉಪಕಸಬು	8	5	40%	25%	32.5%
6	ಕೃ.ಕಾರ್ಮಿಕ & ಕೃಷಿ ಆಧಾರಿತ ಉಪಕಸಬು	2	4	10%	20%	15%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ 40% ರಷ್ಟು ಮಹಿಳೆಯರು ಕೃಷಿ, ಕೃಷಿ ಕಾರ್ಮಿಕ ಮತ್ತು ಕೃಷಿ ಆಧಾರಿತ ಉಪಕಸಬುಗಳಲ್ಲಿ ಕೆಲಸ ಮಾಡುವುದು ಮತ್ತು 5% ರಷ್ಟು ಮಹಿಳೆಯರು ತಮ್ಮದೇ ಆದ ಹೊಲಗಳಲ್ಲಿ ಕೆಲಸ ಮಾಡುವದು ಕಂಡುಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ 35%ರಷ್ಟು ಮಹಿಳೆಯರು ಕೃಷಿ ಕಾರ್ಮಿಕ ಕೆಲಸ ಮಾಡುವುದು, 20% ರಷ್ಟು ಮಹಿಳೆಯರು ಕೃಷಿ ಕಾರ್ಮಿಕ ಮತ್ತು ಕೃಷಿ ಆಧಾರಿತ ಉಪಕಸಬುಗಳಲ್ಲಿ

ಕೆಲಸ ಮಾಡುವುದು ಮತ್ತು 20% ರಷ್ಟು ಮಹಿಳೆಯರು ಕೃಷಿ ಮತ್ತು ಕೃಷಿ ಕಾರ್ಮಿಕರಾಗಿ ಕೆಲಸ ಮಾಡುವುದು ಕಂಡುಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 32.5% ರಷ್ಟು ಮಹಿಳೆಯರು ಕೃಷಿ ಕಾರ್ಮಿಕರಾಗಿ ಕೆಲಸ ಮಾಡುವುದು ಮತ್ತು ಅಷ್ಟೇ ಪ್ರಮಾಣದ ಮಹಿಳೆಯರು ಕೃಷಿ, ಕೃಷಿ ಕಾರ್ಮಿಕ ಮತ್ತು ಕೃಷಿ ಆಧಾರಿತ ಉಪಕಸಬುಗಳಲ್ಲಿ ಕೆಲಸ ಮಾಡುವುದು ಮತ್ತು ಅತ್ಯಂತ ಕಡಿಮೆ ಸಂಖ್ಯೆಯ ಅಂದರೆ 2.5% ರಷ್ಟು ಮಹಿಳೆಯರು ತಮ್ಮದೇ ಆದ ಹೊಲಗಳಲ್ಲಿ ಮಾತ್ರ ಕೆಲಸ ಮಾಡುವದು ಕಂಡುಬರುತ್ತದೆ.

ಅಭಿಪ್ರಾಯಗಳ ವಿಶ್ಲೇಷಣೆ : ಸಮೀಕ್ಷೆ ಪ್ರಶ್ನೆ ಸಂಖ್ಯೆ: 3.2

ಹೊಲಗಳಲ್ಲಿ ಮಹಿಳೆಯರು ಮಾಡುವ ಕೆಲಸದ ಸ್ವರೂಪಗಳ ಬಗ್ಗೆ ಪ್ರಶ್ನೆ ಕೇಳಲಾಗಿತ್ತು.ಆ ವಿವಿಧ ಕೆಲಸಗಳನ್ನು ಈ ಕೆಳಗಿನಂತೆ ಕ್ರೋಢೀಕರಿಸಲಾಗಿದೆ.

ಅ ಸಂ	ಕೆಲಸಗಳು	ಅ ಸಂ	ಕೆಲಸಗಳು	ಅ ಸಂ	ಕೆಲಸಗಳು
1	ಕಸ ತೆಗೆಯುವದು	10	ಒಡ್ಡು ಹಾಕುವುದು	19	ಹುರಳಿ ಕೀಳುವುದು
2	ಕಬ್ಬು ಹಚ್ಚುವುದು	11	ಸಜ್ಜಿ ತೆಗೆಯುವದು	21	ಕಡಲೆ ಕೀಳುವುದು
3	ತೆನೆ ಮುರಿಯುವುದು	12	ಜೋಳ ತೆಗೆಯುವದು	22	ರಾಶಿ ಮಾಡುವುದು
4	ಅರಿಸಿನ ಹಚ್ಚುವುದು ಮತ್ತು ಮುರಿಯುವದು	13	ಗೊಬ್ಬರ ಒಗೆಯುವದು	23	ತರಕಾರಿ ಹರಿಯುವದು
5	ಕಾಳು ಹಾಕುವುದು	14	ಕಲ್ಲ ಆರಿಸುವುದು	24	ಕತಾ ಒಗೆಯುವದು
6	ನೀರು ಹಾಸುವುದು	15	ಕುಣಿ ತೆಗೆಯುವದು	25	ಶೇಂಗಾ ತೆಗೆಯುವದು
7	ದ್ರಾಕ್ಷಿಗೆ ಬಣ್ಣ ಹಾಕುವದು	16	ಮೆಣಸಿನ ಗಿಡ ಹಚ್ಚುವುದು	26	ಗೋದಿ ಕೊಯ್ಯವುದು
8	ಮೇವು ತರುವುದು	17	ಕಳಿಗೆ ಹಿರಿಯುವುದು		
9	ವಾಂಜ ತೆಗೆಯುವದು	18	ಒಣ ದ್ರಾಕ್ಷಿ ಮಾಡುವುದು		

ಆಧಾರ: ಸಮೀಕ್ಷೆ

ಕೋಷ್ಟಕ 3.3 ಕೃಷಿ ಕಾರ್ಮಿಕ ಮಹಿಳೆಯು ದಿನವೊಂದಕ್ಕೆ ಹೊಲದಲ್ಲಿ ದುಡಿಯುವ ಸಮಯ.

ಅ ಸಂ	ಸಮಯ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ದಿನಕ್ಕೆ 7 ತಾಸು	3	–	15%	–	7.5%
2	ದಿನಕ್ಕೆ 6 ತಾಸು	6	17	30%	85%	57.5%
1	ದಿನಕ್ಕೆ 8 ತಾಸು	7	–	35%	–	17.5%
2	ದಿನಕ್ಕೆ 4 ತಾಸು	–	3	–	15%	7.5%
	ದಿನಕ್ಕೆ 5 ತಾಸು	4	–	20%	–	10%
	ಒಟ್ಟು	20	20	20%	20%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ 35% ರಷ್ಟು ಮಹಿಳೆಯರು ದಿನವೊಂದಕ್ಕೆ ಗರಿಷ್ಠ 8 ತಾಸುಗಳ ಸಮಯ ದುಡಿಯುವುದು ಮತ್ತು 15% ಮಹಿಳೆಯರು 7 ತಾಸು ದುಡಿಯುವುದು ಕಂಡುಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ 85% ರಷ್ಟು ಮಹಿಳೆಯರು ದಿನವೊಂದಕ್ಕೆ ಗರಿಷ್ಠ 6 ತಾಸುಗಳ ಸಮಯ ದುಡಿಯುವುದು ಮತ್ತು 15% ಮಹಿಳೆಯರು 4 ತಾಸು ದುಡಿಯುವುದು ಕಂಡುಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 57.5% ರಷ್ಟು ಮಹಿಳೆಯರು ದಿನವೊಂದಕ್ಕೆ 6 ತಾಸುಗಳ ಸಮಯ ದುಡಿಯುವುದು ಮತ್ತು 7.5% ರಷ್ಟು ಮಹಿಳೆಯರು 4 ತಾಸು ದುಡಿಯುವುದು ಮತ್ತು 7 ತಾಸು ದುಡಿಯುವದು ಕಂಡುಬರುತ್ತದೆ.

ಕೋಷ್ಟಕ 3.4 ಕೃಷಿ ಕಾರ್ಮಿಕ ಮಹಿಳೆಯು ದಿನವೊಂದಕ್ಕೆ ಮನೆಯಲ್ಲಿ ದುಡಿಯುವ ಸಮಯ.

ಅ ಸಂ	ತಾಸು	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ದಿನಕ್ಕೆ 6 ತಾಸು	–	–	–	–	–
2	ದಿನಕ್ಕೆ 8 ತಾಸು	15	17	75%	85%	80%
3	ದಿನಕ್ಕೆ 4 ತಾಸು	5	–	25%	–	12.5%
3	8 ತಾಸಿಗಿಂತ ಹೆಚ್ಚು	–	3	–	15%	7.5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ 75% ರಷ್ಟು ಮಹಿಳೆಯರು ದಿನವೊಂದಕ್ಕೆ ಗರಿಷ್ಠ 8 ತಾಸುಗಳ ಸಮಯ ದುಡಿಯುವುದು ಮತ್ತು 25% ಮಹಿಳೆಯರು 4 ತಾಸು ದುಡಿಯುವುದು ಕಂಡುಬರುತ್ತದೆ.

85% ರಷ್ಟು, ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ 85% ರಷ್ಟು ಮಹಿಳೆಯರು ದಿನವೊಂದಕ್ಕೆ ಗರಿಷ್ಠ 8 ತಾಸುಗಳ ಸಮಯ ದುಡಿಯುವುದು ಮತ್ತು 7.5% ಮಹಿಳೆಯರು 8 ತಾಸಿಗಿಂತಲೂ ಹೆಚ್ಚು ದುಡಿಯುವುದು ಕಂಡುಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 80% ರಷ್ಟು ಮಹಿಳೆಯರು ದಿನವೊಂದಕ್ಕೆ ಗರಿಷ್ಠ 8 ತಾಸುಗಳ ಸಮಯ ದುಡಿಯುವುದು ಮತ್ತು 7.5% ಮಹಿಳೆಯರು 8 ತಾಸಿಗಿಂತಲೂ ಹೆಚ್ಚು ದುಡಿಯುವುದು ಕಂಡುಬರುತ್ತದೆ.

ಕೋಷ್ಟಕ 3.5 ಕೃಷಿ ಕಾರ್ಮಿಕ ಮಹಿಳೆಯು ಕೃಷಿ, ಕೃಷಿ ಕಾರ್ಮಿಕ ಮತ್ತು ಕೃಷಿ ಆಧಾರಿತ ಉಪಕಸಬುಗಳಲ್ಲಿ ಪಡೆಯುವ ಪ್ರತಿ ದಿನದ ಕೂಲಿ/ಆದಾಯ

ಅ ಸಂ	ಆದಾಯ ರೂ ಗಳಲ್ಲಿ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ರೂ30 ರಿಂದ 60	6	12	30%	60%	45%
2	ರೂ60 ರಿಂದ 90	12	4	60%	20%	40%
3	ರೂ90 ರಿಂದ 120	2	4	10%	20%	15%
4	ರೂ120 ರಿಂದ 150	–	–	–	–	–
5	ರೂ150 ಕ್ಕಿಂತ ಹೆಚ್ಚು	–	–	–	–	–
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ 60% ರಷ್ಟು ಮಹಿಳೆಯರು ದಿನವೊಂದಕ್ಕೆ 60 ರೂಪಾಯಿಗಳಿಂದ 90 ರೂಪಾಯಿಗಳವರೆಗೆ ಮತ್ತು 10% ಮಹಿಳೆಯರು 90 ರೂಪಾಯಿಗಳಿಂದ 120 ರೂಪಾಯಿಗಳವರೆಗೆ ಕೂಲಿಯನ್ನು ಪಡೆಯುವದು ಕಂಡುಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ 60% ರಷ್ಟು ಮಹಿಳೆಯರು ದಿನವೊಂದಕ್ಕೆ 30 ರೂಪಾಯಿಗಳಿಂದ 60 ರೂಪಾಯಿಗಳವರೆಗೆ, 20% ಮಹಿಳೆಯರು 60 ರೂಪಾಯಿಗಳಿಂದ 90 ರೂಪಾಯಿಗಳವರೆಗೆ ಮತ್ತು 90 ರೂಪಾಯಿಗಳಿಂದ 120 ರೂಪಾಯಿಗಳವರೆಗೆ ಕೂಲಿಯನ್ನು ಪಡೆಯುವದು ಕಂಡುಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 60% ರಷ್ಟು ಮಹಿಳೆಯರು ದಿನವೊಂದಕ್ಕೆ 30 ರೂಪಾಯಿಗಳಿಂದ 60 ರೂಪಾಯಿಗಳವರೆಗೆ,15% ಮಹಿಳೆಯರು ಮಾತ್ರ 90 ರೂಪಾಯಿಗಳಿಂದ 120 ರೂಪಾಯಿಗಳವರೆಗೆ ಕೂಲಿಯನ್ನು ಪಡೆಯುವದು ಕಂಡುಬರುತ್ತದೆ.

ಕೋಷ್ಟಕ 3.6 ವಾರವೊಂದಕ್ಕೆ ಮಹಿಳೆಯರಿಗೆ ದೊರೆಯುವ ಕೆಲಸದ ದಿನಗಳ ಸಂಖ್ಯೆ

ಅ ಸಂ	ಕೆಲಸದ ದಿನಗಳ ಸಂಖ್ಯೆ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	7 ದಿನ	11	7	55%	35%	45%
2	6 ದಿನ	7	1	35%	5%	20%
3	5 ದಿನ	2	10	10%	50%	30%
4	4 ದಿನ	–	2	–	10%	5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ 55% ರಷ್ಟು ಮಹಿಳೆಯರಿಗೆ ವಾರವೊಂದಕ್ಕೆ ಗರಿಷ್ಠ 7 ದಿನಗಳೂ ಮತ್ತು 10% ರಷ್ಟು ಮಹಿಳೆಯರಿಗೆ ಕನಿಷ್ಠ 5 ದಿನಗಳು ಕೆಲಸ ದೊರೆಯುತ್ತಿರುವದು ಕಂಡುಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ 35% ರಷ್ಟು ಮಹಿಳೆಯರಿಗೆ ವಾರವೊಂದಕ್ಕೆ ಗರಿಷ್ಠ 7 ದಿನಗಳೂ ಮತ್ತು 50% ರಷ್ಟು ಮಹಿಳೆಯರಿಗೆ ಕನಿಷ್ಠ 5 ದಿನಗಳು ಕೆಲಸ ದೊರೆಯುತ್ತಿರುವದು ಕಂಡುಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 45% ರಷ್ಟು ಮಹಿಳೆಯರಿಗೆ ವಾರವೊಂದಕ್ಕೆ ಗರಿಷ್ಠ 7 ದಿನಗಳೂ ಮತ್ತು 5% ರಷ್ಟು ಮಹಿಳೆಯರಿಗೆ ಕನಿಷ್ಠ 4 ದಿನಗಳು ಕೆಲಸ ದೊರೆಯುತ್ತಿರುವದು ಕಂಡುಬರುತ್ತದೆ.

ಕೋಷ್ಟಕ 3.7 ಕೃಷಿ ಕಾರ್ಮಿಕ ಮಹಿಳೆಯರು ದುಡಿದ ಹಣದ ಯಜಮಾನಿಕೆ.

ಅ ಸಂ	ಹಣದ ಯಜಮಾನರು	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಅತ್ತೆ	3	1	15%	5%	10%
2	ಮಾವ	1	–	5%	–	2.5%
3	ಗಂಡ	8	6	40%	30%	35%
4	ಮಗ	1	1	5%	5%	5%
5	ಕೃ.ಕಾ ಮಹಿಳೆ	7	12	35%	60%	47.5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ 40% ರಷ್ಟು ಮಹಿಳೆಯರು ದುಡಿದ ಹಣದ ಯಜಮಾನಿಕೆಯನ್ನು ಮಹಿಳೆಯರ ಗಂಡಂದಿರೇ ಮಾಡುತ್ತಾರೆ ಮತ್ತು 35% ರಷ್ಟು ಮಹಿಳೆಯರು ಮಾತ್ರ ತಾವು ದುಡಿದ ಹಣದ ಯಜಮಾನಿಕೆಯನ್ನು ತಾವೇ ಮಾಡುತ್ತಾರೆಂಬುದು ಕಂಡುಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ 60% ರಷ್ಟು ಮಹಿಳೆಯರು ತಾವು ದುಡಿದ ಹಣದ ಯಜಮಾನಿಕೆಯನ್ನು ತಾವೇ ಮಾಡುತ್ತಾರೆ ಮತ್ತು 40% ರಷ್ಟು, ಮಹಿಳೆಯರು ದುಡಿದ ಹಣದ ಯಜಮಾನಿಕೆಯನ್ನು ಮಾತ್ರ ಕುಟುಂಬದ ಇತರೇ ಸದಸ್ಯರು ಮಾಡುತ್ತಾರೆಂಬುದು ಕಂಡುಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 47.5% ರಷ್ಟು ಮಹಿಳೆಯರು ತಾವು ದುಡಿದ ಹಣದ ಯಜಮಾನಿಕೆಯನ್ನು ತಾವೇ ಮಾಡುತ್ತಾರೆ ಮತ್ತು 35% ರಷ್ಟು, ಮಹಿಳೆಯರು ದುಡಿದ ಹಣದ ಯಜಮಾನಿಕೆಯನ್ನು ಮಾತ್ರ ಅವರ ಗಂಡಂದಿರು ಮತ್ತು ಕುಟುಂಬದ ಇತರೇ ಸದಸ್ಯರು ಮಾಡುತ್ತಾರೆಂಬುದು ಕಂಡುಬರುತ್ತದೆ.

ಕೋಷ್ಟಕ 3.8 ಕೃಷಿ ಕಾರ್ಮಿಕ ಮಹಿಳೆಯರು ದುಡಿದ ಹಣದ ಯಜಮಾನಿಕೆಯನ್ನು ಕುಟುಂಬದ ಇತರೇ ಸದಸ್ಯರು ಮಾಡಲು ಕಾರಣಗಳು.

ಅ ಸಂ	ಕಾರಣಗಳು	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ತಿಳುವಳಿಕೆ ಇಲ್ಲದಿರುವುದರಿಂದ	–	1	–	5%	2.5%
2	ಜಗಳದ ಹೆದರಿಕೆ	2	1	10%	5%	7.5%
3	ಕುಟುಂಬದ ಸಂಪ್ರದಾಯ	–	–	–	–	–
4	ಕುಟುಂಬದ ಯಜಮಾನಿಕೆ ಅವರೆ ಮಾಡುತ್ತಾರೆ.	11	6	55%	30%	42.5%
5	ಅನ್ವಯಿಸುವುದಿಲ್ಲ.	7	12	35%	60%	47.5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ 55% ರಷ್ಟು ಮಹಿಳೆಯರು ದುಡಿದ ಹಣದ ಯಜಮಾನಿಕೆಯನ್ನು ಕುಟುಂಬದ ಇತರೇ ಸದಸ್ಯರು ಮಾಡುತ್ತಾರೆ ಎಕೆಂದರೆ ಕುಟುಂಬದ ಯಜಮಾನಿಕೆ ಆಗು ಹೋಗುಗಳ ನಿರ್ವಹಣೆಯನ್ನು ಅವರೇ ಮಾಡುತ್ತಾರೆ ಮತ್ತು 10% ರಷ್ಟು ಮಹಿಳೆಯರು ಮಾತ್ರ ತಾವು ದುಡಿದ ಹಣದ ಯಜಮಾನಿಕೆಯನ್ನು ಗಂಡಂದಿರು ಜಗಳ ಮಾಡುತ್ತಾರೆಂಬ ಹೆದರಿಕೆಯಿಂದ ಮಹಿಳೆಯರೇ ಬಿಟ್ಟು ಕೊಟ್ಟಿರುವುದು ಕಂಡುಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ 30% ರಷ್ಟು ಮಹಿಳೆಯರು ದುಡಿದ ಹಣದ ಯಜಮಾನಿಕೆಯನ್ನು ಮಹಿಳೆಯರ ಗಂಡಂದಿರೇ ಮಾಡುತ್ತಾರೆ ಎಕೆಂದರೆ ಕುಟುಂಬದ ಯಜಮಾನಿಕೆ ಆಗು ಹೋಗುಗಳ ನಿರ್ವಹಣೆಯನ್ನು ಅವರೇ ಮಾಡುತ್ತಾರೆ, 5% ರಷ್ಟು ಮಹಿಳೆಯರು ಮಾತ್ರ ತಾವು ದುಡಿದ ಹಣದ ಯಜಮಾನಿಕೆಯನ್ನು ಗಂಡಂದಿರು ಜಗಳ ಮಾಡುತ್ತಾರೆಂಬ ಹೆದರಿಕೆಯಿಂದ ಮಹಿಳೆಯರೇ ಬಿಟ್ಟು ಕೊಟ್ಟಿರುವುದು ಮತ್ತು 5% ರಷ್ಟು ಮಹಿಳೆಯರಿಗೆ ತಿಳುವಳಿಕೆ ವ್ಯವಹಾರ ಜ್ಞಾನವಿರದಿರುವುದರಿಂದ ಮಹಿಳೆಯರೇ ಬಿಟ್ಟು ಕೊಟ್ಟಿರುವುದು ಕಂಡುಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 42.5% ರಷ್ಟು ಮಹಿಳೆಯರು ದುಡಿದ ಹಣದ ಯಜಮಾನಿಕೆಯನ್ನು ಕುಟುಂಬದ ಯಜಮಾನಿಕೆ, ಆಗು ಹೋಗುಗಳ ನಿರ್ವಹಣೆಯನ್ನು ಮಾಡುವ ಕುಟುಂಬದ ಇತರೇ ಸದಸ್ಯರು ಮಾಡುತ್ತಾರೆ ಮತ್ತು 2.5% ರಷ್ಟು, ಮಹಿಳೆಯರು ದುಡಿದ ಹಣದ ಯಜಮಾನಿಕೆಯನ್ನು ಮಾತ್ರ ಮಹಿಳೆಯರಿಗೆ ತಿಳುವಳಿಕೆ ವ್ಯವಹಾರ ಜ್ಞಾನವಿರದಿರುವುದರಿಂದ ಮತ್ತು 7.5% ರಷ್ಟು ಗಂಡಂದಿರು ಜಗಳ ಮಾಡುತ್ತಾರೆಂಬ ಹೆದರಿಕೆಯಿಂದ ಮಹಿಳೆಯರೇ ಬಿಟ್ಟು ಕೊಟ್ಟಿರುವುದು ಕಂಡುಬರುತ್ತದೆ.

ಕೋಷ್ಟಕ 3.9 ವೇತನದಲ್ಲಿ ತಾರತಮ್ಯ

ಅ ಸಂ	ವೇತನದಲ್ಲಿ ತಾರತಮ್ಯ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಹೌದು	18	20	90%	100%	95%
2	ಇಲ್ಲ	2	–	10%	–	5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ 90% ರಷ್ಟು ಮಹಿಳೆಯರು ಪುರುಷರಿಗಿಂತಲೂ ಕಡಿಮೆ ವೇತನ ಪಡೆಯುತ್ತಾರೆ ಮತ್ತು ಕೇವಲ 10% ಮಹಿಳೆಯರು ಪುರುಷರಿಗಿಂತ ಹೆಚ್ಚು ಕೂಲಿಯನ್ನು ಪಡೆಯುತ್ತಿರುವುದು ಕಂಡುಬರುತ್ತದೆ.

100% ರಷ್ಟು ಅಂದರೆ ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಎಲ್ಲ ಮಹಿಳೆಯರೂ ಪುರುಷರಿಗಿಂತಲೂ ಕಡಿಮೆ ವೇತನ ಪಡೆಯುತ್ತಿರುವುದು ಕಂಡುಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 95% ರಷ್ಟು ಮಹಿಳೆಯರು ಪುರುಷರಿಗಿಂತಲೂ ಕಡಿಮೆ ವೇತನ ಪಡೆಯುತ್ತಾರೆ ಮತ್ತು ಕೇವಲ 5% ಮಹಿಳೆಯರು ಮಾತ್ರ ಪುರುಷರಿಗಿಂತ ಹೆಚ್ಚು ಕೂಲಿಯನ್ನು ಪಡೆಯುತ್ತಿರುವುದು ಕಂಡುಬರುತ್ತದೆ.

ಕೋಷ್ಟಕ 3.10 ಮಹಿಳೆಯರಿಗೆ ಮತ್ತು ಪುರುಷರಿಗೆ ದೊರೆಯುವ ಕೂಲಿಯ ಅನುಪಾತ.

ಅ.ಸಂ	ಗ್ರಾಮದ ಹೆಸರು	ನೀರಾವರಿ ಬೇಸಾಯ		ಗ್ರಾಮದ ಹೆಸರು	ಒಣ ಬೇಸಾಯ	
		ಗಂಡು	ಹೆಣ್ಣು		ಗಂಡು	ಹೆಣ್ಣು
01	ಕರ್ಲಟ್ಟಿ	60	30	ಯಕ್ಕಂಚಿ	60	40
02	ಶೇಗುಣಸಿ	120	60	ಅಡಹಳ್ಳಿ	70	50
03	ದರೂರ	100	60	ಸಂಕೋನಟ್ಟಿ	100	50
04	ಸಂಕ್ರಟ್ಟಿ	80	60	ಮಲಾಬಾದ	100	40
05	ಅವರಕೋಡ	100	60	ಬಾಳಿಗೇರಿ	125	60
06	ಹಲ್ಯಾಳ	120	70	ಅನಂತಪೂರ	60	40
07	ಹುಲಗಬಾಳ	120	60	ಕೊಟ್ಟಲಗಿ	100	60
08	ನಂದೇಶ್ವರ	120	60	ತೆಲಸಂಗ	120	60
9	ಮಹಿಷವಾಡಗಿ	60	80	ಕಕಮರಿ	100	60
10	ಸತ್ತಿ	120	70	ಕೋಹಳ್ಳಿ	70	50

ಆಧಾರ: ಸಮೀಕ್ಷೆ

ಈ ಸಮೀಕ್ಷೆಯಲ್ಲಿ ಅಧ್ಯಯನಕ್ಕೊಳಪಡಿಸಿದ 40 ಗ್ರಾಮಗಳಲ್ಲಿ ಮಹಿಳಾ ಕಾರ್ಮಿಕರು ಮತ್ತು ಪುರುಷ ಕಾರ್ಮಿಕರು ಪಡೆಯುವ ಕೂಲಿಯನ್ನು ಪರಿಶೀಲಿಸಿದಾಗ ಸಾಮನ್ಯವಾಗಿ 20 ರೂಪಾಯಿಯಿಂದ 40 ರೂಪಾಯಿಗಳವರೆಗೆ ಮಹಿಳೆಯರ ಕೂಲಿ ಕಡಿಮೆ ಇರುವದು ಕಂಡುಬರುತ್ತದೆ.

ಆದರೆ ಮಹಿಷವಾಡಗಿ ಎಂಬ ಸಂಪೂರ್ಣ ನೀರಾವರಿ ಬೇಸಾಯದ ಗ್ರಾಮದಲ್ಲಿ ಮಹಿಳೆಯರ ಕೂಲಿಯು ಗಂಡಸರು ಪಡೆಯುವ ಕೂಲಿಗಿಂತ ಕಡಿಮೆಯಿರುವಂತಹುದು ಕಂಡುಬರುತ್ತದೆ.

ಕೋಷ್ಟಕ 3.11 ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭಾಗವಹಿಸಿದ ಮಹಿಳೆಯರ ಪ್ರಮಾಣ

ಅ ಸಂ	ಪ್ರತಿಕ್ರಿಯ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣಬೇಸಾಯ	
1	ಹೌದು		9	25%	45%	35%
2	ಇಲ್ಲ	20	11	75%	55%	65%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ 75% ರಷ್ಟು ಮಹಿಳೆಯರು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭಾಗವಹಿಸಿರುವುದಿಲ್ಲ ಮತ್ತು 25% ರಷ್ಟು ಮಹಿಳೆಯರು ಮಾತ್ರ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭಾಗವಹಿಸಿದ್ದಾರೆ ಎಂಬುದು ಕಂಡುಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ 55% ರಷ್ಟು ಮಹಿಳೆಯರು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭಾಗವಹಿಸಿರುವುದಿಲ್ಲ ಮತ್ತು 45% ರಷ್ಟು ಮಹಿಳೆಯರು ಮಾತ್ರ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭಾಗವಹಿಸಿದ್ದಾರೆ ಎಂಬುದು ಕಂಡುಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 65% ರಷ್ಟು ಮಹಿಳೆಯರು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭಾಗವಹಿಸಿರುವುದಿಲ್ಲ ಮತ್ತು ಕೇವಲ 35% ರಷ್ಟು ಮಹಿಳೆಯರು ಮಾತ್ರ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭಾಗವಹಿಸಿದ್ದಾರೆ ಎಂಬುದು ಕಂಡುಬರುತ್ತದೆ.

ಕೋಷ್ಟಕ 3.12 ಬ್ಯಾಂಕ್ ಖಾತೆ ಹೊಂದಿದ ಕೃಷಿ ಕಾರ್ಮಿಕ ಮಹಿಳೆಯರ ಪ್ರಮಾಣ.

ಅ ಸಂ	ಪ್ರತಿಕ್ರಿಯ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಹೌದು		11	–	55%	27.5%
2	ಇಲ್ಲ	20	9	100%	45%	72.5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

100% ರಷ್ಟು ಅಂದರೆ ನೀರಾವರಿ ಬೇಸಾಯದಲ್ಲಿ ದುಡಿಯುವ ಒಬ್ಬ ಮಹಿಳೆಯೂ ಬ್ಯಾಂಕ್ ಖಾತೆ ಹೊಂದಿರುವುದಿಲ್ಲ ಎಂಬುದು ಕಂಡುಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ 55% ರಷ್ಟು ಮಹಿಳೆಯರು ಬ್ಯಾಂಕ್ ಖಾತೆ ಹೊಂದಿರುತ್ತಾರೆ ಮತ್ತು ಮತ್ತು 45% ರಷ್ಟು ಮಹಿಳೆಯರು ಬ್ಯಾಂಕ್ ಖಾತೆ ಹೊಂದಿರುವುದಿಲ್ಲ ಎಂಬುದು ಕಂಡುಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 72.5% ರಷ್ಟು ಮಹಿಳೆಯರು ಬ್ಯಾಂಕ್ ಖಾತೆ ಹೊಂದಿರುವುದಿಲ್ಲ ಮತ್ತು 27.5% ಮಹಿಳೆಯರು ಬ್ಯಾಂಕ್ ಖಾತೆ ಹೊಂದಿರುತ್ತಾರೆ ಎಂಬುದು ಕಂಡುಬರುತ್ತದೆ.

ಕೋಷ್ಟಕ 3.13 ಸ್ವ ಸಹಾಯ ಸದಸ್ಯತ್ವದ ಪ್ರಮಾಣ

ಅ ಸಂ	ಪ್ರತಿಕ್ರಿಯ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಹೌದು	10	9	50%	45%	47.5%
2	ಇಲ್ಲ	10	11	50%	55%	52.5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 50% ರಷ್ಟು,ಮಹಿಳೆಯರು ಸ್ವ ಸಹಾಯ ಸಂಘದ ಸದಸ್ಯತ್ವ ಹೊಂದಿದ್ದು 50% ರಷ್ಟು ಮಹಿಳೆಯರು ಸದಸ್ಯತ್ವ ಹೊಂದಿರದೇ ಇರುವದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 55% ರಷ್ಟು,ಮಹಿಳೆಯರು ಸ್ವ ಸಹಾಯ ಸಂಘದ ಸದಸ್ಯತ್ವ ಹೊಂದಿರದೇ ಇರುವದು ಮತ್ತು 45% ರಷ್ಟು ಮಹಿಳೆಯರು ಸದಸ್ಯತ್ವ ಹೊಂದಿರುವದು ಕಂಡು ಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 52.5% ರಷ್ಟು,ಮಹಿಳೆಯರು ಸ್ವ ಸಹಾಯ ಸಂಘದ ಸದಸ್ಯತ್ವ ಹೊಂದಿರದೇ ಇರುವದು ಮತ್ತೂ 47.5% ರಷ್ಟು ಮಹಿಳೆಯರು ಸದಸ್ಯತ್ವ ಹೊಂದಿರುವದು ಕಂಡು ಬರುತ್ತದೆ.

4. ಸಂದರ್ಶಿತ ಕೃಷಿ ಕಾರ್ಮಿಕ ಮಹಿಳೆಯ ಶೈಕ್ಷಣಿಕ ಸ್ಥಿತಿ ಗತಿ

ಪ್ರಸ್ತುತ ಅಧ್ಯಯನಕ್ಕೆ ಸೂಕ್ತವಾಗುವ ರೀತಿಯಲ್ಲಿ ಕೃಷಿಯಲ್ಲಿ ಕಾರ್ಮಿಕರಾಗಿ ದುಡಿಯುವ ಮಹಿಳೆಯರ ಕುಟುಂಬದ ಸದಸ್ಯರ ಗರಿಷ್ಠ ಶೈಕ್ಷಣಿಕ ಮಟ್ಟ,ಸಾಕ್ಷರತಾ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆ,ಮಹಿಳೆಯು ಪಡೆದ ತರಬೇತಿಗಳು ಮತ್ತು ಕೃಷಿ ಕಾರ್ಮಿಕ ಮಹಿಳೆಯರಿಗೆ ಶಿಕ್ಷಣದ ಅವಶ್ಯಕತೆ ಕುರಿತು ಅಂಕಿ ಸಂಖ್ಯೆಗಳನ್ನು ಪಡೆಯಲಾಯಿತು.

ಕೋಷ್ಟಕ 4.1 ಕುಟುಂಬದ ಸದಸ್ಯರ ಗರಿಷ್ಠ ಶೈಕ್ಷಣಿಕ ಮಟ್ಟ

ಅ ಸಂ	ಶೈಕ್ಷಣಿಕ ಮಟ್ಟ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಅನಕ್ಷರಸ್ಥ	7	4	35%	20%	27.5%
2	ಪ್ರಾಥಮಿಕ	3	5	15%	25%	20%
3	ಪ್ರೌಢ	6	3	30%	15%	22.5%
4	ಪಿ. ಯು. ಸಿ	1	3	5%	15%	10%
5	ಪದವಿ	3	2	15%	10%	12.5%
6	ಸ್ನಾತಕೋತ್ತರ	–	–	–	–	–
7	ವೃತ್ತಿ ತರಬೇತಿ	–	3	–	15%	7.5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರ ಕುಟುಂಬಗಳಲ್ಲಿ 15% ರಷ್ಟು,ಸದಸ್ಯರು ಪದವಿ ಹೊಂದಿದ್ದು, 35% ರಷ್ಟು ಸದಸ್ಯರು ಅನಕ್ಷರಸ್ಥರಾಗಿದ್ದಾರೆ ಎಂಬುದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರ ಕುಟುಂಬಗಳಲ್ಲಿ 10% ರಷ್ಟು,ಸದಸ್ಯರು ಪದವಿ ಹೊಂದಿದ್ದು, 20% ರಷ್ಟು ಸದಸ್ಯರು ಅನಕ್ಷರಸ್ಥರಾಗಿದ್ದಾರೆ ಎಂಬುದು ಕಂಡು ಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ ಬೇಸಾಯದಲ್ಲಿ ದುಡಿಯುವ ಮಹಿಳೆಯರ ಕುಟುಂಬಗಳಲ್ಲಿ 12.5% ರಷ್ಟು,ಸದಸ್ಯರು ಪದವಿ ಹೊಂದಿದ್ದು, 27.5% ರಷ್ಟು ಸದಸ್ಯರು ಅನಕ್ಷರಸ್ಥರಾಗಿದ್ದಾರೆ ಎಂಬುದು ಕಂಡು ಬರುತ್ತದೆ.

ಕೋಷ್ಟಕ 4.2 ಕುಟುಂಬದ ಸಾಕ್ಷರತಾ ಶಿಕ್ಷಣ.

ಅ ಸಂ	ಪ್ರತಿಕ್ರಿಯೆ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಹೌದು	1	3	5%	15%	10%
2	ಇಲ್ಲ	19	16	95%	80%	87.5%
3	ಅನ್ವಯಿಸುವುದಿಲ್ಲ.	–	1	–	5%	2.5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 95% ರಷ್ಟು,ಮಹಿಳೆಯರು ಸಾಕ್ಷರತಾ ಕಾರ್ಯಕ್ರಮದ ಉಪಯೋಗವನ್ನು ಪಡೆದುಕೊಂಡಿಲ್ಲ ಮತ್ತು 5% ರಷ್ಟು ಮಹಿಳೆಯರು ಮಾತ್ರ ಅದರ ಸದುಪಯೋಗವನ್ನು ಪಡೆದುಕೊಂಡಿರುವುದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 80% ರಷ್ಟು,ಮಹಿಳೆಯರು ಸಾಕ್ಷರತಾ ಕಾರ್ಯಕ್ರಮದ ಉಪಯೋಗವನ್ನು ಪಡೆದುಕೊಂಡಿಲ್ಲ ಮತ್ತು 15% ರಷ್ಟು ಮಹಿಳೆಯರು ಮಾತ್ರ ಅದರ ಸದುಪಯೋಗವನ್ನು ಪಡೆದುಕೊಂಡಿರುವುದು ಕಂಡು ಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 87.5% ರಷ್ಟು,ಮಹಿಳೆಯರು ಸಾಕ್ಷರತಾ ಕಾರ್ಯಕ್ರಮದ ಉಪಯೋಗವನ್ನು ಪಡೆದುಕೊಂಡಿಲ್ಲ ಮತ್ತು 10% ರಷ್ಟು ಮಹಿಳೆಯರು ಮಾತ್ರ ಅದರ ಸದುಪಯೋಗವನ್ನು ಪಡೆದುಕೊಂಡಿರುವುದು ಕಂಡು ಬರುತ್ತದೆ.

ಕೋಷ್ಟಕ 4.3 ಕೃಷಿಗೆ ಕುರಿತಂತೆ ಮಹಿಳೆ ಪಡೆದುಕೊಂಡಿರುವ ತರಬೇತಿಗಳು

ಅ ಸಂ	ಪ್ರತಿಕ್ರಿಯೆ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಹೌದು	1	11	5%	55%	30%
2	ಇಲ್ಲ	19	9	95%	45%	70%
3	ಅನ್ವಯಿಸುವುದಿಲ್ಲ.	–	–	–	–	–
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 95% ರಷ್ಟು,ಮಹಿಳೆಯರು ಕೃಷಿ ಕುರಿತಾಗಿ ಯಾವುದೇ ತರಬೇತಿ ಪಡೆದುಕೊಂಡಿಲ್ಲ ಮತ್ತು 5% ರಷ್ಟು ಮಹಿಳೆಯರು ಮಾತ್ರ ತರಬೇತಿ ಪಡೆದುಕೊಂಡಿರುವುದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 55% ರಷ್ಟು, ಮಹಿಳೆಯರು ಕೃಷಿ ಕುರಿತಾಗಿ ಯಾವುದೇ ತರಬೇತಿ ಪಡೆದುಕೊಂಡಿಲ್ಲ ಮತ್ತು 45% ರಷ್ಟು ಮಹಿಳೆಯರು ಮಾತ್ರ ತರಬೇತಿ ಪಡೆದುಕೊಂಡಿರುವುದು ಕಂಡು ಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 70% ರಷ್ಟು,ಮಹಿಳೆಯರು ಕೃಷಿ ಕುರಿತಾಗಿ ಯಾವುದೇ ತರಬೇತಿ ಪಡೆದುಕೊಂಡಿಲ್ಲ ಮತ್ತು 30% ರಷ್ಟು ಮಹಿಳೆಯರು ಮಾತ್ರ ತರಬೇತಿ ಪಡೆದುಕೊಂಡಿರುವುದು ಕಂಡು ಬರುತ್ತದೆ.

ವಿಶ್ಲೇಷಣೆ : ಸಮೀಕ್ಷೆ ಪ್ರಶ್ನೆ ಸಂಖ್ಯೆ: 4.4

ಕೃಷಿ ಕಾರ್ಮಿಕ ಮಹಿಳೆಯರಿಗೆ ಶಿಕ್ಷಣದ ಅವಶ್ಯಕತೆಯ ಬಗ್ಗೆ ಪ್ರಶ್ನೆ ಕೇಳಲಾಗಿತ್ತು.ಆ ವಿವಿಧ ಅಭಿಪ್ರಾಯಗಳಲ್ಲಿ ಆಯ್ದ ಕೆಲವನ್ನು ಈ ಕೆಳಗಿನಂತೆ ಕ್ರೋಢೀಕರಿಸಲಾಗಿದೆ.

01. " ಶಿಕ್ಷಣವಿದ್ದಿದ್ದರೆ ಬೇರೆ ಬೇರೆ ಉದ್ಯೋಗಗಳನ್ನು ಮಾಡುವ ಅವಕಾಶಗಳಿರುತ್ತಿದ್ದವು. ಈಗ ಸಮಸ್ಯೆಗಳು ಎದುರಾಗಿವೆ. ಆದರೆ ಶಿಕ್ಷಣವಿಲ್ಲ ಅದಕ್ಕಾಗಿ ಕೂಲಿಯನ್ನೇ ಆವಲಂಬಿಸಬೇಕಾಗಿದೆ.
02. "ಬೇರೆ ಬೇರೆ ಉದ್ಯೋಗಗಳನ್ನು ಆರಿಸಿಕೊಳ್ಳುವ ಅವಕಾಶವಿರುತ್ತದೆ. ಜೀವನದ ಈ ಗಳಿಗೆಯಲ್ಲಿ ಸಾಕಷ್ಟು ಸಮಸ್ಯೆಗಳು ಎದುರಾಗಿವೆ.ಪೆಟ್ಟು ತಿಂದಿದ್ದೇವೆ. ಅದಕ್ಕೆ ಶಿಕ್ಷಣ ಪರಿಹಾರವನ್ನು ಒದಗಿಸಬಹುದಿತ್ತು ಎನ್ನಿಸುತ್ತದೆ".
03. "ಶಿಕ್ಷಣವೇ ಎಲ್ಲದಕ್ಕೂ ಆಧಾರ".
04. "ಶಿಕ್ಷಣವಿದ್ದಿದ್ದರೆ ಕೂಲಿ ಮಾಡುವುದು ತಪ್ಪುತ್ತಿತ್ತು".
05. "ಶಿಕ್ಷಣವಿದ್ದಿದ್ದರೆ ನೆರಳಿನಲ್ಲಿ ಕೆಲಸ ಮಾಡಿ ಊಟ ಮಾಡಬಹುದಿತ್ತು.ಬಿಸಿಲಿನಲ್ಲಿ ದುಡಿಯುವ ಆವಲಂಬಿತ ಬಾಳು ತಪ್ಪುತ್ತಿತ್ತು".
06. "ಶಿಕ್ಷಣವಿದ್ದಿದ್ದರೆ ಬಿಸಿಲು ಮಳೆ ಲೆಕ್ಕಿಸದೇ ಪ್ರಯಾಸ ಪಡುಬಹುದಾದ ಅಗತ್ಯತೆ ಇರುತ್ತಿರಲಿಲ್ಲ".
07. "ಮೈ ಮುರಿದು ದುಡಿದರೂ ಹೊಟ್ಟೆ ತುಂಬಿಸುವಷ್ಟು ಕೂಲಿ ಸಿಗುವುದಿಲ್ಲ. ಶಿಕ್ಷಣವಿದ್ದಿದ್ದರೆ ಉತ್ತಮ ಕೆಲಸ ಪಡೆದು ಹೊಟ್ಟೆ ತುಂಬ ಊಟ ಮಾಡಬಹುದಿತ್ತು.
08."ಸಮಾಜದಲ್ಲಿ,ಮಾರುಕಟ್ಟೆಯಲ್ಲಿ ನಡೆಯುವ ವಿಚಾರಗಳು ಬೆಳವಣಿಗೆಗಳು ಮತ್ತು ಜೀವನ ನಡೆಸಲು ಬೇಕಾದಂತಹ ಮಾಹಿತಿ ಲಭ್ಯವಾಗುತ್ತವೆ.
09. "ಮಕ್ಕಳೆದುರು ಅಸಹ್ಯವೆನಿಸುತ್ತದೆ".
10. "ಸುಳ್ಳು ಹೇಳಿ ವಂಚನೆ ಮಾಡುತ್ತಾರೆ ಅದರಿಂದ ತಪ್ಪಿಸಿಕೊಳ್ಳಬಹುದು".
11. "ಶಿಕ್ಷಣವಿದ್ದಿದ್ದರೆ ಬಡತನವಿರುತ್ತಿರಲಿಲ್ಲ".
12. "ಶಿಕ್ಷಣವಿದ್ದರೆ ಜ್ಞಾನವಿರುತ್ತದೆ".

5. ಸಂದರ್ಶಿತ ಕೃಷಿ ಕಾರ್ಮಿಕ ಮಹಿಳೆಯ ಆರೋಗ್ಯದ ಸ್ಥಿತಿ ಗತಿ

ಪ್ರಸ್ತುತ ಅಧ್ಯಯನಕ್ಕೆ ಸೂಕ್ತವಾಗುವ ರೀತಿಯಲ್ಲಿ ಕೃಷಿಯಲ್ಲಿ ಕಾರ್ಮಿಕರಾಗಿ ದುಡಿಯುವ ಮಹಿಳೆಯರ ಪೌಷ್ಠಿಕ ಮಟ್ಟ,ಮಹಿಳೆಯ ವಿಶ್ರಾಂತಿಯ ಪ್ರಮಾಣ,ಅನಾರೋಗ್ಯದ ದಿನದಲ್ಲಿ ಕೆಲಸ ಮಾಡಲು ಕಾರಣಗಳು,ಕುಟುಂಬದ ಯಜಮಾನನಿಗಿರುವ ಚಟಗಳು,ಶುಚಿತ್ವದ ವ್ಯವಸ್ಥೆಗಳ ಕುರಿತು ಅಂಕಿ ಸಂಖ್ಯೆಗಳನ್ನು ಪಡೆಯಲಾಯಿತು.

ಕೋಷ್ಟಕ 5.1 ಪೌಷ್ಠಿಕ ಆಹಾರ ದೊರೆಯುವ ಮಟ್ಟ

ಅ ಸಂ	ಪ್ರತಿಕ್ರಿಯೆ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಹೌದು	18	13	90%	65%	77.5%
2	ಇಲ್ಲ	2	7	10%	35%	22.5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರ ಕುಟುಂಬಗಳಲ್ಲಿ 90% ರಷ್ಟು ಪೌಷ್ಠಿಕ ಆಹಾರ ದೊರೆಯತ್ತಿದ್ದು 10% ರಷ್ಟು ಕುಟುಂಬಗಳಲ್ಲಿ ಮಾತ್ರ ಪೌಷ್ಠಿಕ ಆಹಾರ ದೊರೆಯುವುದಿಲ್ಲ ಎಂಬುದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರ ಕುಟುಂಬಗಳಲ್ಲಿ 65% ರಷ್ಟು ಪೌಷ್ಠಿಕ ಆಹಾರ ದೊರೆಯತ್ತಿದ್ದು 35% ರಷ್ಟು ಕುಟುಂಬಗಳಲ್ಲಿ ಮಾತ್ರ ಪೌಷ್ಠಿಕ ಆಹಾರ ದೊರೆಯುವುದಿಲ್ಲ ಎಂಬುದು ಕಂಡು ಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ ಬೇಸಾಯದಲ್ಲಿ ದುಡಿಯುವ ಮಹಿಳೆಯರ ಕುಟುಂಬಗಳಲ್ಲಿ 77.5% ರಷ್ಟು ಪೌಷ್ಠಿಕ ಆಹಾರ ದೊರೆಯತ್ತಿದ್ದು 22.5% ರಷ್ಟು ಕುಟುಂಬಗಳಲ್ಲಿ ಮಾತ್ರ ಪೌಷ್ಠಿಕ ಆಹಾರ ದೊರೆಯುವುದಿಲ್ಲ ಎಂಬುದು ಕಂಡು ಬರುತ್ತದೆ.

ಕೋಷ್ಟಕ 5.2 ಕೃಷಿ ಕಾರ್ಮಿಕ ಮಹಿಳೆಯರು ಪಡೆಯುವ ವಿಶ್ರಾಂತಿಯ ಪ್ರಮಾಣ

ಅ ಸಂ	ವಿಶ್ರಾಂತಿಯ ಪ್ರಮಾಣ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	1 ತಾಸು	4	13	20%	65%	42.5%
2	2 ತಾಸು	16	2	80%	10%	45%
3	2 ತಾಸಿಗಿಂತ ಹೆಚ್ಚು	–	–	–	–	12.5%
4	ಸಿಗುವುದಿಲ್ಲ	–	5	–	25%	–
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 80% ರಷ್ಟು,ಮಹಿಳೆಯರು ಕೆಲಸದ ಮಧ್ಯ 2 ತಾಸು ವಿಶ್ರಾಂತಿ ಪಡೆಯುತ್ತಿದ್ದು, 20% ರಷ್ಟು ಮಹಿಳೆಯರು 1 ತಾಸು ವಿಶ್ರಾಂತಿ ಪಡೆಯುತ್ತಿರುವುದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 65% ರಷ್ಟು, ಮಹಿಳೆಯರು ಕೆಲಸದ ಮಧ್ಯ 1 ತಾಸು ವಿಶ್ರಾಂತಿ, 10% ರಷ್ಟು ಮಹಿಳೆಯರು 1 ತಾಸು ವಿಶ್ರಾಂತಿ ಪಡೆಯುತ್ತಿರುವುದು ಮತ್ತು 25% ಮಹಿಳೆಯರಿಗೆ ಆ ವಿಶ್ರಾಂತಿಯೂ ಸಿಗುವುದಿಲ್ಲ ಎಂಬುದು ಕಂಡು ಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 45% ರಷ್ಟು,ಮಹಿಳೆಯರು ಕೆಲಸದ ಮಧ್ಯ 2 ತಾಸು ವಿಶ್ರಾಂತಿ, 42.5% ರಷ್ಟು ಮಹಿಳೆಯರು 1 ತಾಸು ವಿಶ್ರಾಂತಿ ಪಡೆಯುತ್ತಿರುವುದು ಮತ್ತು 12.5% ರಷ್ಟು ಮಹಿಳೆಯರಿಗೆ ಆ ವಿಶ್ರಾಂತಿಯೂ ಸಿಗುವುದಿಲ್ಲ ಎಂಬುದು ಕಂಡು ಬರುತ್ತದೆ.

ಕೋಷ್ಟಕ 5.3 ಕೃಷಿ ಕಾರ್ಮಿಕ ಮಹಿಳೆಯರಿಗೆ ಇರುವ ಕಾಯಿಲೆಗಳು

ಅ ಸಂ	ಕಾಯಿಲೆಗಳು	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಅಸ್ತಮಾ	1	–	5%	–	25%
2	ಗರ್ಭಕೋಶಕ್ಕೆ ಸಂಬಂದಿಸಿದ ಕಾಯಿಲೆ	–	1	–	5%	2.5%
3	ಅಂಗವಿಕಲತೆ	–	1	–	5%	2.5%
4	ಹೃದಯ ರೋಗ	–	1	–	5%	2.5%
5	ಅಶಕ್ತತೆ	8	4	40%	20%	30%
6	ಗರ್ಭಕೊಶಕ್ಕೆ ಸಂಬಂಧಿಸಿದ ಕಾಯಿಲೆ, ಅಶಕ್ತತೆ	–	2	–	10%	5%
7	ಯಾವುದು ಇಲ್ಲ	11	11	55%	55%	55%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 40% ರಷ್ಟು,ಮಹಿಳೆಯರು ಅಶಕ್ತತೆಯಿಂದ ಮತ್ತು 5% ಅಸ್ತಮಾದಿಂದ ಬಳಲುತ್ತಿರುವುದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 20% ರಷ್ಟು, ಮಹಿಳೆಯರು ಅಶಕ್ತತೆಯಿಂದ ಮತ್ತು 10% ರಷ್ಟು ಮಹಿಳೆಯರು ಗರ್ಭ ಕೋಶಕ್ಕೆ ಸಮಬಂಧಿಸಿದ ಮತ್ತು ಅಶಕ್ತತೆಯಿಂದ ಬಳಲುತ್ತಿರುವುದು ಕಂಡು ಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 30% ರಷ್ಟು,ಮಹಿಳೆಯರು ಅಶಕ್ತತೆಯಿಂದ ಮತ್ತು 5% ರಷ್ಟು ಮಹಿಳೆಯರು ಗರ್ಭ ಕೋಶಕ್ಕೆ ಸಮಬಂಧಿಸಿದ ಮತ್ತು ಅಶಕ್ತತೆಯಿಂದ ಬಳಲುತ್ತಿರುವುದು ಕಂಡು ಬರುತ್ತದೆ.

ಕೋಷ್ಟಕ 5.4 ಅನಾರೋಗ್ಯದಲ್ಲೂ ಕೆಲಸಕ್ಕೆ ಹೋಗುವ ಕೃಷಿ ಕಾರ್ಮಿಕ ಮಹಿಳೆಯರ ಪ್ರಮಾಣ.

ಅ ಸಂ	ಪ್ರತಿಕ್ರಿಯೆ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಹೌದು	12	10	60%	50%	55%
2	ಇಲ್ಲ	8	10	40%	50%	45%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 60% ರಷ್ಟು,ಮಹಿಳೆಯರು ಅನಾರೋಗ್ಯದಿಂದ ಬಳಲುತ್ತಿದ್ದರೂ ಸಹ ಕೆಲಸಕ್ಕೆ ಹೋಗುವುದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 50% ರಷ್ಟು, ಮಹಿಳೆಯರು ಅನಾರೋಗ್ಯದಿಂದ ಬಳಲುತ್ತಿದ್ದರೂ ಸಹ ಕೆಲಸಕ್ಕೆ ಹೋಗುವುದು ಕಂಡು ಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ 55% ರಷ್ಟು,ಮಹಿಳೆಯರು ಮಹಿಳೆಯರು ಅನಾರೋಗ್ಯದಿಂದ ಬಳಲುತ್ತಿದ್ದರೂ ಸಹ ಕೆಲಸಕ್ಕೆ ಹೋಗುವುದು ಮತ್ತು 45% ರಷ್ಟು ಮಹಿಳೆಯರು ಅನಾರೋಗ್ಯದ ದಿನಗಳಲ್ಲಿ ವಿಶ್ರಾಂತಿ ಪಡೆಯುವದು ಕಂಡು ಬರುತ್ತದೆ.

ಕೋಷ್ಟಕ 5.5 ಅನಾರೋಗ್ಯದಲ್ಲೂ ಕೆಲಸಕ್ಕೆ ಹೋಗಲು ಕಾರಣಗಳು.

ಅ ಸಂ	ಕಾರಣಗಳು	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಮನೆ ನಡೆಯುವುದಿಲ್ಲ	12	9	60%	45%	52.5%
2	ಕೆಲಸ ಹಿಂದೆ ಬಿದ್ದರೆ ಘುಲಿಗೆ ತೊಂದರೆ ಆಗಬಹುದು	–	1	–	5%	2.5%
3	ಅನ್ವಯಿಸುವುದಿಲ್ಲ	8	10	40%	50%	45%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 60% ರಷ್ಟು,ಮಹಿಳೆಯರು ಅನಾರೋಗ್ಯದಿಂದ ಬಳಲುತ್ತಿದ್ದರೂ ಸಹ ಕುಟುಂಬದ ನಿರ್ವಹಣೆ ಸಾಧ್ಯವಾಗುವುದಿಲ್ಲವೆಂಬ ಕಾರಣಕ್ಕೆ ಕೆಲಸಕ್ಕೆ ಹೋಗುವುದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 45% ರಷ್ಟು, ಮಹಿಳೆಯರು ಅನಾರೋಗ್ಯದಿಂದ ಬಳಲುತ್ತಿದ್ದರೂ ಸಹ ಕುಟುಂಬದ ನಿರ್ವಹಣೆ ಸಾಧ್ಯವಾಗುವುದಿಲ್ಲವೆಂಬ ಕಾರಣಕ್ಕೆ ಮತ್ತು 5% ರಷ್ಟು ಮಹಿಳೆಯರು ಕೆಲಸ ಹಿಂದೆ ಬಿದ್ದರೆ ಫಸಲಿಗೆ ತೊಂದರೆಯಾಗಬಹುದೆಂಬ ಕಾರಣಕ್ಕೆ ಕೆಲಸಕ್ಕೆ ಹೋಗುವುದು ಕಂಡು ಬರುತ್ತದೆ

ಒಟ್ಟಾರೆ ಅಥಣಿ ತಾಲೂಕಿನಲ್ಲಿ 52.5% ರಷ್ಟು,ಮಹಿಳೆಯರು ಮಹಿಳೆಯರು ಅನಾರೋಗ್ಯದಿಂದ ಬಳಲುತ್ತಿದ್ದರೂ ಸಹ ಕುಟುಂಬದ ನಿರ್ವಹಣೆ ಸಾಧ್ಯವಾಗುವುದಿಲ್ಲವೆಂಬ ಕಾರಣಕ್ಕೆ ಮತ್ತು 2.5% ರಷ್ಟು ಮಹಿಳೆಯರು ಕೆಲಸ ಹಿಂದೆ ಬಿದ್ದರೆ ಫಸಲಿಗೆ ತೊಂದರೆಯಾಗಬಹುದೆಂಬ ಕಾರಣಕ್ಕೆ ಕೆಲಸಕ್ಕೆ ಹೋಗುವುದು ಕಂಡು ಬರುತ್ತದೆ

ಕೋಷ್ಟಕ 5.6 ಕೃಷಿ ಕಾರ್ಮಿಕ ಮಹಿಳೆಯರ ಪತಿಗೆ ಇರುವ ದುರಭ್ಯಾಸಗಳು.

ಅ ಸಂ	ದುರಭ್ಯಾಸಗಳು	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ತಂಬಾಕು	9	2	45%	10%	27.5%
2	ಕುಡಿತ	1	–	5%	–	2.5%
3	ಇಲ್ಲ	4	9	20%	45%	32.5%
4	ಅನ್ವಯಿಸುವುದಿಲ್ಲ	–	2	–	10%	5%
5	ತಂಬಾಕು,ಕುಡಿತ	6	7	30%	35%	32.5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರ ಪತಿಗಳಿಗೆ 45% ರಷ್ಟು, ತಂಬಾಕು ತಿನ್ನುವ,30% ಪತಿಗಳಿಗೆ ತಂಬಾಕು ತಿನ್ನುವದು ಮತ್ತು ಮಧ್ಯಪಾನ ಮಾಡುವದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 10% ರಷ್ಟು ತಂಬಾಕು ತಿನ್ನುವ,35% ರಷ್ಟು ಪತಿಗಳಲ್ಲಿ ತಂಬಾಕು ತಿನ್ನುವದು ಮತ್ತು ಮಧ್ಯಪಾನ ಮಾಡುವದು ಕಂಡು ಬರುತ್ತದೆ

ಒಟ್ಟಾರೆ ಅಥಣಿ ತಾಲೂಕಿನಲ್ಲಿ 32.5% ರಷ್ಟು,ಮಹಿಳೆಯರ ಪತಿಗಳಿಗೆ ತಂಬಾಕು ತಿನ್ನುವದು ಮತ್ತು ಮಧ್ಯಪಾನ ಮಾಡುವದು 27.5% ರಷ್ಟು,ಮಹಿಳೆಯರ ಪತಿಗಳಲ್ಲಿ ತಂಬಾಕು ತಿನ್ನುವದು ಕಂಡು ಬರುತ್ತದೆ.

ಕೋಷ್ಟಕ 5.7 ಕೃಷಿ ಕಾರ್ಮಿಕ ಮಹಿಳೆಯರ ಮನೆಗಳಲ್ಲಿ ಪ್ರತ್ಯೇಕ ಸ್ನಾನದ ಮತ್ತು ಅಡುಗೆ ಮನೆ ವ್ಯವಸ್ಥೆ

ಅ ಸಂ	ಪ್ರತಿಕ್ರಿಯೆ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಹೌದು	5	1	25%	5%	15%
2	ಇಲ್ಲ	15	19	75%	95%	85%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರ 75% ರಷ್ಟು ಮನೆಗಳಲ್ಲಿ ಪ್ರತ್ಯೇಕ ಸ್ನಾನದ ಮತ್ತು ಅಡುಗೆ ಮನೆ ವ್ಯವಸ್ಥೆ ಇಲ್ಲದಿರುವುದು ಮತ್ತು 25% ರಷ್ಟು ಮನೆಗಳಲ್ಲಿ ಪ್ರತ್ಯೇಕ ಸ್ನಾನದ ಮತ್ತು ಅಡುಗೆ ಮನೆ ವ್ಯವಸ್ಥೆ ಇರುವುದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರ 95% ರಷ್ಟು ಮನೆಗಳಲ್ಲಿ ಪ್ರತ್ಯೇಕ ಸ್ನಾನದ ಮತ್ತು ಅಡುಗೆ ಮನೆ ವ್ಯವಸ್ಥೆ ಇಲ್ಲದಿರುವುದು ಮತ್ತು 5% ರಷ್ಟು ಮನೆಗಳಲ್ಲಿ ಪ್ರತ್ಯೇಕ ಸ್ನಾನದ ಮತ್ತು ಅಡುಗೆ ಮನೆ ವ್ಯವಸ್ಥೆ ಇರುವುದು ಕಂಡು ಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ ಬೇಸಾಯದಲ್ಲಿ ದುಡಿಯುವ ಮಹಿಳೆಯರ 85% ರಷ್ಟು ಮನೆಗಳಲ್ಲಿ ಪ್ರತ್ಯೇಕ ಸ್ನಾನದ ಮತ್ತು ಅಡುಗೆ ಮನೆ ವ್ಯವಸ್ಥೆ ಇಲ್ಲದಿರುವುದು ಮತ್ತು 15% ರಷ್ಟು ಮನೆಗಳಲ್ಲಿ ಪ್ರತ್ಯೇಕ ಸ್ನಾನದ ಮತ್ತು ಅಡುಗೆ ಮನೆ ವ್ಯವಸ್ಥೆ ಇರುವುದು ಕಂಡು ಬರುತ್ತದೆ.

ಕೋಷ್ಟಕ 5.8 ಕೃಷಿ ಕಾರ್ಮಿಕ ಮಹಿಳೆಯರ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ

ಅ ಸಂ	ಶೌಚಾಲಯದ ವ್ಯವಸ್ಥೆ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಇದೆ	–	–	–	–	–
2	ಇಲ್ಲ	20	20	100%	100%	100%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರ ಮತ್ತು, ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರ ಎಲ್ಲ ಮನೆಗಳಲ್ಲಿ ಒಟ್ಟಾರೆ ಅಥಣಿ ತಾಲೂಕಿನಲ್ಲಿ ಬೇಸಾಯದಲ್ಲಿ ದುಡಿಯುವ ಮಹಿಳೆಯರ ಎಲ್ಲ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲದಿರುವದು ಕಂಡು ಬರುತ್ತದೆ.

6. ಕುಟುಂಬದ ನಿರ್ವಹಣೆಯಲ್ಲಿ ಸಂದರ್ಶಿತ ಕೃಷಿ ಕಾರ್ಮಿಕ ಮಹಿಳೆಯ ಪಾತ್ರ

ಪ್ರಸ್ತುತ ಅಧ್ಯಯನಕ್ಕೆ ಸೂಕ್ತವಾಗುವ ರೀತಿಯಲ್ಲಿ ಕೃಷಿಯಲ್ಲಿ ಕಾರ್ಮಿಕರಾಗಿ ದುಡಿಯುವ ಮಹಿಳೆಯರು ಆರ್ಥಿಕವಾಗಿ, ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ,ಮನೆಯ ಕೆಲಸ ಕಾರ್ಯಗಳಲ್ಲಿ ಅವಳ ಪಾತ್ರ ಮತ್ತು ಕುಟುಂಬದ ಸದಸ್ಯರ ಕುರಿತು ಅಂಕಿ ಸಂಖ್ಯೆಗಳನ್ನು ಪಡೆಯಲಾಯಿತು.

ಕೋಷ್ಟಕ 6.1 ಕುಟುಂಬದ ಆರ್ಥಿಕ ನಿರ್ವಹಣೆಯಲ್ಲಿ ಮಹಿಳೆಯ ಪ್ರತಿಶತ ಪಾಲು

ಅ ಸಂ	ಪ್ರತಿಶತ ಪಾಲು	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	10	–	1	–	5%	2.5%
2	20	4	2	20%	10%	1.5%
3	30	2	–	10%	–	5%
4	40	5	4	25%	20%	22.5
5	50	2	3	10%	15%	12.5%
6	60	1	3	5%	15%	10%
7	70	–	–	–	–	–
8	80	–	–	–	–	–
9	90	1	–	5%	–	2.5%
10	100	5	7	25%	35%	30%
11	00	–	–	–	–	–
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 25% ರಷ್ಟು ಮಹಿಳೆಯರು ಗರಿಷ್ಠ 100% ರಷ್ಟು ಮತ್ತು 40% ರಷ್ಟು ಪ್ರಮಾಣದಲ್ಲಿ ಆರ್ಥಿಕವಾಗಿ ತಮ್ಮ ಪಾಲನ್ನು ತೊಡಗಿಸುವುದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 35% ರಷ್ಟು ಮಹಿಳೆಯರು ಗರಿಷ್ಠ 100% ರಷ್ಟು ಮತ್ತು 5% ರಷ್ಟು ಮಹಿಳೆಯರು ಕನಿಷ್ಠ 10% ರಷ್ಟು ಪ್ರಮಾಣದಲ್ಲಿ ಆರ್ಥಿಕವಾಗಿ ತಮ್ಮ ಪಾಲನ್ನು ತೊಡಗಿಸುವುದು ಕಂಡು ಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 30% ರಷ್ಟು ಮಹಿಳೆಯರು ಗರಿಷ್ಠ 100% ರಷ್ಟು ಮತ್ತು 2.5% ರಷ್ಟು ಮಹಿಳೆಯರು ಕನಿಷ್ಠ 10% ರಷ್ಟು ಪ್ರಮಾಣದಲ್ಲಿ ಆರ್ಥಿಕವಾಗಿ ತಮ್ಮ ಪಾಲನ್ನು ತೊಡಗಿಸುವುದು ಕಂಡು ಬರುತ್ತದೆ.

ಕೋಷ್ಟಕ 6.2 ಕುಟುಂಬದ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಮಹಿಳೆಯ ಪ್ರತಿಶತ ಪಾಲು

ಅ ಸಂ	ಪ್ರತಿಶತ ಪಾಲು	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	10	–	–	–	–	–
2	20	2	–	10%	–	5%
3	30	1	2	5%	10%	7.5%
4	40	–	–	–	–	–
5	50	–	2	–	10%	5%
6	60	–	1	–	5%	2.5%
7	70	–	1	–	5%	2.5%
8	80	–	–	–	–	–
9	90	–	–	–	–	–
10	100	8	10	4%	50%	45%
11	00	9	4	45%	20%	32.5%
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 45% ರಷ್ಟು ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವಲ್ಲಿ ಯಾವುದೇ ಪಾತ್ರವನ್ನು ನಿರ್ವಹಿಸದಿರುವದು ಮತ್ತು 40% ರಷ್ಟು ಗರಿಷ್ಠ 100% ರಷ್ಟು ಪ್ರಮಾಣದಲ್ಲಿ ಮಹಿಳೆಯರ ಪಾತ್ರವಿರುವುದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 50% ರಷ್ಟು ಮಹಿಳೆಯರು ಗರಿಷ್ಠ 100% ರಷ್ಟು ನಿರ್ಧಾರ ತೆಗೆದುಕೊಳ್ಳುವಲ್ಲಿ ತಮ್ಮ ಪಾತ್ರ ನಿರ್ವಹಿಸುವುದನ್ನು ಮತ್ತು 20% ರಷ್ಟು ಮಹಿಳೆಯರು ಮಾತ್ರ ಯಾವುದೇ ಪಾತ್ರವನ್ನು ನಿರ್ವಹಿಸದಿರುವದು ಕಂಡು ಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 45% ರಷ್ಟು ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವಲ್ಲಿ ತಮ್ಮ ಪಾತ್ರ ನಿರ್ವಹಿಸುವುದನ್ನು ಮತ್ತು 32.5% ರಷ್ಟು ಮಹಿಳೆಯರು ಯಾವುದೇ ಪಾತ್ರವನ್ನು ನಿರ್ವಹಿಸದಿರುವದು ಕಂಡು ಬರುತ್ತದೆ.

ಕೋಷ್ಟಕ 6.3 ಕೃಷಿ ಕೆಲಸ ಹೊರತುಪಡಿಸಿ ಮನೆಯಲ್ಲಿ ನಿರ್ವಹಿಸುವ ಕೆಲಸಗಳು.

		ನಿರ್ವಹಿಸುವ ಕೆಲಸಗಳು								
ಅ. ಸಂ	ಸಂದರ್ಶಿತರ ಸಂಖ್ಯೆ	* 01	* 02	* 03	* 04	* 05	* 06	* 07	* 08	* 09
01	01	✓	✓	✓	✓	✓	✓	✓	✓	✓
02	02	✓	✓	✓	✓	✓	✓	✓	✓	✓
03	03	–	✓	✓	✓	–	✓	–	✓	✓
04	04	–	-	–	✓	–	–	–	✓	✓
05	05	✓	✓	✓	–	–	✓	✓	✓	✓
06	06	✓	✓	✓	✓	✓	✓	✓	–	–
07	07	✓	✓	✓	✓	✓	✓	✓	–	–
08	08	–	✓	–	–	–	✓	✓	–	–
09	09	✓	✓	✓	–	–	✓	✓	–	–
10	10	✓	–	–	–	–	✓	✓	–	–
11	11	✓	✓	✓	✓	✓	✓	✓	✓	✓
12	12	✓	–	✓	✓	–	–	–	–	–
13	13	✓	–	✓	✓	✓	✓	✓	–	–
14	14	✓	✓	–	–	–	✓	✓	–	–
15	15	✓	–	✓	–	✓	–	✓	✓	✓
16	16	✓	✓	✓	–	–	✓	✓	–	–
17	17	–	✓	–	✓	–	–	–	–	–
18	18	✓	–	✓	✓	–	✓	✓	✓	✓
19	19	–	–	–	–	–	✓	✓	–	–
20	20	✓	✓	✓	✓	–	✓	✓	✓	✓
21	21	✓	✓	✓	✓	✓	✓	✓	–	–
22	22	✓	✓	✓	–	–	✓	✓	–	–
23	23	✓	✓	✓	✓	✓	✓	✓	–	–
24	24	✓	✓	✓	✓	✓	✓	✓	✓	✓
25	25	✓	✓	✓	✓	✓	✓	✓		–
26	26	✓	–	✓	–	–	✓	✓	✓	✓
27	27	✓	✓	✓	✓	–	✓	✓	-	–
28	28	✓	✓	✓	–	–	✓	–	✓	✓
29	29	✓	✓	✓	–	–	✓	-	✓	✓
30	30	✓	✓	✓	✓	✓	✓	✓	✓	✓
31	31	✓	✓	✓	✓		✓	✓	✓	✓
32	32	✓	✓	✓	✓	✓	✓	✓	✓	–
33	33	✓	✓	✓	✓	✓	✓	✓	✓	–
34	34	✓	✓	✓	–	✓	✓	✓	✓	✓
35	35	✓	✓	✓	✓	✓	✓	✓	✓	✓
36	36	✓	✓	✓	✓	✓	✓	✓	✓	✓
37	37	✓	–	✓	–	–	✓	✓	✓	✓
38	38	✓	–	–	–	–	✓	–	✓	✓
39	39	✓	✓	✓	–	–	✓	✓	–	–
40	40	✓	–	✓	✓	✓	✓	–	✓	✓
ಒಟ್ಟು ಸಂದರ್ಶಿತರ ಸಂಖ್ಯೆ		35	28	–	24	18	36	32	21	21
ಒಟ್ಟು ಪ್ರತಿಶತ		87.5%	70%	–	60%	45%	90%	80%	52.5%	52.5%

ಆಧಾರ: ಸಮೀಕ್ಷೆ

- 01.ಅಡುಗೆ ಮಾಡುವುದು 02. ನೀರು ತರುವುದು 03. ಉರುವಲು ತರುವುದು 04. ಸಂತೆ-ಪೇಟೆ 05. ಮಕ್ಕಳನ್ನು ಶಾಲೆಗೆ ಆಸ್ಪತ್ರೆಗೆ ಕರೆದೊಯ್ಯುವುದು 06. ಕಸ ಮುಸುರೆ 07. ಬಟ್ಟೆ ತೊಳೆಯುವುದು 08. ಮೇವು ತರುವುದು 09. ದನಕರುಗಳ ಕಾಳಜಿ.

ಈ ಸಮೀಕ್ಷೆಯಲ್ಲಿ ಸಂದರ್ಶಿತರನ್ನ ನೀರಾವರಿ ಬೇಸಾಯ ಮತ್ತು ಮಳೆಯಾಶ್ರಿತ ಬೇಸಾಯ ವೆಂದು ವಿಂಗಡಿಸದೇ ಎಲ್ಲ 40 ಜನ ಸಂದರ್ಶಿತ ಮಹಿಳೆಯರಿಗೆ ಸಂಬಂದಿಸಿದಂತೆ ಅಂಕಿ ಸಂಖ್ಯೆಗಳನ್ನು ಕ್ರೋಢೀಕರಿಸಲಾಗಿದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 90% ರಷ್ಟು ಮಹಿಳೆಯರು ಕಸ ಮುಸುರೆ ಮಾಡುವುದು,87% ರಷ್ಟು ಮಹಿಳೆಯರು ಅಡುಗೆ ಮಾಡುವದು, 82% ರಷ್ಟು ಮಹಿಳೆಯರು ಬಟ್ಟೆ ತೊಳೆಯುವಂತಹ ಮನೆಯ ದಿನನಿತ್ಯದ ಎಲ್ಲ ವ್ಯವಹಾರಗಳನ್ನು ಮಾಡುವದು ಹಾಗೂ ಸಂತೆ ಪೇಟೆಯಂತಹ,ಮಕ್ಕಳ ಶಾಲೆ.ಆಸ್ಪತ್ರೆಯಂತಹ ಕುಟುಂಬದ ಹೊರಗಿನ ಕೆಲಸಗಳಲ್ಲಿ 60% ರಷ್ಟು ಮತ್ತು 45% ರಷ್ಟು ಇರುವುದು ಕಂಡು ಬರುತ್ತದೆ. ಹಾಗೆಯೇ ಗಣನೀಯ ಪ್ರಮಾಣದಲ್ಲಿ ಉಪಕಸುಬಿಗೆ ಸಂಬಂಧಿಸಿದಂತಹ ಮೇವು ತರುವುದು ಮತ್ತು ದನ ಕರುಗಳ ವ್ಯವಸ್ಥೆ ಮಾಡುವುದು ಕಂಡು ಬರುತ್ತದೆ.

ಕೋಷ್ಟಕ 6.4 ಕೃಷಿ ಕಾರ್ಮಿಕ ಮಹಿಳೆಯರ ಕುರಿತು ಕುಟುಂಬದ ಸದಸ್ಯರ ಪ್ರತಿಕ್ರಿಯೆ.

ಅ ಸಂ	ಪ್ರತಿಕ್ರಿಯೆ	ನೀರಾವರಿ	ಒಣ ಬೇಸಾಯ	ಪ್ರತಿಶತ		ಒಟ್ಟು ಪ್ರತಿಶತ
				ನೀರಾವರಿ	ಒಣ ಬೇಸಾಯ	
1	ಅತ್ಯುತ್ತಮ	–	–	–	–	–
2	ಸಮಾಧಾನಕರ ವಾಗಿದೆ	10	14	50%	70%	60%
3	ಬೇಸರ ತರುತ್ತದೆ	10	6	50%	30%	40%
4	ಸಾಯಬೇಕೆನಿಸುತ್ತದೆ	–	–	–	–	–
	ಒಟ್ಟು	20	20	100%	100%	100%

ಆಧಾರ: ಸಮೀಕ್ಷೆ

ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 50% ರಷ್ಟು ಮಹಿಳೆಯರು ಕುಟುಂಬದ ಸದಸ್ಯರ ಪ್ರತಿಕ್ರಿಯೆಯಿಂದ ಸಮಾಧಾನಕರವಾಗಿದ್ದರೆ 50% ರಷ್ಟು ಬೇಸರ ಉಂಟು ಮಾಡುವ ಪ್ರತಿಕ್ರಿಯೆಯು ಸಿಗುವುದು ಕಂಡು ಬರುತ್ತದೆ.

ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 70% ರಷ್ಟು ಮಹಿಳೆಯರು ಕುಟುಂಬದ ಸದಸ್ಯರ ಪ್ರತಿಕ್ರಿಯೆಯಿಂದ ಸಮಾಧಾನಕರವಾಗಿದ್ದರೆ 30% ರಷ್ಟು ಬೇಸರ ಉಂಟು ಮಾಡುವ ಪ್ರತಿಕ್ರಿಯೆಯು ಸಿಗುವುದು ಕಂಡು ಬರುತ್ತದೆ.

ಒಟ್ಟಾರೆ ಅಥಣಿ ತಾಲೂಕಿನಲ್ಲಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಲ್ಲಿ 60% ರಷ್ಟು ಮಹಿಳೆಯರು ಕುಟುಂಬದ ಸದಸ್ಯರ ಪ್ರತಿಕ್ರಿಯೆಯಿಂದ ಸಮಾಧಾನಕರವಾಗಿದ್ದರೆ 40% ರಷ್ಟು ಬೇಸರ ಉಂಟು ಮಾಡುವ ಪ್ರತಿಕ್ರಿಯೆಯು ಸಿಗುವುದು ಕಂಡು ಬರುತ್ತದೆ.

ವಿಶ್ಲೇಷಣೆ : ಸಮೀಕ್ಷೆ ಪ್ರಶ್ನೆ ಸಂಖ್ಯೆ: 6.5

ಕೃಷಿ ಕಾರ್ಮಿಕ ಮಹಿಳೆಯರಿಗೆ ಮಹಿಳೆಯ ದುಡಿತದ ಬಗ್ಗೆ ಪ್ರಶ್ನೆ ಕೇಳಲಾಗಿತ್ತು.ಆ ವಿವಿಧ ಅಭಿಪ್ರಾಯಗಳಲ್ಲಿ ಆಯ್ದ ಕೆಲವನ್ನು ಈ ಕೆಳಗಿನಂತೆ ಕ್ರೋಢೀಕರಿಸಲಾಗಿದೆ.

1. "ದುಡಿಯುವ ಮಹಿಳೆಯು ಅತಿ ದೊಡ್ಡ ದುಸ್ಥರ ಪರಿಸ್ಥಿತಿ ಎದುರಿಸುತ್ತಿದ್ದಾಳೆ.ಪರಿಸ್ಥಿತಿಯ ಕೈಗೊಂಬೆ ಅವಳಾಗಿದ್ದು ಅವಳ ನೋವನ್ನು ಅಳಲನ್ನು ಕೇಳಲು ನಿಜಕ್ಕೂ ಯಾರೂ ಇರುವುದಿಲ್ಲ".
2. "ಸಾಮಾನ್ಯವಾಗಿ ಮನೆಯ ಎಲ್ಲ ಆಗು ಹೋಗುಗಳ ಬಗ್ಗೆ ಮಹಿಳೆಯೇ ಹೆಚ್ಚು ಕಾಳಜಿ ವಹಿಸುವುದರಿಂದ ಬಡತನ ಹಸಿವನ್ನು ನೋಡಲಿಕ್ಕಾಗದೇ ಅವಳು ದುಡಿಯಲು ಹೋಗುತ್ತಾಳೆ. ಅವಳ ಈ ಸ್ಥಿತಿ ತುಂಬಾ ತ್ರಾಸಿನದಾಗಿರುತ್ತದೆ".
3. "ಮಹಿಳೆ ತನ್ನ ಬಡತನಕ್ಕಾಗಿ ಅವಿಶ್ರಾಂತವಾಗಿ ಸದಾ ಕಾಲ ದುಡಿಯಲೇಬೇಕಾಗುತ್ತದೆ.ಇದರಿಂದಾಗಿ ತುಂಬಾ ಬೇಸರವೆನಿಸುತ್ತದೆ".
4. "ಹೆಣ್ಣು ಮಗಳನ್ನು ಮದುವೆ ಮಾಡಿಕೊಡುವಾಗ ಶ್ರೀಮಂತರ ಮನೆಗೆ ಕೊಟ್ಟರೆ ಅವಳು ಚೆನ್ನಾಗಿರುತ್ತಾಳೆ.ಆದರೆ ಬಡತನವಿರುವ ಮನೆಯ ಸೊಸೆಯಾದರೆ ಅವಳ ಹಣೆಬರಹ ದುಡಿಯಲೇಬೇಕಾಗುತ್ತದೆ".
5. "ಹೆಣ್ಣಾಗಿ ಹುಟ್ಟಿದ್ದೇ ಒಂದು ಶಾಪ. ನಮ್ಮ ನೋವುಗಳನ್ನ ಹಂಚಿಕೊಳ್ಳಲು ಇಲ್ಲಿ ಯಾರೂ ಇಲ್ಲ. ಎಲ್ಲದಕ್ಕೂ ನಾವೇ ತಲೆಕೊಡಲೇಬೆಕು.ಮಹಿಳೆಗೆ ದುಡಿತದ ಹೊರತು ಅನ್ಯ ಮಾರ್ಗವಿಲ್ಲ".
6. "ಮಹಿಳೆಗೆ ಕೌಟುಂಬಿಕ ಜವಾಬ್ದಾರಿಗಳು ಬಹಳ.ಮೇಲ್ನೋಟಕ್ಕೆ ಗಂಡ–ಮಗ ಯಜಮಾನರೆನ್ನಿಸಿಕೊಂಡರೂ ಸಂದಿಗ್ಧ ಪರಿಸ್ಥಿತಿಗೆ ಎದೆಕೊಡುವವಳು ಮಹಿಳೆಯೇ.ಆಕೆಗೆ ದುಡಿಯಲೇಬೇಕಾದಂತಹ ಪರಿಸ್ಥಿತಿಗಳು ಎದುರಾಗುತ್ತವೆ".
7. "ಏನಿದ್ದರೂ ದುಡಿಯುವುದು ತಪ್ಪಿಲ್ಲ. ಶಿಕ್ಷಣ ಪಡೆದವರು ಸೂಕ್ಷ್ಮ ಕೆಲಸಗಳಲ್ಲಿ ಇರುತ್ತಾರೆ. ಹೊಲ ಮನೆ ಇದ್ದವರು ಆರಾಮವಾಗಿದ್ದುಕೊಂಡು ದುಡಿಯುತ್ತಾರೆ.ಏನೂ ಇರದವರು ಅನಿವಾರ್ಯವಾಗಿ ಕಷ್ಟ ಪಟ್ಟು ದುಡಿಯುತ್ತಾರೆ".
8. "ಒಬ್ಬಂಟಿಗ ಮಹಿಳೆಯರು ಇರ್ತಾರ,ಅವರಿಗೆ ಹರ್‍ಯಾಗ ದುಡಿದರ,ಸಂಜೀಗಿ ಊಟ ಸಿಗ್ತೈತಿ. ಅದಕ್ಕ ದುಡಿಯಲೇಬೇಕಾಗುತ್ತದೆ".
9. "ದುಡಿಯುವ ಮಹಿಳೆಯ ಪರಿಸ್ಥಿತಿ ತುಂಬಾ ನಾಜೂಕಾಗಿ ಇರುತ್ತದೆ.ಅವಳಿಗೆ ಆಸರೆ, ಭದ್ರತೆ ಬೇಕು".
10. "ಬದುಕಿಗೆ ಅವಳು ದುಡಿಯಲೇಬೇಕು ಆದರೆ ಅವಳು ದುಡಿದಿದ್ದನ್ನು ಹಾಳು ಮಾಡುವ ಕುಡುಕ ಗಂಡ ದುಡಿಯುವ ಮಹಿಳೆಗೆ ಶತೃವಾಗಿದ್ದಾನೆ".
11. "ಮಹಿಳೆಯರು ದುಡಿಯಲೇಬೇಕು.ಅವಳು ದುಡಿಯುವುದರಿಂದ ಆರೋಗ್ಯವೂ ಚೆನ್ನಾಗಿರುತ್ತದೆ. ನೆಮ್ಮದಿಯೂ ಇರುತ್ತದೆ. ಹಾಗೆಯೇ ರೈತ ಮಹಿಳೆಯಾಗಿ ಹೊಲದಲ್ಲಿ ದುಡಿಯುವುದರಲ್ಲಿ ಇರುವ ಸುಖ ಮತ್ತೆಲ್ಲೆಲ್ಲಿಯೂ ಇಲ್ಲ".

ಅಧ್ಯಾಯ – ಐದು

ಉಪಸಂಹಾರ

5.1. ಕಂಡುಕೊಂಡ ಅಂಶಗಳು

5.2. ಸಲಹೆಗಳು ಮತ್ತು ಸಮುದಾಯ-ಸರಕಾರ-ಸಮಾಜ ಕಾರ್ಯದ ಪಾಲ್ಗೊಳ್ಳುವಿಕೆ ಮತ್ತು ಜವಾಬ್ದಾರಿಗಳು

ಅಧ್ಯಾಯ ಐದು

ಉಪಸಂಹಾರ

"ತೊಟ್ಟಿಲ ತೂಗುವ ಕೈ ಜಗತ್ತನ್ನೇ ತೂಗಬಲ್ಲದು" ಎಂಬುದು ಗಾದೆ ಮಾತಾದರೂ ನಿತ್ಯ ಸತ್ಯವಾದದ್ದು. ಇದೇ ವರ್ಷದಲ್ಲಿ ಜಾಗತಿಕ ಆರ್ಥಿಕ ಹಿಂಜರಿತ ತಲೆದೋರಿ ಅಮೇರಿಕಾದಂತ ಅಭಿವೃದ್ದಿ ರಾಷ್ಟ್ರಕ್ಕೂ ತಲೆ ಬಿಸಿಯಾಗಿದೆ. ಆದರೆ ಅದರ ಪರಿಣಾಮ ಭಾರತಕ್ಕೆ ಅಷ್ಟಾಗಿ ಕಾಡಲಿಲ್ಲ. ಇದಕ್ಕೆ ಮುಖ್ಯ ಕಾರಣ ನಮ್ಮ ದೇಶದ ಮುಕ್ಕಾಲು ಭಾಗ ಜನರು ಕೃಷಿಯನ್ನೇ ಆವಲಂಬಿಸಿರುವುದು ಹಾಗೂ ಜವಳಿ ಉದ್ಯಮ ಪ್ರಗತಿ ಪಥದಲ್ಲಿ ಇರುವುದು.

ಪುರಾತನ ಕಾಲದಿಂದಲೂ ತನ್ನದೇ ಆದ ಮಹತ್ವ ಮತ್ತು ಪ್ರಾಮುಖ್ಯತೆಯನ್ನು ಉಳಿಸಿಕೊಂಡು ಬಂದಿರುವ ಕೃಷಿಯು, ಗ್ರಾಮೀಣ ಭಾರತದ ಜೀವನಾಧಾರ ವೃತ್ತಿಯಾಗಿದೆ. ಅಕ್ಷರಸ್ಥ ನಾಗರಿಕರೆನ್ನಿಸಿಕೊಂಡವರಿಗಿಂತ, ಅನಕ್ಷರಸ್ಥ ಗ್ರಾಮೀಣ ಜನರೇ ಮುಂಚೂಣಿಯಲ್ಲಿದ್ದು ನಡೆಸುತ್ತಿರುವ ಕೃಷಿಯಲ್ಲಿ ಪುರುಷ–ಮಹಿಳೆಯರಿಬ್ಬರೂ ಗಮನಾರ್ಹವಾದ ಪಾತ್ರವನ್ನು ವಹಿಸಿದ್ದಾರೆ.

ಅಭಿವೃದ್ಧಿ ಜಾಡನ್ನು ಹಿಡಿದು ಬದಲಾಗುತ್ತಿರುವ ಪ್ರಸ್ತುತ ಜಗತ್ತಿನಲ್ಲಿ ನಾಲ್ಕು ಗೋಡೆಯ ಮಧ್ಯ ಕುಳಿತು ಮಕ್ಕಳನ್ನು ಹೆತ್ತು, ಬೆಳೆಸಿ, ಗಂಡ–ಮನೆ–ಮಕ್ಕಳು ಎಂದು ಕುಳಿತುಕೊಳ್ಳುವ ಕಾಲವು ಇಂದು ಇತಿಹಾಸವಾಯಿತು. ಜೀವನಕ್ಕೆ ಶಿಕ್ಷಣ, ಕೈಯಲ್ಲಿ ಸದಾ ಹರಿದಾಡುವ ಹಣ ಇಂದು ಮಹಿಳೆಯರನ್ನು ಚಂದ್ರನಂಗಳದಲ್ಲಿ ತಿರುಗಾಡಿ ಬರುವಂತೆ ಮಾಡಿದೆ. ಆದರೆ ಈ ಸಂತಸದ ಬೆನ್ನ ಹಿಂದೆಯೇ ಮಹಿಳೆ ಸಾವಿರಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ದಿಟ ಸಂಗತಿ.

ದಿನಕ್ಕೊಂದು ಪರಿಷ್ಕರಿಸಿದ ದರ ಪಟ್ಟಿಯನ್ನು ತೇಲಿ ಬಿಡುವ ಮಾರುಕಟ್ಟೆಯಲ್ಲಿ ಜೀವನಾವಶ್ಯಕ ವಸ್ತುಗಳನ್ನು ಕೊಳ್ಳಬೇಕಾದರೂ ಸಹ ಚಿಂತೆಗೀಡು ಮಾಡುತ್ತಿದೆ. ಅಂತಹುದರಲ್ಲಿ ಮಕ್ಕಳ ಶಿಕ್ಷಣ, ಆರೋಗ್ಯ ಎಂದೆಲ್ಲ ನೋಡಿದಾಗ ಪುರುಷನ ದುಡಿಮೆಯೊಂದರಿಂದಲೇ ಕುಟುಂಬ ನಿರ್ವಹಣೆ ಸಾಧ್ಯವಾಗದು. ಪ್ರಾಮಾಣಿಕವಾಗಿ ದುಡಿದು ಕುಟುಂಬ ನಡೆಸುವ ಪ್ರಾಮಾಣಿಕ ಜನರ ಪರಿಸ್ಥಿತಿಯೇ ಹೀಗಿರಬೇಕಾದರೆ, ನೂರಾರು ದುರಭ್ಯಾಸಗಳಿಗೆ ಅಂಟಿಕೊಂಡು ದುಡಿದದ್ದನ್ನು ಮನೆಗೆ ತರುವ ಮುನ್ನವೇ ಹಾಳು ಮಾಡಿ, ಬರುವ ಗಂಡಸರನ್ನು ಆವಲಂಬಿಸಿರುವ ಮನೆಗಳ ಪರಿಸ್ಥಿತಿ ಊಹಿಸಲೂ ಆಗದು. **ಉತ್ತಮ ಜೀವನ ನಡೆಸಬೇಕೆನ್ನುವ ಮಹಾದಾಸೆ ಒಂದೆಡೆಯಾದರೆ, ದಿನದ ಗಂಜಿಗೂ ಪರದಾಡಬೇಕಾದ ಜೀವದಾಸೆ ಇನ್ನೊಂದೆಡೆ.** ಆದರೆ ಈ ಎರಡೂ ಸಂದಿಗ್ಧ ಪರಿಸ್ಥಿತಿ ಎದುರಿಸಬೇಕಾದವಳು ಮಹಿಳೆಯೇ.

ಗಂಡ ದುಡಿದು ತಂದ ಹಣದಲ್ಲಿ ಸಂಸಾರವನ್ನು ಚೊಕ್ಕಟವಾಗಿ ನಡೆಸಿ, ಅದರಲ್ಲಿಯೇ ಉಳಿಸಿ, ಹೊಸದೊಂದನ್ನು ಕಟ್ಟುವ ತುಡಿತ ಒಬ್ಬಳದಾದರೆ, ದುಡಿದು ತಂದ ಹಣದಲ್ಲಿ ಕುಡಿದು, ತಿಂದು ಮೋಜು ಮಾಡಿ ಕೊಟ್ಟ ಮಿಕ್ಕ ಪುಡಿಗಾಸಲಿ, ಹರಿದ ಸೆರಗಲಿ ಕಣ್ಣೀರ ಒರೆಸಿಕೊಂಡು, ಸಂಸಾರ ದೂಡುವ ದೌರ್ಭಾಗ್ಯ ಇನ್ನೊಬ್ಬಳದು. ಹಾಗಾಗಿ ಅನ್ಯ ಮಾರ್ಗವ ಕಾಣದೇ, ಮಕ್ಕಳನ್ನು ಹೆರುವ, ಜೋಪಾನ ಮಾಡುವ, ಮನೆಯ ಎಲ್ಲ ಕೆಲಸ ಕಾರ್ಯಗಳನ್ನು ಮಾಡುವುದರಷ್ಟೇ

ಪ್ರಾಮುಖ್ಯತೆಯನ್ನು, ಕುಟುಂಬದ ಆರ್ಥಿಕತೆಗೂ ನೀಡಿ ಮನೆಯ ಹೊರಗೂ ದುಡಿಯಲು ಮಹಿಳೆ ತನ್ನ ಹೆಗಲನ್ನು ಕೊಡಲೇಬೇಕಾಗಿದೆ. ದಿ: 22-03-2008 ರಲ್ಲಿ ಪ್ರಜಾವಣಿ ದಿನಪತ್ರಿಕೆಯ ಭೂಮಿಕಾ ಪುರವಣಿಯಲ್ಲಿ ಪ್ರಕಟವಾದ "ಉದ್ಯೋಗ ಆಯ್ಕೆಯಲ್ಲ ಅವಶ್ಯಕತೆ" ಎಂಬ ಲೇಖನದಲ್ಲಿ– "ಮಹಿಳೆಗೆ ಉದ್ಯೋಗ ಎಂಬುದು ಆಯ್ಕೆಯಾಗಿ ಬರುತ್ತಿಲ್ಲ, ಅವಶ್ಯಕತೆಯಾಗಿಯೇ ಮುಂದುವರೆದಿದೆ. ಆರ್ಥಿಕ ಅವಶ್ಯಕತೆಯೇ ಮಹಿಳೆಗೆ ಉದ್ಯೋಗ ಮಾಡಲು ಪ್ರೇರೇಪಣೆ ನೀಡುವುದು ಮತ್ತು ಆವಾಗಲೇ ಕುಟುಂಬದ ಸದಸ್ಯರು ಸಹಮತ ನೀಡುವುದು" ಎಂಬ ಅಂಶ ಇದಕ್ಕೆ ಪುಷ್ಠಿ ಕೊಡುತ್ತದೆ.

ಅರೆ ಬರೆ ಶಿಕ್ಷಣ ಪೂರೈಸಿ ಸಿಕ್ಕ ಉದ್ಯೋಗವನ್ನು ಮಾಡುವ ಬಹುತೇಕ ಮಹಿಳೆಯರನ್ನು ನಗರಗಳಲ್ಲಿ ನಾವು ಕಂಡರೆ,ಅನಕ್ಷರತೆಯೇ ನಮ್ಮ ಜನ್ಮ ಸಿದ್ದ ಹಕ್ಕು, ಎಂದು ಸ್ವಯಂ ಘೋಷಿಸಿಕೊಂಡು (ಆಧಾರ ಸಮಿಕ್ಷಾ ವರದಿ–ಅದ್ಯಾಯ 4 ಕೊಷ್ಟಕ:1.2&4.2) ಗಂಡಿಗೊಂದು ಕೂಲಿ ಹೆಣ್ಣಿಗೊಂದು ಕೂಲಿ ನೀಡುವ ಕೃಷಿಯಲ್ಲಿ ಕಾರ್ಮಿಕರಾಗಿ ದುಡಿಯುವವರನ್ನು ನಾವು ಗ್ರಾಮೀಣ ಭಾಗದಲ್ಲಿ ಕಾಣುತ್ತೇವೆ. ಹೀಗೆ ಕುಟುಂಬ ನಿರ್ವಹಣೆಗಾಗಿ ಬಿಸಿಲಲ್ಲೂ–ಮಳೆಯಲ್ಲೂ, ಆರೋಗ್ಯದಲ್ಲೂ–ಅನಾರೋಗ್ಯದಲ್ಲೂ, ಬೇಕು–ಬೇಡಗಳ ಮಾನಸಿಕ ತೊಳಲಾಟಗಳ ಮೀರಿ, ಸಮಾಜದ ಮುಖ್ಯವಾಹಿನಿಯಲ್ಲಿ ನೆಮ್ಮದಿಯ ಜೀವನಕ್ಕಾಗಿ ಹುಡುಕಾಟ ನಡೆಸಿದ ಕೃಷಿ ಕಾರ್ಮಿಕ ಮಹಿಳೆಯ ಸಾಮಾಜಿಕ, ಆರ್ಥಿಕ ಜೀವನ ಸಾಕಷ್ಟು ಏಳು ಬೀಳುಗಳನ್ನು ಹೊಂದಿದೆ.

ಬಾಲ್ಯವಿವಾಹ ವರದಕ್ಷಿಣೆಯಂತಹ ಸಾಮಾಜಿಕ ಪಿಡುಗುಗಳನ್ನು ಮೆಟ್ಟಿ ನಿಲ್ಲಲು ಸರಕಾರವೇ ಕಂಕಣ ಕಟ್ಟಿರಬೇಕಾದರೆ, ಕದ್ದಾದರೂ ಸರಿ, ಮೂಢರಾಗಿಯಾದರೂ ಸರಿ, ಇಂದಿಗೂ ಕೃಷಿ ಕಾರ್ಮಿಕ ಮಹಿಳೆಯರ ಕುಟುಂಬಗಳಲ್ಲಿ ಇಂಥ ಆಚರಣೆಗಳು ನಡೆಯುತ್ತಿದೆ. 18 ವಯಸ್ಸಿಗೂ ಮೊದಲು, ಮದುವೆ ಮಾಡುವ ಅದಕ್ಕೆ ಮೇಲೆ ವರದಕ್ಷಿಣೆಯ ಹಾರ ಹಾಕುವ ಸಲ್ಲದ ರೂಢಿಗಳು ಇಂದಿಗೂ ಚಾಲ್ತಿಯಲ್ಲಿದೆ. ಇವೆಲ್ಲ ಬದಲಾಗದ ಹೊರತು, ಕೃಷಿ ಮಹಿಳೆಯ ಸಾಮಾಜಿಕ ಜೀವನ ಉನ್ನತಕ್ಕೇರುವುದು ಕನಸಿನ ಮಾತು.

ದುಡಿಯುವ ಮಹಿಳೆ:ಕೃಷಿ ಕಾರ್ಮಿಕ ಮಹಿಳೆ, ಒಂದು ಸಮಾಜೋ–ಆರ್ಥಿಕ ಅಧ್ಯಯನ, ಈ ಅಧ್ಯಯನದಲ್ಲಿ ಅಥಣಿ ತಾಲೂಕಿನ ಗ್ರಾಮೀಣ ಭಾಗದ ಕೃಷಿ ಕಾರ್ಮಿಕ ಮಹಿಳೆಯ ಸಾಮಾಜಿಕ, ಆರ್ಥಿಕ, ಆರೋಗ್ಯ, ಶೈಕ್ಷಣಿಕ ಸ್ಥಿತಿ–ಗತಿ, ಕುಟುಂಬದ ಆರ್ಥಿಕ ನಿರ್ವಹಣೆಯಲ್ಲಿ ಕೃಷಿ ಕಾರ್ಮಿಕ ಮಹಿಳೆಯ ಪಾಲು ಮತ್ತು ಕೃಷಿಯಲ್ಲಿ ಮಹಿಳೆಯ ಕೊಡುಗೆ ಇವುಗಳ ಕುರಿತು ಸಮೀಕ್ಷೆಯ ಮೂಲಕ ಕಂಡುಕೊಂಡ ಅಂಶಗಳನ್ನು ಚರ್ಚಿಸಲಾಗಿದೆ.

ಕಂಡು ಕೊಂಡ ಅಂಶಗಳು

1.1 ವಯಸ್ಸಿನ ಪ್ರಮಾಣ :

ದುಡಿತ ಎನ್ನುವುದು 18 ರಿಂದ ಪ್ರಾರಂಭವಾಗಿ 40–45 ವರ್ಷದವರೆಗೆ ಆರೋಗ್ಯಕರವಾಗಿದ್ದು ಉತ್ತಮ ಆದಾಯವನ್ನು ನೀಡುತ್ತದೆ. ಆ ದಿಶೆಯಲ್ಲಿ 35 ರಿಂದ 45 ವಯಸ್ಸಿನವರೆಗಿನ 32.5% ರಷ್ಟು ಮಹಿಳೆಯರು ಗರಿಷ್ಟ ಪ್ರಮಾಣದವರು ದುಡಿಮೆಯಲ್ಲಿ ತೊಡಗಿರುವುದು ಕಂಡುಬರುತ್ತದೆ ಆದರೂ

ಸಹ 2.5% ರಷ್ಟು ಮಹಿಳೆಯರು ತಮ್ಮ ಇಳಿ ವಯಸ್ಸಿನಲ್ಲಿ ಅಂದರೆ 50 ಕ್ಕಿಂತ ಮೇಲ್ಪಟ್ಟರೂ ದುಡಿಯುವುದು ಕಂಡುಬರುತ್ತದೆ.

1.2 ಶೈಕ್ಷಣಿಕ ಮಟ್ಟ :

ಸಾಕ್ಷರತೆ ಸರ್ವ ಸಮಸ್ಯೆಗಳಿಗೂ ಮದ್ದು ಎಂಬ ಸ್ಥಿತಿಯಲ್ಲಿ 90% ರಷ್ಟು ಮಹಿಳೆಯರು ಅನಕ್ಷರಸ್ಥರಾಗಿದ್ದು ಕೇವಲ 10% ರಷ್ಟು ಮಹಿಳೆಯರು ಸಾಕ್ಷರರಾಗಿರುವುದು ಕಂಡು ಬರುತ್ತದೆ.

1.3 ಕುಟುಂಬದ ಪ್ರಕಾರ

ಅವಿಭಕ್ತ ಕುಟುಂಬಗಳು, ಮಕ್ಕಳು ಮತ್ತು ವೃದ್ಧರಿಗೆ ಅಂದರೆ ಆದಾಯ ರಹಿತರಿಗೆ ಸುರಕ್ಷಿತ ಆಸರೆಯನ್ನು ಒದಗಿಸುತ್ತವೆ. ಆದರೆ ಇಲ್ಲಿ 80% ರಷ್ಟು ಮಹಿಳೆಯರು ವಿಭಕ್ತ ಕುಟುಂಬಗಳನ್ನೇ ಹೊಂದಿದ್ದು 20% ರಷ್ಟು ಮಾತ್ರ ಅವಿಭಕ್ತ ಕುಟುಂಬಗಳಲ್ಲಿರುವುದು ಕಂಡು ಬರುತ್ತದೆ. ಇದರಿಂದಾಗಿ ಗಂಡ ಹೆಂಡಿರು ಕೆಲಸಕ್ಕೆ ಹೋದರೆ ಮನೆಯಲ್ಲಿ ಮಕ್ಕಳು ಮತ್ತು ವಯೋವೃದ್ಧರಿಗೆ ಆಸರೆಯೇ ಇಲ್ಲವೆನಿಸುತ್ತದೆ.

2.1 ಹೆಣ್ಣು ಮಕ್ಕಳ ಮದುವೆಯ ವಯಸ್ಸು

ಗಂಡಿಗೆ 21 ಹೆಣ್ಣಿಗೆ 18 ವಯಸ್ಸು ಎಂದು ಕಾನೂನೇ ಇರುವಾಗ ಆ ಯಾವ ವಿಚಾರಗಳನ್ನು ಮನ್ನಿಸದೇ 60% ರಷ್ಟು ಕುಟುಂಬಗಳಲ್ಲಿ ಇಂದಿಗೂ 18 ವಯಸ್ಸಿಗಿಂತ ಮೊದಲೇ ಅದೂ 12, 13, 14, 15 ಈ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡುವುದು ಕಂಡು ಬರುವುದು ಅದರಲ್ಲೂ ನೀರಾವರಿ ಬೇಸಾಯದ ಭಾಗದಲ್ಲಿ 65% ರಷ್ಟು ಇರುವುದು ಕಂಡುಬರುವುದು.

2.2 ವರದಕ್ಷಿಣೆ ಪದ್ಧತಿಯ ಆಚರಣೆ

ವರದಕ್ಷಿಣೆ ಕೊಡುವ ತೆಗೆದುಕೊಳ್ಳುವ ವಿರೋಧ ಕಾನೂನು ಜಾರಿಯಲ್ಲಿದ್ದರೂ ಸಹ ಬಡತನದ ಜೀವನದಲ್ಲೂ 50% ರಷ್ಟು ಕುಟುಂಬಗಳಲ್ಲಿ ವರದಕ್ಷಿಣೆ ಕೊಡುವ ಮತ್ತು ತೆಗೆದುಕೊಳ್ಳುವದು ಕಂಡುಬರುತದೆ. ಅದು ನೀರಾವರಿ ಬೇಸಾಯ ವಿರುವ ಪ್ರದೇಶಗಳಲ್ಲಿ 55% ರಷ್ಟು ಇದ್ದು ಹೆಚ್ಚಿಗೆ ಇರುವುದು ಕಂಡು ಬರುತ್ತದೆ.

2.3 ಪುರುಷ ಕಾರ್ಮಿಕರಿಂದ ತೊಂದರೆ

ಮಹಿಳಾ ಕೃಷಿ ಕಾರ್ಮಿಕರು ಮಾಡುವಂತಹ ಕೆಲಸಗಳು 100ಕ್ಕೆ 100ರಷ್ಟು ಮಹಿಳೆಯರ ಗುಂಪಿನ ಜೊತೆಗೇ ಇರುವುದರಿಂದ ಮತ್ತು ಗ್ರಾಮೀಣ ಭಾಗದಲ್ಲಿ ಅತ್ಯಂತ ಆತ್ಮೀಯ ಸಂಬಂದಗಳಿರುವುದರಿಂದ ಪುರುಷ ಕಾರ್ಮಿಕರಿಂದ ಯಾವುದೇ ರೀತಿಯ ತೊಂದರೆಗಳಾಗುವುದು ಕಂಡುಬರುವುದಿಲ್ಲ.

2.4 ಹೊಲದ ಮಾಲೀಕರಿಂದ ತೊಂದರೆ

ಮಹಿಳೆ ಕೂಲಿಯನ್ನೇ ಮುಖ್ಯ ಉದ್ಯೋಗ ಮಾಡಿಕೊಂಡು ತನ್ನ ಕುಟುಂಬದ ಬಡತನ ಕಳೆಯಲು ಕೆಲಸ ಮಾಡುತ್ತಿದ್ದರೆ ಮಹಿಳೆ ಎಂಬ ಕಾರಣಕ್ಕೆ ಹೆಚ್ಚು ಹೆಚ್ಚು ಕೆಲಸ ಹಚ್ಚುವುದು 30% ರಷ್ಟು ಕಂಡು ಬರುತ್ತದೆ ಕೆಲಸ ಮಾಡಿಲೊಂಡು ಹೆಚ್ಚು ಕೆಲಸ ನೀಡುವುದರ ಜೊತೆಗೆ ದುಡಿದ ಕೂಲಿಯನ್ನು ನೀಡಲೂ ಸಹ ಸತಾಯಿಸುವುವಂತಹದು 17.5% ರಷ್ಟು ಕಂಡುಬರುತ್ತದೆ.

3.1. ವೃತ್ತಿಯ ಸ್ವರೂಪ

32.5% ರಷ್ಟು ಮಹಿಳೆಯರು ನೇರವಾಗಿ ಬೇರೆಯವರ ಜಮೀನುಗಳಲ್ಲಿ ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದು ಕೂಲಿಯನ್ನು ಪಡೆಯುತ್ತಿದ್ದಾರೆ.ಅದರ ಜೊತೆಗೆ ಅಷ್ಟೇ ಪ್ರಮಾಣದಲ್ಲಿ ಯಾವುದೇ ಆದಾಯ ಅಥವಾ ಕೂಲಿಯನ್ನ ಪಡೆಯದೆಯೇ ತಮ್ಮದೇ ಹೊಲದಲ್ಲಿ ಕೆಲಸ,ಹೈನುಗಾರಿಕೆ,ಆಡು ಸಾಕಾಣಿಕೆಯಂತಹ ವಿವಿಧ ಕಸಬುಗಳಲ್ಲಿ ತೊಡಗಿಸಿಕೊಂಡಿರುವುದು ಕಂಡು ಬರುತ್ತದೆ.

3.2. ವಿಶ್ಲೇಷಣೆ

ಮಹಿಳೆಯರು ಕೃಷಿಯಲ್ಲಿ ಗಣನೀಯ ಪ್ರಮಾಣದಲ್ಲಿ ತಮ್ಮನ್ನ ತೊಡಗಿಸಿಕೊಂಡಿದ್ದು ಕೃಷಿಗೆ ಆಧಾರ ಸ್ಥಂಭವಾಗಿದ್ದಾರೆ. ಅಂಥ ಮಹಿಳೆ ಯಾವ ರೀತಿಯ ಕೆಲಸ ಮಾಡುತ್ತಾಳೆ ಎಂಬ ಬಗ್ಗೆ ಚರ್ಚಿಸಿದಾಗ ಮಹಿಳೆಗೆ ಯಾವುದೇ ಯಾವುದೇ ರೀತಿಯ ನೇಗಿಲು ಹಿಡಿಯುವ,ಬಂಡಿ ಹೂಡುವ,ಮಶೀನ್ ನಡೆಸುವ ಕೆಲಸ ನೀಡದೇ ಪ್ರಮುಖವಾಗಿ ಎಲ್ಲ ಭಾಗದಲ್ಲೂ ಕಸ ತೆಗೆಯುವ ಕೆಲಸಕ್ಕೆ ಮಹಿಳೆಯರನ್ನು 100 ಕ್ಕೆ 100 ರಷ್ಟು ಬಳಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಹಾಗೆಯೇ ಬೀಜ ಬಿತ್ತುವ ಪ್ರಮುಖ ಚಟುವಟಿಕೆಯ ಜೊತೆಗೆ ಎಲ್ಲ ಬೆಳೆಗಳ ಪರಿಷ್ಕರಣೆ ಮಾಡುವ ಕೆಲಸವನ್ನು ಮಹಿಳೆ ಮಾಡುವುದು ಕಂಡುಬರುತ್ತದೆ. ಈ ಎಲ್ಲ ಕೆಲಸಗಳನ್ನು ನೋಡಿದಾಗ 60% ರಿಂದ 80% ಭಾಗದಷ್ಟು ಕೃಷಿಯು ಮಹಿಳೆಯ ಮೇಲೆ ಆವಲಂಬಿತವಾಗಿರುವುದು ಕಂಡುಬರುತ್ತದೆ.

3.3 ಕೃಷಿ ಕಾರ್ಮಿಕ ಮಹಿಳೆಯು ದಿನವೊಂದಕ್ಕೆ ಹೊಲದಲ್ಲಿ ದುಡಿಯುವ ಸಮಯ.

ಪ್ರತಿದಿನ 8 ತಾಸುಗಳವರೆಗೆ 17.5% ರಷ್ಟು ಮಹಿಳೆಯರು ನೀರಾವರಿ ಪ್ರದೇಶದಲ್ಲಿ ದುಡಿಯುವುದನ್ನು ಮತ್ತು ಮಳೆಯಾಶ್ರಿತ ಬೇಸಾಯದಲ್ಲಿ 8 ತಾಸುಗಳವರೆಗೆ ಒಬ್ಬ ಮಹಿಳೆಯೂ ಕೆಲಸ ಮಾಡದೇ ಇರುವದು ಕಂಡುಬರುತ್ತದೆ. ನೀರಾವರಿ ಭಾಗದಲ್ಲಿ ಸತತ ಕೆಲಸ ಕಾರ್ಯಗಳು ಇರುವುದು ಮತ್ತು ಅಲ್ಲಿ ಕೂಲಿಯ ಪ್ರಮಾಣ ಹೆಚ್ಚಿರುವುದರಿಂದ ಮಹಿಳೆಯರು 8 ತಾಸು ದುಡಿಯುತ್ತಾರೆ. ಆದರೆ ಮಳೆಯಾಶ್ರಿತ ಪ್ರದೇಶಗಳಲ್ಲಿ ಕೆಲಸ ಕಡಿಮೆ ಮತ್ತು ಬಿಸಿಲು ಹೆಚ್ಚಿರುವುದರಿಂದ ದುಡಿಯುವುದು ತುಂಬಾ ಆಯಾಸಕರವಾಗಿರುತ್ತದೆ. ಆದ್ದರಿಂದ 85% ರಷ್ಟು ಮಹಿಳೆಯರು ದಿನದಲ್ಲಿ 6 ತಾಸು ಮಾತ್ರ ದುಡಿಯುವುದು ಕಂಡುಬರುತ್ತದೆ.

3.4 ಕೃಷಿ ಕಾರ್ಮಿಕ ಮಹಿಳೆಯು ದಿನವೊಂದಕ್ಕೆ ಮನೆಯಲ್ಲಿ ದುಡಿಯುವ ಸಮಯ.

ಹೊಲಗಳಲ್ಲಿ 6 ರಿಂದ 8 ತಾಸುಗಳವರೆಗೆ ದುಡಿಯವ ಮಹಿಳೆಯರಲ್ಲಿ 80% ರಷ್ಟು ಮಹಿಳೆಯರು ಮನೆಯಲ್ಲಿಯೂ ಕೂಡ ೮ ತಾಸು ಗಳವರೆಗೆ ದುಡಿಯುವದು ಕಂಡು ಬರುತ್ತದೆ.

3.5 ಕೃಷಿ ಕಾರ್ಮಿಕ ಮಹಿಳೆಯು ಕೃಷಿ, ಕೃಷಿ ಕಾರ್ಮಿಕ ಮತ್ತು ಕೃಷಿ ಆಧಾರಿತ ಉಪಕಸಬುಗಳಲ್ಲಿ ಪಡೆಯುವ ಪ್ರತಿ ದಿನದ ಕೂಲಿ/ಆದಾಯ

32.5% ರಷ್ಟು ಮಹಿಳೆಯರು ಕೃಷಿ ಕಾರ್ಮಿಕರಾಗಿಯೇ ಕೆಲಸ ಮಾಡುತ್ತಿದ್ದು (ಉಲ್ಲೇಖ: ಕೋಷ್ಟಕ 3.1) ಅವರು ಸಾಮಾನ್ಯವಾಗಿ ಯಾವುದೇ ಉಪಕಸಬುಗಳನ್ನು ಮತ್ತು ತಮ್ಮದೇ ಜಮೀನುಗಳನ್ನು ಹೊಂದಿಲ್ಲ ಮತ್ತು ಇಂಥ ಮಹಿಳೆಯರು ಹೆಚ್ಚಾಗಿ ಮಳೆಯಾಶ್ರಿತ

ಪ್ರದೇಶದಲ್ಲಿ ಕಂಡುಬರುವುದರಿಂದ ಇಲ್ಲಿ ರೂ 30 ರಿಂದ ರೂ 60 ರವರೆಗೆ ಕೂಲಿ ಪಡೆಯುವ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿ ಇರುವುದು ಕಂಡುಬರುತ್ತದೆ.ಆದರೆ ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರಿಗೆ ಕೆಲಸದ ಅವಕಾಶಗಳು ಹೆಚ್ಚಿದ್ದು ಕಾರ್ಮಿಕರ ಲಭ್ಯತೆಯ ಸಮಸ್ಯೆ ಇರುವುದರಿಂದ 60% ರಷ್ಟು ಮಹಿಳೆಯರು ರೂ 60 ರಿಂದ ರೂ 90 ರವರೆಗೆ ಪಡೆಯುತ್ತಾರೆ.

3.6 ವಾರವೊಂದಕ್ಕೆ ಮಹಿಳೆಯರಿಗೆ ದೊರೆಯುವ ಕೆಲಸದ ದಿನಗಳ ಸಂಖ್ಯೆ

ನೀರಾವರಿ ಪ್ರದೇಶದಲ್ಲಿ ಸತತ ಫಸಲು ಇರುವುದರಿಂದ 55% ರಷ್ಟು ಮಹಿಳೆಯರಿಗೆ ವಾರದ ಏಳೂ ದಿನಗಳಲ್ಲಿ ಕೆಲಸ ದೊರೆಯುತ್ತದೆ.ಆದರೆ ಮಳೆಯಾಶ್ರಿತ ಪ್ರದೇಶದಲ್ಲಿ ಕೆಲಸ ಕಡಿಮೆ ಇರುವುದರಿಂದ ವರ್ಷದ ಆರು ತಿಂಗಳ ಮಳೆಗಾಲದಲ್ಲಿ ಮಾತ್ರ ಕೆಲಸ ದೊರೆಯುತ್ತದೆ. ಹಾಗಾಗಿ 50% ರಷ್ಟು ಮಹಿಳೆಯರು ವಾರದಲ್ಲಿ 5 ದಿನ ಮಾತ್ರ ಕೆಲಸ ಪಡೆಯುತ್ತಾರೆ.

3.7 ಕೃಷಿ ಕಾರ್ಮಿಕ ಮಹಿಳೆಯರು ದುಡಿದ ಹಣದ ಯಜಮಾನಿಕೆ.

ಮಹಿಳೆ ತಾನು ದುಡಿದ ಹಣದ ಯಜಮಾನಿಕೆಯನ್ನು ತಾನೇ ಮಾಡುವುದಾದರೆ ನಿಜಕ್ಕೂ ಅದಕ್ಕೊಂದು ನೈತಿಕತೆ ಇರುತ್ತದೆ. ಆದರೆ 35% ರಷ್ಟು ಮಹಿಳೆಯರು ದುಡಿದ ಹಣವನ್ನು ಅವರ ಗಂಡಂದಿರೇ ಮಾಡುವುದು ಕಂಡುಬರುತ್ತದೆ. ಹಾಗೆಯೇ 47.5% ರಷ್ಟು ಮಹಿಳೆಯರು ತಾವು ದುಡಿದ ಹಣದ ಯಜಮಾನಿಕೆ ತಾವೇ ಮಾಡುತ್ತಿರುವುದು ಕಂಡು ಬರುತ್ತದೆ.

3.8 ಕೃಷಿ ಕಾರ್ಮಿಕ ಮಹಿಳೆಯರು ದುಡಿದ ಹಣದ ಯಜಮಾನಿಕೆಯನ್ನು ಕುಟುಂಬದ ಇತರೇ ಸದಸ್ಯರು ಮಾಡಲು ಕಾರಣಗಳು.

30% ಕುಟುಂಬಗಳಲ್ಲಿ ಮನೆಯ ಯಜಮಾನಿಕೆಯನ್ನು ಮಹಿಳೆಯರ ಗಂಡಂದಿರೇ ಮಾಡುವುದರಿಂದ ಸಂತೆ-ಪೇಟೆ ಮಾಡುವ ನೆಪದಲ್ಲಿ ಮಹಿಳೆ ದುಡಿದ ಎಲ್ಲ ಹಣದ ಯಜಮಾನಿಕೆಯನ್ನು ಗಂಡಂದಿರೇ ಮಾಡುವುದು ಕಂಡು ಬರುತ್ತದೆ.

3.9 ವೇತನದಲ್ಲಿ ತಾರತಮ್ಯ

ಕೃಷಿಯ 80% ರಿಂದ 90% ರಷ್ಟು ಭಾಗ ಕೆಲಸವನ್ನು ಮಹಿಳೆಯೇ ಮಾಡುತ್ತಾಳಾದರೂ ಸಹ ಅವಳು ಪಡೆಯುವ ಕೂಲಿ ಪುರುಷರಿಗಿಂತ ಕಡಿಮೆಯೇ. ಕಾರ್ಮಿಕರ ಲಭ್ಯತೆಯ ಸಮಸ್ಯೆಯಿಂದಾಗಿ ನೀರಾವರಿ ಬೇಸಾಯದಲ್ಲಿ 5% ರಷ್ಟು ಮಹಿಳೆಯರು ಪುರುಷರಿಗಿಂತ ಹೆಚ್ಚಿಗೆ ಕೂಲಿ ಪಡೆಯುತ್ತಿದ್ದು,ಮಳೆಯಾಶ್ರಿತ ಬೇಸಾಯದಲ್ಲಿ 100% ಕ್ಕೆ 100% ರಷ್ಟು ಕಡಿಮೆ ವೇತನವನ್ನು ಮಹಿಳೆ ಪಡೆಯುತ್ತಿದ್ದಾಳೆ.

3.10 ಮಹಿಳೆಯರಿಗೆ ಮತ್ತು ಪುರುಷರಿಗೆ ದೊರೆಯುವ ಕೂಲಿಯ ಅನುಪಾತ.

9 ನೀರಾವರಿ ಮತ್ತು 10 ನೀರಾವರಿ ಗ್ರಾಮಗಳಲ್ಲಿ ಪುರುಷ ಮತ್ತು ಮಹಿಳೆಯರ ವೇತನದ ನಡುವೆ ರೂ 20 ರಿಂದ ರೂ 40 ರವರೆಗೆ ವ್ಯತ್ಯಾಸವಿರುವದು ಕಂಡುಬರುತ್ತದೆ.ಆದರೆ ಮಹಿಷವಾಡಗಿ ಗ್ರಾಮದಲ್ಲಿ ಪುರುಷ ಕಾರ್ಮಿಕರಿಗಿಂತ ಮಹಿಳಾ ಕಾರ್ಮಿಕರಿಗೆ ರೂ 20 ರಿಂದ ರೂ 40 ರವರೆಗೆ ಹೆಚ್ಚಿರುವುದು ಕಂಡುಬರುತ್ತದೆ.ಇದಕ್ಕೆ ಕಾರಣವನ್ನು ಗ್ರಾಮದ ಹಿರಿಯರೊಂದಿಗೆ ಮತ್ತು

ಕೃಷಿ ಇಲಾಖೆಯವರೊಂದಿಗೆ ಚರ್ಚಿಸಿದಾಗ ಗ್ರಾಮದಲ್ಲಿ ಕಾರ್ಮಿಕರ ಲಭ್ಯತೆಯ ಕೊರತೆ ಇದ್ದು,ಕಸ ತೆಗೆಯುವಂತಹ ಕೆಲಸವನ್ನು ಮಹಿಳೆಯರಷ್ಟು ಚೆನ್ನಾಗಿ ಮತ್ತು ತೀವ್ರವಾಗಿ ಪುರುಷ ಕಾರ್ಮಿಕರಿಗೆ ತೆಗೆಯಲು ಸಾಧ್ಯವಾಗುವುದಿಲ್ಲ.ಅದಕ್ಕಾಗಿ ಸಿಕ್ಕಂತಹ ಮಹಿಳೆಯರಿಗೇನೇ ಹೆಚ್ಚು ಕೂಲಿ ಕೊಟ್ಟು ಕೆಲಸ ಮಾಡಿಸಿಕೊಳ್ಳುವುದು ಕಂಡುಬರುತ್ತದೆ, ಎಂಬ ವಿವರಣೆ ನೀಡಿದರು.

3.11 ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭಾಗವಹಿಸಿದ ಮಹಿಳೆಯರ ಪ್ರಮಾಣ

ವೇತನದಲ್ಲಿಯ ತಾರತಮ್ಯ ಹೋಗಲಾಡಿಸಲು ಸರಕಾರವು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ತಂದು ಪುರುಷರ ಸಮಾನವಾಗಿ ವೇತನ ನೀಡುತ್ತಿದ್ದರೂ ಸಹ ಅಥಣಿ ತಾಲ್ಲೂಕಿನಲ್ಲಿ 65% ರಷ್ಟು ಮಹಿಳೆಯರು ಯೋಜನೆಯ ಪ್ರಯೋಜನ ಪಡೆದಿರುವುದು ಕಂಡುಬರುತ್ತಿದೆ.

3.12 ಬ್ಯಾಂಕ್ ಖಾತೆ ಹೊಂದಿದ ಕೃಷಿ ಕಾರ್ಮಿಕ ಮಹಿಳೆಯರ ಪ್ರಮಾಣ.

ಒಟ್ಟು 72.5% ರಷ್ಟು ಮಹಿಳೆಯರು ತಾವೇ ಖುದ್ದಾಗಿ ದುಡಿಯುತ್ತಿದ್ದರೂ ಸಹ ಹಣದ ವ್ಯವಹಾರಕ್ಕೆ ತಮ್ಮದೇ ಆದ ಬ್ಯಾಂಕ್ ಖಾತೆ ಹೊಂದದೇ ಇರುವುದು ಕಂಡುಬರುತ್ತದೆ.

3.13 ಸ್ವ ಸಹಾಯ ಸದಸ್ಯತ್ವದ ಪ್ರಮಾಣ

ಮಹಿಳೆಯರಲ್ಲಿ ಉಳಿತಾಯ ಮನೋಭಾವ.ಸಾಮಾಜಿಕ ಕಳಕಳಿ,ಸಾಮುದಾಯಿಕ ಭಾವನೆ ಬೆಳೆಸುವ ನಿಟ್ಟಿನಲ್ಲಿ ಪ್ರಾರಂಭವಾದ ಸ್ವ ಸಹಾಯ ಸಂಘಗಳು ಸಾಕಷ್ಟು ಪ್ರಚಾರ ಪಡೆದಿದ್ದರೂ ಸಹ 52.5% ರಷ್ಟು ಮಹಿಳೆಯರು ಸ್ವ ಸಹಾಯ ಸಂಘದಲ್ಲಿ ಸದಸ್ಯರಾಗದಿರುವುದು ಕಂಡುಬರುತ್ತದೆ.

4.1 ಕುಟುಂಬದ ಸದಸ್ಯರ ಗರಿಷ್ಠ ಶೈಕ್ಷಣಿಕ ಮಟ್ಟ

ಸರಕಾರದಿಂದ ಕಡ್ಡಾಯ ಶಿಕ್ಷಣ,ಶೈಕ್ಷಣಿಕ ಸೌಲಭ್ಯಗಳು ಸಾಕಷ್ಟು ಇದ್ದರೂ ಸಹ ಕೃಷಿ ಕಾರ್ಮಿಕ ಮಹಿಳೆಯ ಕುಟುಂಬದಲ್ಲಿ 27.5% ರಷ್ಟು ಸದಸ್ಯರು ಅನಕ್ಷರಸ್ಥರಾಗಿರುವುದು ಕಂಡುಬರುತ್ತದೆ.

4.2 ಕುಟುಂಬದ ಸಾಕ್ಷರತಾ ಶಿಕ್ಷಣ

ಮಹಿಳೆಯರಿಗೆ ಶಿಕ್ಷಣ ಕೊಡಿಸಿ, ತನ್ನ ದಿನನಿತ್ಯದ ವ್ಯವಹಾರಗಳನ್ನು ಮಹಿಳೆಯು ತಾನೇ ನೋಡಿಕೊಳ್ಳಲು ಸರಕಾರದಿಂದ ಈ ಕಾರ್ಯಕ್ರಮ ಇದ್ದರೂ ಸಹ 87.5% ರಷ್ಟು ಮಹಿಳೆಯರು ಇದರ ಸದುಪಯೋಗ ಪಡೆದಿರುವುದಿಲ್ಲ.

4.3 ಕೃಷಿಗೆ ಕುರಿತಂತೆ ಮಹಿಳೆ ಪಡೆದುಕೊಂಡಿರುವ ತರಬೇತಿಗಳು

ಕೃಷಿಯು ಇಂದು ಅಭಿವೃದ್ಧಿ ಹೊಂದಿ ಹೆಚ್ಚು ವೈಜ್ಞಾನಿಕತೆಯನ್ನು ಅಳವಡಿಸಿಕೊಂಡಿರುವುದರಿಂದ ಮಹಿಳೆಯರು ಆ ನಿಟ್ಟಿನಲ್ಲಿ ಸಿದ್ಧರಾಗಬೇಕು.ಆದರೆ 70% ರಷ್ಟು ಮಹಿಳೆಯರು ಯಾವುದೇ ತರಬೇತಿ ಪಡೆದಿರುವದಿಲ್ಲ.

4.4 ವಿಶ್ಲೇಷಣೆ : ಸಮೀಕ್ಷೆ

ಶಿಕ್ಷಣದ ಅವಶ್ಯಕತೆಯ ಬಗ್ಗೆ ಪ್ರಶ್ನೆ ಕೇಳಿದಾಗ 99% ರಷ್ಟು ಮಹಿಳೆಯರು ಶಿಕ್ಷಣದ ಅವಶ್ಯಕತೆ ಇರುವ ಬಗ್ಗೆ ಮಾತನಾಡಿದ್ದು,1% ರಷ್ಟು ಮಹಿಳೆಯರು ಮಾತ್ರ ಯಾವುದೇ ವಿಷಯದ ಕುರಿತು ದೀರ್ಘ ಆಲೋಚನೆ ಇರದೆ ಇರುವುದರಿಂದ ಶಿಕ್ಷಣದ ಅವಶ್ಯಕತೆ ಇಲ್ಲ ಎಂದರು.

5.1 ಪೌಷ್ಠಿಕ ಆಹಾರ ದೊರೆಯುವ ಮಟ್ಟ

ತಾಲೂಕಿನಾದ್ಯಂತ 77.5% ರಷ್ಟು ಮಹಿಳೆಯರಿಗೆ ಉತ್ತಮ ಪೌಷ್ಠಿಕ ಆಹಾರ ದೊರೆಯತ್ತಿದ್ದು ಮಹಿಳೆಯರ ಆರೋಗ್ಯ ಸ್ಥಿತಿ ಚೆನ್ನಾಗಿರುವದು ಕಂಡುಬರುತ್ತದೆ.

5.2 ಕೃಷಿ ಕಾರ್ಮಿಕ ಮಹಿಳೆಯರು ಪಡೆಯುವ ವಿಶ್ರಾಂತಿಯ ಪ್ರಮಾಣ

ಮನೆಯ ಒಳಗೂ ಹೊರಗೂ ದುಡಿಯುವ ಮಹಿಳೆಯರಿಗೆ ಕೆಲಸದ ಮಧ್ಯ ಒಂದಿಷ್ಟು ವಿಶ್ರಾಂತಿ ಅವಶ್ಯವಾಗಿರುತ್ತದೆ. ಆದರೆ ಎಲ್ಲ ಮಹಿಳೆಯರಿಗೂ ಸಮಾನವಾದ ವಿಶ್ರಾಂತಿ ದೊರೆಯುವುದಿಲ್ಲ. 65% ರಷ್ಟು ಮಳೆಯಾಶ್ರಿತ ಬೇಸಾಯದಲ್ಲಿ ದುಡಿಯುವ ಮಹಿಳೆ ಕೆಲಸದ ಮಧ್ಯ 1 ತಾಸು ವಿಶ್ರಾಂತಿ ಪಡೆದರೆ 80% ರಷ್ಟು ನೀರಾವರಿ ಬೇಸಾಯದಲ್ಲಿ ದುಡಿಯುವ ಮಹಿಳೆಯರು 2 ತಾಸು ವಿಶ್ರಾಂತಿ ಪಡೆಯುವುದು ಕಂಡುಬರುತ್ತದೆ. ಇದು ಅವರ ಪ್ರದೇಶದಲ್ಲಿ ಕೆಲಸ ದೊರೆಯುವ ಮತ್ತು ಮಹಿಳೆಯರು ಕೆಲಸಕ್ಕೆ ಹೋಗುವಂತಹ ಸಮಯದ ಮೇಲೆ ಆವಲಂಬಿತವಾಗಿರುತ್ತದೆ. 12.5% ರಷ್ಟು ಮಹಿಳೆಯರಿಗೆ ಕೆಲಸದ ಮಧ್ಯ ವಿಶ್ರಾಂತಿಯೇ ದೊರೆಯದಿರುವುದು ಕಂಡುಬರುತ್ತದೆ. ಇಂಥವರು ತಮ್ಮದೇ ಆದಂತಹ ಭೂಮಿ ಹೊಂದಿದವರು ಇದ್ದು ಹೊರಗೆ ಕೂಲಿ ಮಾಡಿ ಬಂದು ತಮ್ಮದೇ ಹೊಲದಲ್ಲಿ ಮತ್ತೆ ಕೆಲಸ ಮಾಡುವಂತವರಾಗಿದ್ದಾರೆ.

5.3 ಕೃಷಿ ಕಾರ್ಮಿಕ ಮಹಿಳೆಯರಿಗೆ ಇರುವ ಕಾಯಿಲೆಗಳು

55% ಮಹಿಳೆಯರಿಗೆ ಯಾವುದೇ ರೀತಿಯ ಗಂಭೀರ ಕಾಯಿಲೆಗಳಿರುವುದು ಕಂಡು ಬರುವುದಿಲ್ಲ.(5.2 ರಲ್ಲಿ ಉಲ್ಲೇಖಿಸಿದಂತೆ ಪೌಷ್ಠಿಕ ಆಹಾರದ ದೊರೆಯುವಿಕೆಯೂ ಇದಕ್ಕೆ ಕಾರಣವಾಗಿರುವುದು ಕಂಡು ಬರುತ್ತದೆ) ಆದರೆ ಸತತ ಮಳೆ ಬಿಸಿಲಿನಲ್ಲಿ ದೇಹಕ್ಕೆ ಹೆಚ್ಚು ದಣಿವನ್ನುಂಟು ಮಾಡುವಂತಹ ಕೆಲಸಗಳಿರುವುದರಿಂದ 30% ರಷ್ಟು ಮಹಿಳೆಯರು ಅಶಕ್ತತೆಯಿಂದ ಬಳಲುತ್ತಿದ್ದಾರೆ.ಸಂದರ್ಶನದ ವೇಳೆಯಲ್ಲಿ ಚರ್ಚಿಸಿದಂತೆ ಕಸ ತೆಗೆಯವುದೇ ಮುಖ್ಯ ಕೆಲಸವಾದ್ದರಿಂದ ಸತತ ಕುಳಿತು ಮಾಡುವುದರಿಂದ ಮೊಳಕಾಲು ನೋವು ಎಲ್ಲ ಆರೋಗ್ಯ ವಂತರನ್ನೂ,ಅನಾರೋಗ್ಯವಂತರನ್ನೂ ಬಾಧಿಸುವುದು ಕಂಡು ಬರುತ್ತದೆ. ಹಾಗೆಯೇ ಸರಿಯಾದಂತಹ ಚಿಕಿತ್ಸೆ ಪಡೆಯದೇ ಇರುವುದರಿಂದ ಗರ್ಭಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳು 5% ಮಹಿಳೆಯರನ್ನು ಬಾಧಿಸುವುದು ಕಂಡು ಬರುತ್ತದೆ.

5.4 ಅನಾರೋಗ್ಯದಲ್ಲೂ ಕೆಲಸಕ್ಕೆ ಹೋಗುವ ಕೃಷಿ ಕಾರ್ಮಿಕ ಮಹಿಳೆಯರ ಪ್ರಮಾಣ.

55% ರಷ್ಟು ಮಹಿಳೆಯರು ಕಡಿಮೆ ಆದಾಯವಿರುವಂತಹ ಕಡೆಯಲ್ಲಿ ಅನಾರೋಗ್ಯದ ದಿನಗಳಲ್ಲಿಯೂ ಸಹ ಕೆಲಸಕ್ಕೆ ಹೋಗುವುದು ಕಂಡು ಬರುತ್ತದೆ.

5.5 ಅನಾರೋಗ್ಯದಲ್ಲೂ ಕೆಲಸಕ್ಕೆ ಹೋಗಲು ಕಾರಣಗಳು.

52.5% ರಷ್ಟು ಮಹಿಳೆಯರು ಅನಾರೋಗ್ಯದಿಂದ ಕೆಲಸ ಬಿಟ್ಟರೆ ಮನೆಯು ನಡೆಯುವುದಿಲ್ಲವೆಂಬ ಕಾರಣಕ್ಕೆ ಮತ್ತು 2.5% ರಷ್ಟು ಅಲ್ಪ ಸ್ವಲ್ಪ ಭೂಮಿ ಇರುವಂತವರು ಅನಾರೋಗ್ಯದಿಂದಾಗಿ ಕೆಲಸ ಬಿಟ್ಟರೆ ತಮ್ಮ ಫಸಲಿಗೆ ತೊಂದರೆಯಾಗಬಾರದೆಂಬ ತುಡಿತದಿಂದ ಕೆಲಸಕ್ಕೆ ಹೋಗುವುದು ಕಂಡುಬರುತ್ತದೆ.

ನೀರಾವರಿ ಭಾಗದಲ್ಲಿ 60% ರಷ್ಟು ಮಹಿಳೆಯರು ಕುಟುಂಬ ನಿರ್ವಹಣೆ ಸಾಧ್ಯವಿಲ್ಲವೆಂಬ ಕಾರಣಕ್ಕೆ ಕೆಲಸಕ್ಕೆ ಹೋಗುವುದು ಕಂಡುಬರುತ್ತದೆ. ಹೆಚ್ಚು ಕೂಲಿ ಮತ್ತು ಕೆಲಸದ ಅವಕಾಶಗಳು ಹೆಚ್ಚಿರುವ ಪ್ರದೇಶದಲ್ಲಿಯೇ ವಿಶ್ರಾಂತಿಯ ಬದಲು ಕೆಲಸ ಯಾಕೆ ಮಾಡುತ್ತೀರೆಂದು ಚರ್ಚಿಸಿದಾಗ ಗಂಡಂದಿರು ಕೆಲಸಮಾಡುವುದು ಕಡಿಮೆಯೇ.ಮಾಡಿದರೂ ಸಹಿತ ಮನೆಗೆ ಕೊಡದೇ ಮದ್ಯಪಾನ ಮಾಡಿ ಹಾಳು ಮಾಡುತ್ತಾರೆ. ಇದರಿಂದಾಗಿ ಕುಟುಂಬ ನಿರ್ವಹಣೆಗೆ ತೊಂದರೆಯಾಗಿ ಮಹಿಳೆಯರು ಅನಾರೋಗ್ಯದಲ್ಲೂ ಸಹ ಕೆಲಸಕ್ಕೆ ಹೋಗಬೇಕಾಗುತ್ತದೆ.

5.6 ಕೃಷಿ ಕಾರ್ಮಿಕ ಮಹಿಳೆಯರ ಪತಿಗೆ ಇರುವ ದುರಭ್ಯಾಸಗಳು.

32.5% ರಷ್ಟು ಮಹಿಳೆಯರ ಗಂಡಂದಿರು ಮದ್ಯಪಾನ ಮಾಡುವ ಮತ್ತು ತಂಬಾಕು ತಿನ್ನುವ ಅತಿಯಾದ ಚಟಕ್ಕೆ ಬಿದ್ದಿರುವುದು ಮತ್ತು 2.5% ರಷ್ಟು ಮಹಿಳೆಯರ ಗಂಡಂದಿರು ಮದ್ಯಪಾನವನ್ನು ಮಾತ್ರ ಮಾಡುವುದು ಕಂಡುಬರುತ್ತದೆ.

ಇದರಿಂದಾಗಿ ಇಂಥ ಮಹಿಳೆಯರಿಗೆ ಕುಟುಂಬದ ಜವಾಬ್ದಾರಿ ಅಧಿಕಗೊಂಡು ಅತಿಯಾದ ಕೆಲಸ, ಮಾನಸಿಕ ಚಿಂತೆಗಳಿಂದ ಅನಾರೋಗ್ಯ ಉಂಟಾಗುವ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ.

5.7 ಕೃಷಿ ಕಾರ್ಮಿಕ ಮಹಿಳೆಯರ ಮನೆಗಳಲ್ಲಿ ಪ್ರತ್ಯೇಕ ಸ್ನಾನದ ಮತ್ತು ಅಡುಗೆ ಮನೆ ವ್ಯವಸ್ಥೆ

85% ರಷ್ಟು ಮಹಿಳೆಯರ ಮನೆಗಳಲ್ಲಿ ವಾಸಿಸುವ ವ್ಯವಸ್ಥೆ ಚೆನ್ನಾಗಿರದೇ ಸ್ನಾನ ಮಾಡುವಂತಹ ಮತ್ತು ಅಡುಗೆ ಮಾಡುವಂತಹ ಸ್ಥಳಗಳು ಒಂದೇ ಆಗಿದ್ದು ಅನಾರೋಗ್ಯಕರ ವಾತಾವರಣವಿರುವುದು ಕಂಡುಬರುತ್ತದೆ.

5.8 ಕೃಷಿ ಕಾರ್ಮಿಕ ಮಹಿಳೆಯರ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ

ಸುವರ್ಣ ಗ್ರಾಮೋದಯ, ಜಲ ನಿರ್ಮಲ,ಸಂಪೂರ್ಣ ಸ್ವಚ್ಛತಾ ಕಾರ್ಯಕ್ರಮ,ನಿರ್ಮಲ ಗ್ರಾಮ ಹೀಗೆ ಹಲವು ಯೋಜನೆಗಳು ಗ್ರಾಮೀಣ ಭಾಗದ ನೈರ್ಮಲೀಕರಣಕ್ಕಾಗಿ ಅನುಷ್ಠಾನಗೊಂಡಿದ್ದರೂ 100% ಕ್ಕೆ 100% ರಷ್ಟು ಮಹಿಳೆಯರು ತಮ್ಮ ಮನೆಗಳಲ್ಲಿ ಶೌಚಾಲಯ ಹೊಂದಿರುವುದಿಲ್ಲ. ಹಾಗೆಯೇ ಗ್ರಾಮದಲ್ಲಿ ಇರುವ ಸಾರ್ವಜನಿಕ ಶೌಚಾಲಯ ವನ್ನೂ ಬಳಸುವುದಿಲ್ಲ.ಕಬ್ಬಿನ ಹೊಲದಲ್ಲಿ,ಬಯಲು ಪ್ರದೇಶದಲ್ಲಿ,ಮಡ್ಡಿಯಲ್ಲಿ,ರಸ್ತೆಯ ಬದಿಗಳನ್ನೇ ಬಹಿರ್ದೆಸೆಯ ಜಾಗವನ್ನಾಗಿ ಮಾಡಿರುವುದು ಅತ್ಯಂತ ಅವಮಾನಕರ ಮತ್ತು ಅನಾರೋಗ್ಯಕರ ಸಂಗತಿಯಾಗಿದೆ.

6.1 ಕುಟುಂಬದ ಆರ್ಥಿಕ ನಿರ್ವಹಣೆಯಲ್ಲಿ ಮಹಿಳೆಯ ಪ್ರತಿಶತ ಪಾಲು

30% ರಷ್ಟು ಮಹಿಳೆಯರು 100% ಕ್ಕೆ 100% ರಷ್ಟು ಅಂದರೆ ಸಂಪೂರ್ಣವಾಗಿ ಮನೆಯ ಆಧಾರ ಸ್ಥಂಬವಾಗಿದ್ದು, ಮನೆಯ ಇತರ ಸದಸ್ಯರಿಗಿಂತ ಇವರ ಆದಾಯವೇ ಅಧಿಕವಾಗಿದ್ದು ಕುಟುಂಬ ನಿರ್ವಹಣೆಯಲ್ಲಿ ಹೆಚ್ಚಿನ ಪಾಲನ್ನು ತೋರಿಸುತ್ತದೆ.

ಹಾಗೆಯೇ ಮಹಿಳೆಯರು 100% ಕ್ಕೆ ನೂರರಷ್ಟು ಒಂದಿಲ್ಲ ಒಂದು ಪ್ರಮಾಣದಲ್ಲಿ ಮನೆಯ ಆರ್ಥಿಕತೆಗೆ ಕಾರಣರಾಗಿದ್ದು ಅವರ ಪಾಲು ಶೂನ್ಯವಾಗಿರುವುದು ಎಲ್ಲಿಯೂ ಕಂಡು ಬರುವುದಿಲ್ಲ.

ಇಲ್ಲಿ ಗಮನಿಸಬೆಕಾದ ಅಂಶವೆಂದರೆ ಮಹಿಳೆ ಪುರುಷನ ಸಮನಾಗಿ ಮತ್ತು ಅವನಿಗಿಂತ ಹೆಚ್ಚು ದುಡಿದರೂ ಸಹಿತ ಅವಳು ಪಡೆಯುವ ಕೂಲಿಯಲ್ಲಿ ತಾರತಮ್ಯವಿರುವುದರಿಂದ ಅವಳು ವಹಿಸುವ ಪಾತ್ರ ಕಡಿಮೆ ಎಂದು ತೋರುತ್ತದೆ. ಅವಳ ದುಡಿಯುವ ಸಮಯವನ್ನು,ಪರಿಶ್ರಮವನ್ನು,ಮಹತ್ವತೆಯನ್ನು ಪರಿಗಣಿಸಿ ಅವಳಿಗೆ ಕೂಲಿ ನೀಡಿದರೆ 100% ಕ್ಕೆ 100% ರಷ್ಟು ಮಹಿಳೆಯರದೇ ಆದಾಯ ಅಧಿಕವಾಗಿ ತೋರುತ್ತದೆ.

6.2 ಕುಟುಂಬದ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಮಹಿಳೆಯ ಪ್ರತಿಶತ ಪಾಲು

ಒಟ್ಟಾರೆ 45% ರಷ್ಟು ಮಹಿಳೆಯರು ಕುಟುಂಬದ ಪ್ರಮುಖ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳುವಲ್ಲಿ 100% ಕ್ಕೆ 100% ರಷ್ಟು ಪ್ರಮುಖ ಪಾತ್ರ ವಹಿಸುವದು ಕಂಡು ಬರುತ್ತದೆ. ಹಾಗೆಯೇ 32.5% ರಷ್ಟು ಮಹಿಳೆಯರು ತಮ್ಮ ದುಡಿತಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲದ ರೀತಿಯಲ್ಲಿ ದುಡಿದಿದ್ದನ್ನು ಬೇರೆಯವರಿಗೆ ಕೊಟ್ಟು ಕೌಟುಂಬಿಕ ವಿಚಾರಗಳಲ್ಲಿಯೂ ಕೂಡ ಯಾವುದೇ ಪಾತ್ರ ವಹಿಸದೇ ಇರುವುದು ಕಂಡುಬರುತ್ತದೆ.ಅಲ್ಲಿ ಅವಳಿಗೆ ಮಾನ್ಯತೆ ಕಡಿಮೆ ಇದ್ದು, ಅವಳ ಇರುವಿಕೆಯನ್ನು ದುಡಿತವನ್ನು ಕೇವಲ ಹಣಕ್ಕಷ್ಟೇ ಸೀಮಿತಗೊಳಿಸಿರುವುದು ಕಂಡುಬರುತ್ತದೆ. ಇಂಥ ಮಹಿಳೆಯರಲ್ಲಿ ಶಿಕ್ಷಣವಿಲ್ಲದೇ ಇರುವುದು ಕಂಡುಬರುವದು ಪ್ರಮುಖ ಅಂಶವಾಗಿದೆ.

6.3 ಕೃಷಿ ಕೆಲಸ ಹೊರತುಪಡಿಸಿ ಮನೆಯಲ್ಲಿ ನಿರ್ವಹಿಸುವ ಕೆಲಸಗಳು.

ಆರ್ಥಿಕವಾಗಿ 10% ರಿಂದ ಹಿಡಿದುಕೊಂಡು 100% ರವರೆಗೆ ಮಹಿಳೆಯರು ತಮ್ಮ ಫಸಲು ಕುಟುಂಬದಲ್ಲಿ ಇರುವುದನ್ನು 6.1 ಕೋಷ್ಟಕದಿಂದ ಕಂಡುಕೊಂಡಿದ್ದೇವೆ. ಅಂಥ ಮಹಿಳೆ ಹೊರಗೆ ದುಡಿಯುವುದರ ಜೊತೆಗೆ ಅದಕ್ಕಿಂತಲೂ ಹೆಚ್ಚು ಕೆಲಸವನ್ನು ಕುಟುಂಬದಲ್ಲಿ ನಿರ್ವಹಿಸುವುದು ಕಂಡುಬರುತ್ತದೆ. ಅಡುಗೆ ಮಾಡುವ,ಕಸಮುಸುರೆ ತೊಳೆಯುವ ಬಟ್ಟೆ ತೊಳೆಯುವ ಕೆಲಸಗಳಲ್ಲಿ ಸರಿಸುಮಾರು 85% ಕ್ಕಿಂತಲೂ ಹೆಚ್ಚು ಮಹಿಳೆಯರು ತೊಡಗಿಸಿಕೊಂಡಿರುವುದು ಕಂಡುಬರುತ್ತದೆ.

ಮನೆಯಿಂದ ಹೊರಗೆ ಮಾಡಬಹುದಾದಂತಹ ಆರ್ಥಿಕ ವ್ಯವಹಾರಗಳು,ಸಂತೆ–ಪೇಟೆ, ಮಕ್ಕಳ ಶಾಲೆ,ಆಸ್ಪತ್ರೆಯಂತಹ ಕೆಲಸಗಳಲ್ಲಿ ಮಹಿಳೆ 60% ತನ್ನನ್ನು ತೊಡಗಿಸಿಕೊಂಡಿರುವುದು ಕಂಡುಬರುತ್ತದೆ.

ಉಪಕಸುಬಿಗೆ ಸಂಬಂಧಿಸಿದಂತೆ ದಿನದ 6 ತಾಸು,8 ತಾಸು ದುಡಿಮೆಯ ನಂತರವೂ ಪ್ರತಿನಿತ್ಯ ಸಂಜೆ ದನಕರುಗಳಿಗೆ ಮೇವು ತರುವುದು ಮತ್ತು ಅವುಗಳಿಗೆ ನೀರು ಕುಡಿಸುವ,ಸ್ವಚ್ಛತೆ ಕಾಯುವ ಮೇವು ಉಣಿಸುವ,ಮೈ ತೊಳೆಯುವ,ಹಾಲು ಕರೆಯುವ ಹೀಗೆ ಎಲ್ಲ ಕೆಲಸಗಳೂ ಮಹಿಳೆಯರದ್ದೇ.ಅಲ್ಲಿ ನಾವು 52.5% ರಷ್ಟು ಮಹಿಳೆಯರು ತೊಡಗಿಕೊಂಡಿರುವುದು ಕಂಡು ಬರುತ್ತದೆ.

6.4 ಕೃಷಿ ಕಾರ್ಮಿಕ ಮಹಿಳೆಯರ ಕುರಿತು ಕುಟುಂಬದ ಸದಸ್ಯರ ಪ್ರತಿಕ್ರಿಯೆ

ಮನೆಯ ಒಳಗೂ ಹೊರಗೂ ದುಡಿಯುವ ಮಹಿಳೆಯ ದುಡಿತದ,ಅವಳ ಇರುವಿಕೆಯ ಬಗೆಗೆ ಕುಟುಂಬದವರು ತೋರುವ ಪ್ರತಿಕ್ರಿಯೆ ಬಗ್ಗೆ ಮಾತನಾಡಿದಾಗ 60% ಮಹಿಳೆಯರು ಸಮಾಧಾನಕರವಾಗಿರುವದು ಮತ್ತು 40% ರಷ್ಟು ಮಹಿಳೆಯರಿಗೆ ಮಾನಸಿಕ

ಸಮಸ್ಯೆಗಳು,ಹೊಂದಾಣಿಕೆಯ ಸಮಸ್ಯೆಗಳು,ಮನೆಯಲ್ಲಿ ಗಂಡಂದಿರ ಕುಡಿತ,ಮಕ್ಕಳ ಮೇಲುಸ್ತುವಾರಿಯಿಂದಾಗಿ ಅತ್ಯಂತ ಉಸಿರುಕಟ್ಟಿಸುವ ಜೀವನ ಅವರದಾಗಿರುವುದು ಕಂಡುಬರುತ್ತದೆ.

6.5 ವಿಶ್ಲೇಷಣೆ : ಸಮೀಕ್ಷೆ ಪ್ರಶ್ನೆ ಸಂಖ್ಯೆ:

ಮಹಿಳೆಯ ದುಡಿತದ ಬಗ್ಗೆ ಸಂದರ್ಶಿತರಿಂದ ಅಭಿಪ್ರಾಯ ಸಂಗ್ರಹಿಸಿದಂತೆ–

- ಬದುಕು ಬಡತನ ಅನಿಯಾರ್ಯತೆಗಾಗಿಯೇ ಎಲ್ಲ ಮಹಿಳೆಯರು ದುಡಿಯುವುದು ಕಂಡು ಬರುತ್ತದೆ.
- ಈ ದುಡಿತದಿಂದಾಗಿ ಬದುಕು ನಡೆಯುತ್ತದೆ ಅಷ್ಟೇ.ಯಾವುದೇ ಹೊಸ ಬದಲಾವಣೆಗಳು ಕಂಡುಬರುವುದಿಲ್ಲ.
- ಈ ಬದುಕಿನಲ್ಲಿ ಪರಿಶ್ರಮ ಕಾಠಿಣ್ಯತೆ ಹೆಚ್ಚು.
- ಅನಕ್ಷರತೆಯಿಂದಾಗಿಯೇ ಇಂಥ ಕೆಲಸಗಳಲ್ಲಿ ದುಡಿಯಬೇಕಾಗುತ್ತದೆ.
- ಕೂಲಿಯ ವಿಷಯದಲ್ಲಿ ತಾರತಮ್ಯವಿರುವ ಬಗ್ಗೆ ಬೇಸರ.
- ಮಹಿಳೆಯರಿಗೆ ಆಸರೆ ಭದ್ರತೆ ಇರದಿರುವುದು.
- ಗಂಡಂದಿರ ಮಧ್ಯಪಾನ ಚಟದಿಂದಾಗಿ ತಾವು ದುಡಿದ ದುಡ್ಡಿಗೂ ಭದ್ರತೆ ಇರದಿರುವಂತಹ ಅಂಶಗಳು ಕಂಡುಬರುತ್ತವೆ.

ಸಮುದಾಯ–ಸರಕಾರ– ಸಮಾಜ ಕಾರ್ಯದ
ಪಾಲ್ಗೊಳ್ಳುವಿಕೆ ಮತ್ತು ಜವಾಬ್ದಾರಿಗಳು
ಮತ್ತು
ಸಲಹೆಗಳು

01. ಸಾಕ್ಷರತೆಯ ಕಾರ್ಯಕ್ರಮಗಳು ಅತ್ಯಂತ ಫಲಕಾರಿಯಾಗುವಂತೆ ಸರಕಾರ ಮಾಡಬೇಕು.

02. ಮಹಿಳೆಯರು ತಮ್ಮ ಕೆಲಸದ ನಂತರವೂ ರಾತ್ರಿ ಶಾಲೆಗಳಿಗೆ ಹಾಜರಾಗುವಂತೆ ವ್ಯವಸ್ಥೆ, ಯೋಜನೆ ಮಾಡುವುದು.

03. ಶಿಕ್ಷಣ ಇಲಾಖೆಯಿಂದ "ಮಕ್ಕಳಿಂದ – ಪೋಷಕರಿಗೆ" ಕಲಿಸುವ ಯೋಜನೆಯು ಬರೀ ದಾಖಲೆ, ವರದಿಗಳಿಗೆ ಮೀಸಲಾಗಿರುವಂತೆ ಮಾಡದೇ ಪರಿಣಾಮಕಾರಿಯಾಗಿ ನಡೆಯುವಂತೆ ಆಯೋಜನೆ ಮಾಡಬೇಕು.

04. ಸಾಕ್ಷರತೆಯ ಅವಶ್ಯಕತೆ, ಮಹತ್ವ ಅರಿವಾಗುವಂತೆ ಸರಕಾರದ ಎಲ್ಲ ಇಲಾಖೆಗಳು ಮತ್ತು ಸಂಘ ಸಂಸ್ಥೆಗಳು ಇನ್ನೂ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು.

05. ಮಕ್ಕಳನ್ನು, ವೃದ್ಧರನ್ನು ನೋಡಿಕೊಳ್ಳಲು ಸಾಮೂಹಿಕವಾದಂತಹ ಆರೋಗ್ಯ ಶಾಲೆಗಳು, ಸಾಂತ್ವನ ಕೇಂದ್ರಗಳು ನಿರ್ಮಾಣವಾಗಬೇಕು.

06. ಅಪ್ರಾಪ್ತ ಹೆಣ್ಣುಮಕ್ಕಳ ಮದುವೆಯ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಜಾರಿಗೊಳ್ಳಬೇಕು.

07. ಪೋಷಕರಲ್ಲಿ, ಜನರಲ್ಲಿ ಸರಿಯಾದ ವಯಸ್ಸಿಗೆ ಮದುವೆ ಮಾಡುವ ಕುರಿತು ಜಾಗೃತಿ ಮಾಡಿಸುವ ಕಾರ್ಯಕ್ರಮಗಳಾಗಬೇಕು.

08. ವರದಕ್ಷಿಣೆ ಕೊಡುವ, ತೆಗೆದುಕೊಳ್ಳುವ ಜನರ ಬಗ್ಗೆ ಮಾಹಿತಿ, ಬಾಲ್ಯವಿವಾಹ ಮಾಡುವವರ ಬಗ್ಗೆ ಮಾಹಿತಿ ನೀಡಲು ಗ್ರಾಮ ಗ್ರಾಮಗಳಲ್ಲಿ ಯುವಕ–ಯುವತಿಯರನ್ನೊಳಗೊಂಡ "ಸಮಾಜ ಮುಖಿ" ಸಂಘಟನೆಗಳು ನಿರ್ಮಾಣವಾಗಬೇಕು.

09. ಸ್ವ–ಸಹಾಯ ಸಂಘಗಳಲ್ಲಿ ವರದಕ್ಷಿಣೆ, ಬಾಲ್ಯವಿವಾಹಗಳಂತ ಸಮಸ್ಯೆಗಳ ಕುರಿತು ಜಾಗೃತಿ ಮಾಡುವಂತಹ ಚರ್ಚೆಗಳಾಗುವಂತೆ ಸಮಾಜ ಕಾರ್ಯಕರ್ತರು ಪ್ರೇರೇಪಿಸಬೇಕು.

10. ಸಂಘಟಿತ ವಲಯದ ಕಾರ್ಮಿಕರಿಗಿರುವಂತಹ ವ್ಯವಸ್ಥೆಗಳು, ಸೌಲಭ್ಯಗಳು, ನೀತಿ, ಭದ್ರತೆಗಳು ಕೃಷಿ ಕಾರ್ಮಿಕರಿಗೂ ಅನ್ವಯಿಸುವಂತೆ ಮಾಡಬೇಕು.

11. ಕೃಷಿ ಕಾರ್ಮಿಕ ಮಹಿಳೆಯರಲ್ಲಿ ಒಂದು ಬಲಿಷ್ಠವಾದ ಸಂಘಟನೆಯಾಗುವಂತೆ ಮಹಿಳಾ ಸಂಘಗಳು, ಸರಕಾರ, ಸರಕಾರೇತರ ಸಂಘ ಸಂಸ್ಥೆಗಳು ಯೋಜನೆ ರೂಪಿಸಬೇಕು.

12. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಂತಹ ಕನಿಷ್ಠ ಕೂಲಿ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ಅನುಷ್ಠಾನಗೊಳ್ಳವಂತೆ ಮಾಡಬೇಕು. ಇಂಥ ಯೋಜನೆಗಳ ಸಮರ್ಪಕ ಬಳಕೆಗೆ ಗ್ರಾಮೀಣಾಭಿವೃದ್ದಿ ಪಂಚಾಯತ್‌ರಾಜ್ ಇಲಾಖೆಯು ಜನರಲ್ಲಿ ಜಾಗೃತಿ ಮೂಡಿಸಬೇಕು.

13. ಮಹಿಳೆಯರಿಗೆ ಹೆಚ್ಚಿನ ಆದಾಯ ತರುವಂತಹ ಕೃಷಿ ಆಧಾರಿತ ಉಪಕಸಬುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳವಂತೆ ಮಾಹಿತಿ ಮತ್ತು ತರಬೇತಿ ನೀಡುವ ಶಿಬಿರಗಳು ನಡೆಯಬೇಕು.

14. ಕೃಷಿ ಇಲಾಖೆಯಿಂದ ನಡೆಯುವ ಸ್ವಯಂ-ಉದ್ಯೋಗಗಳಲ್ಲಿ ಮಹಿಳೆಯರು ಪರಿಣಾಮಕಾರಿಯಾಗಿ ತೊಡಗಿಕೊಳ್ಳುವಂತೆ ಸಹಾಯ ಬೆಂಬಲ ನೀಡಬೇಕು.

15. ಕೃಷಿಗೆ ಸಂಬಂಧಿಸಿದಂತೆ ಸಂಸ್ಕರಣಾ ಕೆಲಸಗಳಲ್ಲಿ ಅಂದರೆ ಬಿತ್ತನೆ ಬೀಜ ತಯಾರಿಸುವಂತಹ ಬೆಳೆದ ಬೆಳೆಯನ್ನು ಸಂಸ್ಕರಿಸಿ ಬಳಸಲು ಯೋಗ್ಯರೀತಿಯಲ್ಲಿ ಇರುವಂತೆ ಮಾಡುವ ಕ್ರಿಯೆಗಳು ವೈಜ್ಞಾನಿಕವಾಗಿ ಮತ್ತು ಆದಾಯ ಬರುವ ನಿಟ್ಟಿನಲ್ಲಿ ವಿಶೇಷವಾದ ತಜ್ಞತೆಯನ್ನುಮಹಿಳೆಯರಲ್ಲಿ ಬೆಳೆಸಬೇಕು.

16. ಮಳೆ ಇರದ ದಿನಗಳಲ್ಲಿ ಗ್ರಾಮದ ಮಹಿಳೆಯರು ವಲಸೆ ಹೋಗದಂತೆ ತಡೆಯಲು ಗ್ರಾಮ ಆಧಾರಿತ ಆದಾಯ ಉತ್ಪನ್ನಕರ ಚಟುವಟಿಕೆಗಳನ್ನು ಸರಕಾರ ಮತ್ತು ಸಂಘ ಸಂಸ್ಥೆಗಳು ಪ್ರಾರಂಭಿಸಬೇಕು.

17. ವೇತನದಲ್ಲಿ/ಕೂಲಿಯಲ್ಲಿ ಆಗುವ ತಾರತಮ್ಯ ಹೋಗಲಾಡಿಸಲು ಕನಿಷ್ಠ ಕೂಲಿ ನೀತಿ ಜಾರಿಯಾಗಬೇಕು.

18. ರಚನೆಯಾದ ಸ್ವ-ಸಹಾಯ ಸಂಘಗಳು ಅತ್ಯಂತ ನಿಷ್ಠತೆಯಿಂದ ಕಾಳಜೀಪೂರ್ವಕವಾಗಿ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಸಮುದಾಯ ಸಂಘಟಿಕರು ಪರಿಶ್ರಮಿಸಬೇಕು.

19. ಮಹಿಳೆಯರನ್ನು ಕಳೆ ತೆಗೆಯುವಂತಹ, ಕಬ್ಬು ಹಚ್ಚುವಂತಹ, ತೆನೆ ಮುರಿಯುವಂತಹ, ಕಲ್ಲು ಆರಿಸುವಂತಹ ಕೆಲಸಗಳಲ್ಲಷ್ಟೆ ತೊಡಗಿಸಿಕೊಳ್ಳದೇ ವೈಜ್ಞಾನಿಕವಾದ, ಬುದ್ದಿಶಕ್ತಿ ಉಪಯೋಗಿಸಿ ಮಾಡುವಂತಹ ಉತ್ತಮ ಆದಾಯ ನೀಡುವಂತಹ, ಬೀಜ ಸಂಸ್ಕರಣೆ, ಎರೆ ಹುಳು ಸಾಕಣೆ, ಸಾವಯವ ಗೊಬ್ಬರ ತಯಾರಿಕೆ, ಆಧುನಿಕ ಹೈನುಗಾರಿಕೆ, ಜಾನುವಾರು ತಳಿ ತಯಾರಿಕೆ, ಯಂತಹ ಕೌಶಲ್ಯ ಪೂರ್ಣ ಕೆಲಸ ಮಾಡುವ ನಿಟ್ಟಿನಲ್ಲಿ ತರಬೇತಿ ನೀಡಿ ಅಣಿಗೊಳಿಸಬೇಕು.

20. ಆರೋಗ್ಯ ಕುರಿತಾದ ವೈಯಕ್ತಿಕ ಸ್ವಚ್ಛತೆ, ನೈರ್ಮಲೀಕರಣ ಕುರಿತ ಮಾಹಿತಿ ಶಿಬಿರಗಳನ್ನು ನಡೆಸಬೇಕು.

21. ಪ್ರತಿ ಗ್ರಾಮಕ್ಕೂ ಒಬ್ಬ ಮಹಿಳಾ ಶಷ್ರೂಶಕಿ ಇರುವಂತೆ ಸರಕಾರ ಯೋಜಿಸಬೇಕು.

22. 90% ರಷ್ಟು ಸರಕಾರದ ವಸತಿ ಯೋಜನೆಗಳು ಜಾತಿಯಾಧಾರದ ಮೇಲೆ ಅನುಷ್ಠಾನಗೊಳ್ಳುತ್ತವೆ. ಅವು ಬಡತನವನ್ನು ಜಾತಿಯಾಧಾರದ ಮೇಲೆ ಮಾಪನ ಮಾಡದೇ ನೈಜ ಆರ್ಥಿಕ ಪರಿಸ್ಥಿತಿಯ ಮೇಲೆ ಮಾಪನ ಮಾಡುವಂತಾಗಬೇಕು.

23. ಸರಕಾರವೂ ಬಡತನ ರೇಖೆಯ ವಾರ್ಷಿಕ ಮಾಪನಾ ಆದಾಯವನ್ನು ಈಗಿರುವ ರೂ 11,800 ಬದಲಾಗಿ 30,000 ರೂ ಗಳಿಂದ 50,000 ರೂ ಗಳಿಗೆ ಏರಿಸಬೇಕು.

24. ಗ್ರಾಮೀಣಾಭಿವೃದ್ಧಿ ಯೋಜನೆಗಳ ಹಂಚಿಕೆ ಮತ್ತು ಅನುಷ್ಠಾನ ಪ್ರಾಮಾಣಿಕವಾಗಿರಬೇಕು.

25. ಒಂದೇ ಕೋಣೆಯಲ್ಲಿ ಜೀವನ ನಡೆಸುತ್ತಿರುವ ಕುಟುಂಬಗಳಿಗೆ ಪ್ರತ್ಯೇಕ ಅಡುಗೆ ಮನೆ ಮತ್ತು ಸ್ನಾನ ಗೃಹ ಕಟ್ಟಿಸಿಕೊಳ್ಳಲು ಪ್ರೋತ್ಸಾಹ ಧನ ನೀಡಬೇಕು.

26. ಶೌಚಾಲಯ ನಿರ್ಮಾಣ ಮಾಡಿಕೊಳ್ಳುವಲ್ಲಿ ಸರಕಾರ ನಿಗದಿಪಡಿಸಿರುವ ಪ್ರೋತ್ಸಾಹ ಧನ 2,200 ರೂಗಳನ್ನು 5,000 ರೂಗಳವರೆಗೆ ಹೆಚ್ಚಿಸಬೇಕು.

27. ಅನಾರೋಗ್ಯಕರ ಬಹಿರ್ದೆಸೆಯ ಪದ್ದತಿಯಿಂದ ಉಂಟಾಗುವ ಆರೋಗ್ಯದ ಸಮಸ್ಯೆಗಳ ಕುರಿತು ಜಾಗೃತಿ ಆಂದೋಲನ, ಅಭಿಯಾನಗಳು ನಡೆಯಬೇಕು.

28. ಮಹಿಳೆಯ ದುಡಿತ, ಅವಳ ಆರೋಗ್ಯ, ಮಾನಸಿಕ ಸ್ವಾಸ್ಥ್ಯದ ಕುರಿತು ಕುಟುಂಬದ ಸದಸ್ಯರಲ್ಲಿ ಸದಭಿಪ್ರಾಯ ನಿರ್ಮಾಣವಾಗುವಂತೆ ಸಾಮಾಜಿಕ ಶಿಕ್ಷಣ ಕೌಟುಂಬಿಕ ಸಲಹಾ ಕಾರ್ಯಕ್ರಮಗಳು ಪ್ರಾರಂಭವಾಗಬೇಕು.

ಭವಿಷ್ಯದಲ್ಲಿ ಸಂಶೋಧನೆ ಕೈಗೊಳ್ಳಬಹುದಾದ ವಿಷಯಗಳು.

01. ಕೃಷಿ ಕಾರ್ಮಿಕ ಮಹಿಳೆಯ ಕುಟುಂಬದ ಮೇಲೆ ಮಧ್ಯಪಾನದ ದುಷ್ಪರಿಣಾಮ.

02. ಗ್ರಾಮೀಣ ಅಭಿವೃದ್ಧಿ ಯೋಜನೆಗಳು ಮತ್ತು ಮಹಿಳಾ ಅಭಿವೃದ್ಧಿ.

03. ಕೃಷಿ ಮತ್ತು ಮಹಿಳೆ.

ಅನುಬಂಧಗಳು

01. ಕೋಷ್ಟಕಗಳ ಯಾದಿ

02. ಸಮೀಕ್ಷಾ ಪ್ರಶ್ನಾವಳಿ ಅನುಸೂಚಿ

03. ನಕ್ಷೆಗಳು

04. ಛಾಯಾ ಚಿತ್ರಗಳು

05. ಗ್ರಂಥ ಋಣ

ಕೋಷ್ಟಕಗಳ ಯಾದಿ

ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ
ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸಾದರ ಪಡಿಸಿರುವ

ಸಂಶೋಧನಾ ಸಂಪ್ರಬಂಧದ

ಪ್ರಶ್ನಾವಳಿ ಅನುಸೂಚಿ

I: ಸಾಮಾನ್ಯ ಮಾಹಿತಿಗಳು.

01. ಸಂದರ್ಶಿತರ ಹೆಸರು : ----------
02. ವಿಳಾಸ : ----------
03. ವಯಸ್ಸು : ----------
04. ಶಿಕ್ಷಣ : ----------
05. ಧರ್ಮ : ----------
06. ವೈವಾಹಿಕ ಸ್ಥಿತಿಗತಿ : ----------
07. ಕುಟುಂಬದ ನಮೂನೆ : ----------
08. ಭಾಷೆ : ----------
09. ಜಾತಿ/ವರ್ಗ : ----------

II : ಸಾಮಾಜಿಕ ಸ್ಥಿತಿ ಗತಿ :

01. ನಿಮ್ಮ ಕುಟುಂಬದಲ್ಲಿ ಹೆಣ್ಣುಮಕ್ಕಳ ಅಂದಾಜು ಮದುವೆಯ ವಯಸ್ಸು ಎಷ್ಟು?
02. ನಿಮ್ಮ ಕುಟುಂಬದಲ್ಲಿ ಇಂದಿಗೂ ವರದಕ್ಷಿಣೆ ಕೊಡುವ ತೆಗೆದುಕೊಳ್ಳುವ ಪದ್ಧತಿ ಇದೆಯೆ?
03. ನೀವು ಹೊಲಗಳಲ್ಲಿ ಕೆಲಸ ಮಾಡುವಾಗ ಜೊತೆಯಲ್ಲಿ ಕೆಲಸ ಮಾಡುವ ಪುರುಷ ಕಾರ್ಮಿಕರಿಂದ ತೊಂದರೆಯಾಗುತ್ತದೆಯೇ ?
04. ಕೆಲಸ ಮಾಡುವ ಹೊಲದ ಮಾಲೀಕರಿಂದ ತೊಂದರೆಯಾಗುತ್ತದೆಯೇ ?
05. ಹೌದಾದರೆ ಯಾವ ರೀತಿ.

1	ಲೈಂಗಿಕವಾಗಿ	
2	ಮಾನಸಿಕವಾಗಿ	
3	ಕೂಲಿ ನೀಡದಿರುವುದು	
4	ಕೂಲಿ ನೀಡಲು ಸತಾಯಿಸುವುದು	
5	ಹೆಚ್ಚು ಹೆಚ್ಚು ಕೆಲಸ ನೀಡುವುದು	
6	ಇತರೆ	

III: ಆರ್ಥಿಕ ಸ್ಥಿತಿ ಗತಿ :

01. ನೀವು ಮಾಡುತ್ತಿರುವ ವೃತ್ತಿ :

1	ಕೃಷಿ	
2	ಕೃಷಿ ಕಾರ್ಮಿಕ	
3	ಉಪ ಕಸಬು	
4	ಇತರೆ	

02. ನೀವು ಹೊಲದಲ್ಲಿ ಯಾವ ರೀತಿಯ ಕೆಲಸ ಮಾಡುತ್ತೀರಿ?

03. ನೀವು ದಿನದಲ್ಲಿ ಎಷ್ಟು ತಾಸು ದುಡಿಯುತ್ತೀರಿ ?

04. ನಿಮ್ಮ ವೃತ್ತಿಯಿಂದ ನೀವು ಪ್ರತಿದಿನ ಪಡೆಯುವ ಆದಾಯ/ಕೂಲಿ ಎಷ್ಟು?

1	2	3	4	5
ಕೃಷಿ	ಕೃಷಿ ಕಾರ್ಮಿಕ	ಉಪ ಕಸುಬು	ಇತರೆ	ಒಟ್ಟು

05. ಕೃಷಿ ಕಾರ್ಮಿಕರಾಗಿ ವಾರಕ್ಕೆ ಎಷ್ಟು ದಿನ ದುಡಿಯುತ್ತೀರಿ ?

06. ನೀವು ದುಡಿದಿದ್ದನ್ನು ಮನೆಯಲ್ಲಿ ಯಾರ ಕೈಗೆ ಕೊಡುತ್ತೀರಿ ?

1	ಅತ್ತೆ	
2	ಮಾವ	
3	ಗಂಡ	
4	ಮಗ	
5	ಮಗಳು	
6	ನನ್ನ ಬಳಿಯೇ ಇಟ್ಟುಕೊಳ್ಳುತ್ತೇನೆ	

07. ಬೇರೆಯವರ ಕೈಗೆ ಕೊಡುವುದಾದರೆ ಯಾಕೆ ?

1	ನನಗೆ ತಿಳಿಯುವುದಿಲ್ಲ	
2	ಹೆದರಿಕೆ	
3	ಕುಟುಂಬದ ಸಂಪ್ರದಾಯ	
4	ಅವರೇ ಮನೆ ನಡೆಸುತ್ತಾರೆ	
5	ಇತರೆ	

08. ನೀವು ಪಡೆಯುವ ಕೂಲಿ ಪುರುಷರಿಗಿಂತ ಕಡಿಮೆಯೇ ?----------

09. ಗಂಡಸರು ಪಡೆಯುವ ಕೂಲಿ ಎಷ್ಟು ? ----------

10. ನೀವು ಸರಕಾರದ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಪಾಲ್ಗೊಂಡಿದ್ದೀರಾ ?---

11. ಹೌದಾದರೆ ಅಲ್ಲಿ ನೀವು ದಿನ ಒಂದಕ್ಕೆ ಪಡೆದ ಕೂಲಿ ಎಷ್ಟು ? -----------

13. ನೀವು ಬ್ಯಾಂಕ್ ಖಾತೆ ಹೊಂದಿದ್ದೀರಾ?------------

14. ನೀವು ಸ್ವ-ಸಹಾಯ ಸಂಘದ ಸದಸ್ಯರೇ ?----------

15. ನೀವು ಕೃಷಿ, ಕೃಷಿ ಕೂಲಿ ಕೆಲಸ ಹೊರತು ಪಡಿಸಿ ಇತರೆ ಉಪಕಸಬುಗಳನ್ನೇನಾದರೂ ಮಾಡುತ್ತೀರಾ ?

16. ಹೌದಾದರೆ ಯಾವುದು ?

1	ಹೈನುಗಾರಿಕೆ	
2	ಆಡು ಸಾಕಾಣಿಕೆ	
3	ಎರೆ ಹುಳು ತಯಾರಿಕೆ	
4	ಸಾವಯವ ಗೊಬ್ಬರ ತಯಾರಿಕೆ	
5	ಕೈ ತೋಟ	
6	ಹೂವಿನ ವ್ಯಾಪಾರ	
7	ಮೇವಿನ ವ್ಯಾಪಾರ	
8	ಬಿಜೋತ್ಪಾದನೆ	
9	ಇತರೆ	

IV.01 ಕುಟುಂಬದ ಸದಸ್ಯರ ಶೈಕ್ಷಣಿಕ ಸ್ಥಿತಿ ಗತಿ :

ಅ. ಸಂ	ಹೆಸರು	ಕೃ.ಕಾ.ಮ ಸಂಬಂಧ	ಶೈಕ್ಷಣಿಕ ಮಟ್ಟ	ಅನಕ್ಷರಸ್ಥರಾಗಿದ್ದರೆ ಅನಕ್ಷರತೆಗೆ ಕಾರಣ
		1.1	**1.2**	**1.3**

ಮಾರ್ಗದರ್ಶಿ ಉತ್ತರಗಳು:

1.1	1.2	1.3
1. ಕೃಷಿ ಮಹಿಳೆ	1. ಅಕ್ಷರಸ್ಥ	1. ಬಡತನ
2. ಗಂಡ	2. ಅನಕ್ಷರಸ್ಥ	2. ಕುಟುಂಬದ ಅನಕ್ಷರತೆ
3. ಮಗ	3. ಪ್ರಾಥಮಿಕ	3. ತಿಳುವಳಿಕೆ ಇಲ್ಲ
4. ಮಗಳು	4. ಪ್ರೌಢ	4. ಹೆಣ್ಣು ಮಗಳೆಂಬ ತಾತ್ಸಾರ
5. ಸೊಸೆ	5. ಪಿ.ಯು.ಸಿ	5. ಅನಾರೋಗ್ಯ
6. ಮೊಮ್ಮಗ	6. ಪದವಿ	6. ಅನಾಸಕ್ತಿ
7. ಮೊಮ್ಮಗಳು	7. ಸ್ನಾತಕೋತ್ತರ	7. ಬಾಲ್ಯವಿವಾಹ
8. ಇತರೆ	8. ವೃತ್ತಿ ತರಬೇತಿ	8. ಇತರೆ
	9. ಇತರೆ	9. ಅನ್ವಯಿಸುವುದಿಲ್ಲ
	10. ಅನ್ವಯಿಸುವುದಿಲ್ಲ	

02. ನೀವು ಸಾಕ್ಷರತಾ ಶಿಕ್ಷಣಕ್ಕೆ (ರಾತ್ರಿ ಶಾಲೆಗೆ) ಹೋಗುತ್ತೀರಾ ?------------

03. ನಿಮಗೆ ಕೃಷಿ ಕುರಿತಾಗಿ ಯಾವುದಾದರೂ ತರಬೇತಿ ಆಗಿದೆಯೇ ? --------

04. ಹೌದಾದರೆ ಯಾವುದರಲ್ಲಿ ?

1	ಹೈನುಗಾರಿಕೆ	
2	ಆಡು ಸಾಕಾಣಿಕೆ	
3	ಬೀಜ ಸಂಸ್ಕರಣಾ ತರಬೇತಿ	
4	ತೋಟಗಾರಿಕೆ	
5	ಆಧುನಿಕ ಕೃಷಿ	
6	ಸ್ವಯಂ – ಉದ್ಯೋಗ	
7	ಅನ್ವಯಿಸುವುದಿಲ್ಲ	
8	ಇತರೆ	

05. ನಿಮಗೆ ಶಿಕ್ಷಣ ಅವಶ್ಯ ಎನಿಸುತ್ತದೆಯೇ ?------------

06. ಹೌದಾದರೆ ಏಕೆ ? ------------

V. ಆರೋಗ್ಯದ ಸ್ಥಿತಿ ಗತಿ :

01. ಉತ್ತಮ/ಪೌಷ್ಟಿಕ ಆಹಾರ ದೊರೆಯುತ್ತದೆಯೇ ?-------

02. ವಿಶ್ರಾಂತಿಯ ಸಮಯ ಎಷ್ಟು ?

ಕೆಲಸದ ಮಧ್ಯ	ಕೆಲಸದ ನಂತರ

03. ನೀವು ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡಿದ್ದೀರಾ? ----------

04. ನಿಮಗೆ ಯಾವುದಾದರೂ ಆರೋಗ್ಯದ ಗಂಭೀರ ಸಮಸ್ಯೆ ಇದೆಯೇ?-------

05. ಹೌದಾದರೆ ಯಾವುದು?

1	ಅಸ್ತಮಾ	
2	ಕ್ಷಯ	
3	ಏಡ್ಸ್	
4	ಲೈಂಗಿಕ, ಗುಹ್ಯ ರೋಗ	
5	ಥೈರಾಯಿಡ್	
6	ಬಿ.ಪಿ	
7	ಸಕ್ಕರೆ ಕಾಯಿಲೆ	

8	ಗರ್ಭಕೋಶಕ್ಕೆ ಸಂಬಂಧಿಸಿದ ಕಾಯಿಲೆ	
9	ಅಂಗವಿಕಲತೆ	
10	ಹೃದಯ ರೋಗ	
11	ಇತರೆ	
12	ಅನ್ವಯಿಸುವುದಿಲ್ಲ	
13	ಅಶಕ್ತತೆ	

06. ಅನಾರೋಗ್ಯದ ದಿನಗಳಲ್ಲೂ ನೀವು ಕೆಲಸಕ್ಕೆ ಹೋಗುತ್ತೀರಾ ? -----------

07. ಹೌದಾದರೆ ಏಕೆ ?

1	ಮನೆ ನಡೆಯುವುದಿಲ್ಲ	
2	ಆಸ್ಪತ್ರೆಗೆ ದುಡ್ಡು ಕೂಡಿಸಲು	
3	ಕೆಲಸ ಹಿಂದೆ ಬಿದ್ದರೆ ಫಸಲಿಗೆ ಸಮಸ್ಯೆ ಆಗಬಹುದು	
4	ಇತರೆ	

08. ನಿಮ್ಮ ಯಜಮಾನರಿಗೆ ಯಾವುದಾದರೂ ಚಟಗಳಿವೆಯಾ?

09. ಹೌದಾದರೆ ಯಾವವು?

1	ಕುಡಿತ	
2	ತಂಬಾಕು	
3	ಕರಿ ತಿನ್ನುವುದು	
4	ಜೂಜು–ಮಟಕಾ	
5	ಲಾಟರಿ	
6	ಇತರೆ	

10. ನೀವು ಆರೋಗ್ಯದ ಬಗ್ಗೆ ಯಾವುದಾದರೂ ತಿಳುವಳಿಕೆ ಕಾರ್ಯಕ್ರಮಕ್ಕೆ ಹಾಜರಾಗಿದ್ದೀರಾ ?

11. ಪ್ರತ್ಯೇಕ ಅಡುಗೆ ಮನೆ ಇದೆಯೇ ? ------------

12. ಪ್ರತೇಕ ಸ್ನಾನದ ಮನೆ ಇದೆಯೇ ? ------------

13. ನೀವು ಬಹಿರ್ದೆಸೆಗೆ ಉಪಯೋಗಿಸುವ ಪದ್ಧತಿ.----------

VI. ಕುಟುಂಬ ನಿರ್ವಹಣೆ :

01. ನಿಮ್ಮ ಕುಟುಂಬದ ನಿರ್ವಹಣೆಯಲ್ಲಿ ಆರ್ಥಿಕವಾಗಿ ಸದಸ್ಯರು ಹಾಕುವ ಪ್ರತಿಶತ ಪಾಲು/ವಂತಿಗೆ.

1	ಕೃ. ಕಾ. ಮಹಿಳೆ	
2	ಗಂಡ	
3	ಮಗ	
4	ಸೊಸೆ	
5	ಮಗಳು	

02. ನಿರ್ಧಾರ ತೆಗೆದುಕೊಳ್ಳುವಾಗ.

1	ಕೃ. ಕಾ. ಮಹಿಳೆ	
2	ಗಂಡ	
3	ಮಗ	
4	ಸೊಸೆ	
5	ಮಗಳು	

03. ನೀವು ಮನೆಯಲ್ಲಿ ಕೃಷಿ ಕೆಲಸ ಹೊರತುಪಡಿಸಿ ಮತ್ತಿನ್ನೇನು ಮಾಡುತ್ತೀರಿ ?

1	ಅಡುಗೆ	
2	ನೀರು ತರುವುದು	
3	ಉರುವಲು ತರುವುದು	
4	ಸಂತೆ – ಪೇಟೆ	
5	ಮಕ್ಕಳನ್ನು ಶಾಲೆಗೆ/ಆಸ್ಪತ್ರೆಗೆ ಕರೆದೊಯ್ಯುವದು	
6	ಮನೆಯ ಕಸ–ಮುಸುರೆ	
7	ಬಟ್ಟೆ ತೊಳೆಯುವುದು	
8	ಮೇಲಿನ ಎಲ್ಲವೂ	
9	ಇತರೆ	

04. ಇಷ್ಟೆಲ್ಲ ಕೆಲಸ ಮಾಡುವ ನಿಮಗೆ ನಿಮ್ಮ ಕುಟುಂಬದಿಂದ ಸಿಗುವ ಪ್ರತಿಕ್ರಿಯ ಹೇಗಿದೆ?

1	ಅತ್ಯುತ್ತಮ	
2	ಸಮಾಧಾನಕರವಾಗಿದೆ	
3	ಬೇಸರ ತರಿಸುತ್ತದೆ	
4	ಸಾಯಬೇಕೆನಿಸುತ್ತದೆ	
5	ಇತರೆ	

05. ಮಹಿಳೆಯ ಈ ದುಡಿತದ ಬಗ್ಗೆ ವೈಯಕ್ತಿಕವಾಗಿ ನಿಮಗಿರುವ ಅನಿಸಿಕೆಗಳು.


ದಿನಾಂಕ:

ಸ್ಥಳ :

ಕೃಷಿ ಕಾರ್ಮಿಕ ಮಹಿಳೆಯ ಸಹಿ

ನಕ್ಷೆಗಳು

ನಕ್ಷೆಗಳು



KARNATAKA
Bidar
Gulbarga
Bijapur
Bagalkot
Raichur
Belgaum
Dharwad
Koppal
Gadag
Bellary
Uttara Kannada
Haveri
T - Tumkur
Davanagere
T
Shimoga
Chitradurga
Kolar
Udupi
Chikmagalur
Tumkur
Bangalore
Hassan
Dakshina Kannada
Mandya
Bangalore Rural
Kodagu
Mysore
Chamarajanagar

ನಕ್ಷೆಗಳು


KARNATAKA
Bidar
Gulbarga
Bijapur
Bagalkot
Raichur
Belgaum
Dharwad
Koppal
Gadag
Bellary
Uttara Kannada
Haveri
T - Tumkur
Davanagere
T
Shimoga
Chitradurga
Kolar
Udupi
Chikmagalur
Tumkur
Bangalore
Hassan
Dakshina Kannada
Mandya
Bangalore Rural
Kodagu
Mysore
Chamarajanagar




BELAGAAVI
District Map
MAHARASHTRA
Shirur
Gundevadi
Navalihal
Athni
Halhalli
Kagvad
Karadge
Arkali
Koligud
Chikodi
Nipani
Gurlapur
Bagalkot
Hukeri
Ghatprabha
Yadawad
Ghatprabha
Panchgaon
Honga
Suldhal
Satugeri
Ramdurg
BELAGAAVI
Bail Hongal
Malprabha
Holand
Lingadhalli
Khauapur
Hanbur
Halsi
GOA
NH-4
NH-4A
Dharwar
Uttara Kannada
Map not to Scale
Copyright © 2007 Compare Infobase Limited
LEGEND
State Boundary
District Boundary
National Highway
Major Road
Railway
District Headquarter
Major Town
Other Town
River
N


ಅಥಣಿ ತಾಲೂಕ
ಬೆಳಗಾಂವ ಜಿಲ್ಲೆ
ಕರ್ನಾಟಕ ರಾಜ್ಯ
ವಿಷಯ ಸೂಚಿ
ತಾಲೂಕ ಸ್ಥಳ
ಗ್ರಾಮ
ರೇಲ್ವೆ
ರಹದಾರಿ
ನದಿ - ಹಳ್ಳಗಳು
ತಾಲೂಕ ಮೇರೆ
ಅಥಣಿ

ಛಾಯಾ ಚಿತ್ರಗಳು

ಛಾಯಾ ಚಿತ್ರಗಳು

01.ನಾಡಿನ ಬೇರೆ ಬೇರೆ ಭಾಗಗಳಲ್ಲಿ ಕೃಷಿಗೆ ಸಂಬಂಧಿಸಿದ ವಿವಿಧ ಕೆಲಸಗಳಲ್ಲಿ ತೊಡಗಿದ ಮಹಿಳೆಯರು.







02.ಕಸ ತೆಗೆಯುವುದರಲ್ಲಿ ನಿರತಳಾದ ಮಹಿಳೆ.



03.ಕಸ ತೆಗೆಯುವುದರಲ್ಲಿ ನಿರತರಾದ ಮಹಿಳೆಯರ ಜೊತೆಗೆ ಕಸ ತೆಗೆಯುತ್ತಿರುವ 07 ವರ್ಷದ ಹೆಣ್ಣು ಮಗು.



02.ಕಸ ತೆಗೆಯುವುದರಲ್ಲಿ ನಿರತಳಾದ ಮಹಿಳೆ.



03.ಕಸ ತೆಗೆಯುವುದರಲ್ಲಿ ನಿರತರಾದ ಮಹಿಳೆಯರ ಜೊತೆಗೆ ಕಸ ತೆಗೆಯುತ್ತಿರುವ 07 ವರ್ಷದ ಹೆಣ್ಣು ಮಗು.



04. ದನ ಕರುಗಳಿಗೆ ಮೇವು ಮಾಡುವುದರಲ್ಲಿ ನಿರತರಾಗಿರುವುದು



05. ಕಬ್ಬಿನ ಕಳಗಿ ಹಿರಿಯುವ ಕೆಲಸದಲ್ಲಿ ನಿರತಳಾಗಿರುವುದು.



06. ದ್ರಾಕ್ಷಿಯಲ್ಲಿ ಬಣ್ಣ ಹಚ್ಚುತ್ತಿರುವ ಮಹಿಳೆಯರು



07. ಕಾಳು ಹಾಕುತ್ತಿರುವ(ಬೀಜ ಬಿತ್ತುವುದು) ಮಹಿಳೆಯರು



08. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸ್ವಚ್ಛತಾ ಕೆಲಸದಲ್ಲಿ ನಿರತರಾಗಿರುವುದು.



09. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆರೆಯ ಹೂಳು ತೆಗೆಯುವ ಕೆಲಸದಲ್ಲಿ ನಿರತರಾಗಿರುವುದು.



10. ಹೊಲದ ಕೆಲಸದ ಮಧ್ಯ ದಣಿವಾರಿಸಿಕೊಳ್ಳುತ್ತಿರುವದು.



11. ಕೃಷಿ ಕಾರ್ಮಿಕ ಮಹಿಳೆಯರೊಂದಿಗೆ ಗುಂಪು ಚರ್ಚೆ



12. ಕೂಲಿ ಕೆಲಸ ಮುಗಿಸಿಕೊಂಡು ದನ ಕರುಗಳ ಮೇವಿನೊಂದಿಗೆ ಮನೆಗೆ ಮರಳತ್ತಿರುವದು



13. ಕೂಲಿಯಿಂದ ಮರಳುವ ತಾಯಿಯ ಬರುವಿಕೆಗಾಗಿ ಪುಟ್ಟ ತಮ್ಮನೊಂದಿಗೆ ಶಾಲೆ ಮುಗಿಸಿ ಕೀಲಿ ಹಾಕಿದ ಮನೆಯ ಮುಂದೆ ಕಾಯುತ್ತಿರುವ ಮಕ್ಕಳು.



ಆ) ಲೇಖನಗಳು

01. ಮಂದಾಕಿನಿ:	ಪಂಚಾಯ್ತಿಯಲ್ಲಿ ಮಹಿಳೆಯರು ಮತ್ತು ಸಬಲೀಕರಣ'
02. ಸುಚೇತನಾ ನಾಯ್ಕ್:	ಎಲ್ಲಿದೆಯೇ ನ್ಯಾಯ–15-03-08
03. ಇನ್ವೆಸ್ಟ್ ಇಂಡಿಯಾ ಇನ್‌ಕಮ್ಸ್ ಆಂಡ್ ಸೇವಿಂಗ್ ಸರ್ವೆ–2007:	ಉದ್ಯೋಗ ಆಯ್ಕೆಯಲ್ಲ ಅವಶ್ಯಕತೆ 22-03-2008
04. ವಸಂತ ನಾಡಿಗೇರ:	ಮಹಿಳಾ ಮಣಿಗಳು–08-06-2009
05. ಡಾ: ಎಸ್ ಎ ಪಾಟೀಲ:	ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ
06. ಡಾ: ಎಂ ವಿ ಶ್ರೀನಿವಾಸಗೌಡ:	ಕೃಷಿ ಕಾರ್ಮಿಕರ ಆರ್ಥಿಕ ಸ್ಥಿತಿಗತಿ
07. ಕೆ.ಶಿವಚಿತ್ತಪ್ಪ:	ಗ್ರಾಮೀಣ ಕೃಷಿ ಅಭಿವೃದ್ಧಿಯಲ್ಲಿ ಮಹಿಳಾ ಕಾರ್ಮಿಕರ ಸಮಸ್ಯೆಗಳು
08. ಸಿದ್ದಗಂಗಮ್ಮ:	ಕೃಷಿ ಮತ್ತು ಮಹಿಳೆ
09. ಕೆ.ಶಿವಚಿತ್ತಪ್ಪ:	ಗ್ರಾಮೀಣ ಕೃಷಿ ಅಭಿವೃದ್ಧಿಯಲ್ಲಿ ಮಹಿಳಾ ಕಾರ್ಮಿಕರ ಸಮಸ್ಯೆಗಳು
10. ಕೆ.ಜಿ.ಗಾಯತ್ರಿದೇವಿ:	ಕೃಷಿ,ಗ್ರಾಮೀಣ ಸಮಾಜ ಮತ್ತು ಮಹಿಳೆ

ಇ) ವರದಿಗಳು

01. ಕರ್ನಾಟಕ ಮಾನವಾಭಿವೃದ್ಧಿ ವರದಿ–2005

02. ಇನ್ವೆಸ್ಟ್ ಇಂಡಿಯಾ ಇನ್‌ಕಮ್ಸ್ ಆಂಡ್ ಸೇವಿಂಗ್ ಸರ್ವೆ– 2007

ಈ) ನಿಯತಕಾಲಿಕೆಗಳು

01. ಯೋಜನಾ

02. LEISA INDIA-A Magazine on Low External Input Sustainable Agriculture

03. ಪ್ರಜಾ ವಾಣಿ

04. ವಿಜಯ ಕರ್ನಾಟಕ

ಉ) ಪರಾಮರ್ಶನ ಗ್ರಂಥಗಳು

01.ಅನುರಾಧಾ ಶರ್ಮಾ (1998): ಎನ್ಸೈಕ್ಲೋಪಿಡಿಯಾ ಆಫ್ ಇಂಡಿಯನ್ ವಿಮೆನ್.

02.ರಾಜ್ ಕುಮಾರ್ ಪೃಥ್ವಿ, ರಾಮೇಶ್ವರಿ ದೇವಿ ಅಂಡ್ ರೊಮಿಳಾ ಪೃಥ್ವಿ (2001): ಎಜ್ಯುಕೇಷನ್, ಎಂಪ್ಲಾಯ್ಮೆಂಟ್ ಅಂಡ್ ಎಂಪವರ್ಮೆಂಟ್ ಆಫ್ ವಿಮೆನ್ಸ್", ಮಂಗಳ ದೋಪಾ ಪಬ್ಲಿಕೇಷನ್ಸ್, ಜೈಪುರ

03.ಸುಧೀರ್.ಎಂ.ಎ. ಅಂಡ್ ಬಾಲಕೃಷ್ಣಾ.ಎ (2002): ಎಂಪವರ್ಮೆಂಟ್ ಆಫ್ ರೂರಲ್ ವಿಮೆನ್ ಲೇಖರ್ ಫೋಸ್ಸ್, ಅನ್ಮೋಲ್, ನ್ಯೂ ದೆಲ್ಲಿ

04.ಅರುಣ್ ಕುಮಾರ್ (2002): ಎಂಪವರಿಂಗ್ ವಿಮೆನ್,ಸರುಪ್, ನ್ಯೂ ದೆಲ್ಲಿ

05.ಇಂದೂ ಗ್ರೋವರ್ ಅಂಡ್ ದೀಪಕ್: ಗ್ರೋವರ್ (2002): ಎಂಪವರ್ಮೆಂಟ್ ಆಫ್ ವಿಮೆನ್, ಆಗ್ರೋಟೆಕ್, ಉದಯ್ಪುರ

06.ಸುಜಿತ್ ಕುಮಾರ್ ದತ್ತಾ ಅಂಡ್ ದಿಲೀಪ್ ಕುಮಾರ್ ಘೋಷ್ (2002): ಎಂಪವರಿಂಗ್ ಆಫ್ ರೂರಲ್ ವಿಮೆನ್, ಆಕಾಂಕ್ಷ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ

07.ಆಶಾ ಮುಖರ್ಜಿ ಮತ್ತು ಕುಂಕುಂ ಭಟ್ಟಾಚಾರ್ಯ (2003): ಕಂಡೀಷನಿಂಗ್ ಅಂಡ್ ಎಂಪವರ್ಮೆಂಟ್ ಆಫ್ ವಿಮೆನ್,ಎ ಮಲ್ಟಿಮೆನ್ಷನಲ್ ಅಪ್ರೋಚ್, ಗ್ಯಾನ್ ಪಬ್ಲಿಕೇಷನ್, ನ್ಯೂ ದೆಲ್ಲಿ.

08. ಆಶಿನೆರಾಯ್ (2003): ಡೆವೆಲಪ್ಮೆಂಟ್ ಆಫ್ ವಿಮೆನ್, ಆನ್ ಅಸೆಸ್ಮೆಂಟ್, ರಜತ್ ಪಬ್ಲಿಕೇಷನ್, ನ್ಯೂ ದೆಲ್ಲಿ

09.ಅರುಣಾ. ಕೆ. ಗೋಯಲ್(2004): ಎಜ್ಯುಕೇಷನ್ಸ್ ಸೋಷಿಯೋ–ಎಕನಾಮಿಕ್ ಫರ್ಸಪೆಕ್ಟೀವಸ್ಸ್ ಆಫ್ ವಿಮೆನ್ ಡೆವೆಲಪ್ ಅಂಡ್ ಎಂಪವರ್ಮೆಂಟ್", ದೀಪ್ ಅಂಡ್ ದೀಪ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ

10.ಅರಣಾ ಗೋಯಲ್(2004): ಆಗ್ರನೈಜೇಷನ್ ಅಂಡ್ ಸ್ಟ್ರಕ್ಚರ್ ಆಫ್ ವಿಮೆನ್ ಡೆವೆಲಪ್ಮೆಂಟ್ ಅಂಡ್ ಎಂಪವರ್ಮೆಂಟ", ದೀಪ್ ಅಂಡ್ ದೀಪ್ ನ್ಯೂ ದೆಲ್ಲಿ

11.ಅರ್ಚನಾ ಘೋಷ್ ಮತ್ತು ಸ್ಟೇಫಾನೀ ತವಾ ಲಾಮಾ–ಕಿವಾಲ್ (2005): ಡೆಮೋರ್ಕಟೈಜೇಷನ್ ಇನ್ ಪ್ರೋಗ್ರೆಸ್ಸ್, ವಿಮೆನ್ ಅಂಡ್ ಲೋಕಲ್ ಪೊಲಿಟಿಕ್ಸ್ ಇನ್ ಅರ್ಬನ್ ಇಂಡಿಯಾ, ತುಳಿಕಾ ಪಬ್ಲಿಕೇಷನ್, ನ್ಯೂ ದೆಲ್ಲಿ

12.ಪ್ರದೀಪ್. ಕೆ. ಚಾಮಿಕ್ (2005): ಎಂಪವರ್ಮೆಂಟ್ ಆಫ್ ರೂರಲ್ ವಿಮೆನ್–ಎ ಸ್ಟಡಿ ಅರ್ಕಸ್ ದ ತ್ರೀ ಸ್ಟೇಟ್ಸ್, ಜಾರ್ಖಂಡ್, ಒರಿಸ್ಸಾ ಅಂಡ್ ವೆಸ್ಟ್ ಬೆಂಗಾಳ್, ಆರ್ ಭಟ್ಟಾಚಾರ್ಯ, ಕೋಲ್ಕತ್ತ

13.ಅನಿಲ್ ಭೂಯಾಲಿ ಮತ್ತು ಸಂಪಾ ಘೋತ್ದ್ದಾರ್ (2005): ಡೆವೆಲಪ್ಮೆಂಟ್ ಆಫ್ ರೂರಲ್ ವಿಮೆನ್ ಥ್ರೋ ಎಜ್ಯುಕೇಷನ್ ಅಂಡ್ ಎಂಪ್ಲಾಯ್ಮೆಂಟ್ ಅಭಿಜಿತ್ ಪಬ್ಲಿಕೇಷನ್, ದೆಲ್ಲಿ

14.ನಿರ್ಮಲ. ಕೆ. ಅಂಡ್ ವಿ.ದುಲಾಶಿ ಬಿರುಂಡ (2005): ಎಂಪವರ್ಮೆಂಟ್ ಆಫ್ ವಿಮೆನ್, ಸೀರಿಯಲ್, ನ್ಯೂ ದೆಲ್ಲಿ

15.ಸೀಮಾ ಶರ್ಮಾ ಅಂಡ್ ಕಾಂತ ಶರ್ಮಾ (2005): ಎನ್ಸೈಕ್ಲೋಪಿಡಿಯಾ ಆಫ್ ಇಂಡಿಯನ್ ವಿಮೆನ್ ಅನ್ಮೋಲ್, ನ್ಯೂ ದೆಲ್ಲಿ

16.ಕೊಟೇಶ್ವರ ರಾವ್.ಎಂ (2005): ಎಂಪವರ್ಮೆಂಟ್ ಆಫ್ ವಿಮೆನ್ ಇನ್ ಇಂಡಿಯಾ,ಡಿಸ್ಕವರಿ, ನ್ಯೂ ದೆಲ್ಲಿ

17.ಶಾಂಭಶಿವಾ ರಾವ್.ಬಿ ಅಂಡ್ ಇಂದಿರಾ ಕುಮಾರಿ ವೈ (2005): ಎಂಪವರ್ಮೆಂಟ್ ಆಫ್ ವಿಮೆನ್ ಅಂಡ್ ರೂರಲ್ ಡೆವೆಲಪ್ಮೆಂಟ್,ಸೀರಿಯಲ್,ನ್ಯೂ ದೆಲ್ಲಿ

18.ರಾವ್,ವಿ.ಎಂ. (2005): ಕೋ–ಆಪರೇಟಿವ್ ಅಂಡ್ ಡ್ಯೆರಿ ಡೆವೆಲಪ್ಮೆಂಟ್–ಚೇಂಜಿಂಗ್ ಡೆಸ್ಟಿನಿ ಆಫ್ ರೂರಲ್ ವಿಮೆನ್, ಮಿತಲ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ

19.ಸಾಮಂತ್,ಆರ್,ಕೆ(2005): ಎಂಪವರಿಂಗ್ ರೂರಲ್ ವಿಮೆನ್, ಇಷ್ಯೂ ಆಪರ್ಚ್ಯುನಿಟೀಸ್ ಅಂಡ್ ಅಪ್ರೋಚಸ್ಸ್, ದ ವಿಮೆನ್ ಪ್ರೆಸ್ಸ್, ದೆಲ್ಲಿ

20. ಅನಿತಾ ಸ್ಟೀಫೆನ್ (2006): ಕಮ್ಯುನಿಕೇಷನ್ ಟೆಕ್ನಾಲಜೀಸ್ ಅಂಡ್ ವಿಮೆನ್ ಎಂಪವರ್ಮೆಂಟ್, ರಜತ್ ಪಬ್ಲಿಕೇಷನ್, ನ್ಯೂ ದೆಲ್ಲಿ

21.ಸುಗುಣಾ.ಬಿ. (2006): ಎಂಪವರ್ಮೆಂಟ್ ಆಫ್ ರೂರಲ್ ವಿಮೆನ್ ಥ್ರೋ ಷಲ್ಪ್ ಹೆಲ್ಪ್ ಗ್ರೂಪ್ಸ್" ಡಿಸ್ಕವರಿ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ

22.ಅಬ್ಬಾ ಜೈನ್ ಮತ್ತು ಶಾಲಿನಿ ಶೇಖಾವತ್: ಅಡ್ಮಿನಿಸ್ಟ್ರೇಷನ್ ಫಾರ್ ಎಂಪವರ್ಮೆಂಟ್ ಅಂಡ್ ವೆಲ್ಫೇರ್ ಆಫ್ ವಿಮೆನ್, ಅಲೇಖ್ ಪಬ್ಲಿಕೇಷನ್ಸ್, ಜೈಪುರ

23.ವಿದ್ಯಾ.ಕೆ.ಸಿ (2007): ಪೊಲಿಟಿಕಲ್ ಎಂಪವರ್ಮೆಂಟ್ ಆಫ್ ವಿಮೆನ್ ಅಟ್ ದ ಗ್ರಾಸ್ರೂಟ್ಸ್, ಕಾನಿಷ್ಕಾ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ

24.ಸುಶ್ಮಾ ಶ್ರೀವತ್ಸವ (2007): ಎನ್ಸೈಕ್ಲೋಪಿಡಿಯಾ ಆಫ್ ವಿಮೆನ್ ಅಂಡ್ ಡೆವೆಲಪ್ಮೆಂಟ್, ಕಾಮನ್ವೆಲ್ತ್ ಪಬ್ಲಿಕೇಷನ್ಸ್, ನ್ಯೂ ದೆಲ್ಲಿ

25.ಗಣೇಶ ಮೂರ್ತಿ.ವಿ.ಎಸ್ (2008): ಎಂಪವರ್ಮೆಂಟ್ ಆಫ್ ವಿಮೆನ್ ಇನ್ ಇಂಡಿಯಾ–ಸೋಷಿಯಲ್,ಎಕನಾಮಿಕ್ ಅಂಡ್ ಪೊಲಿಟಿಕಲ್, ನ್ಯೂ ಸೆಂಚುರಿ ಪಬ್ಲಿಕೇಷನ್, ನ್ಯೂ ದೆಲ್ಲಿ